ಕರ್ನಾಟಕ ಲೋಚನ

ಸಂಪುಟ ೮ ಜೂನ್ ೧೯೯೫ ಸಂಚಿಕೆ ೧

8 – 1

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು-೫೬೦ ೦೧೯

"ಕರ್ನಾಟಕ ಲೋಚನ"

ಲೇಖನಗಳು—ಟಿಪ್ಪಣಿಗಳು

ಸಂಶೋಧನಾತ್ಮಕ,ಪಾಂಡಿತ್ಯ- ವಿದ್ವತ್‌ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು–ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ–ಟಿಪ್ಪಣಿಗಳು–ಇವುಗಳಿಗೆ 'ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

ಲೇಖನಗಳಿಗೆ ಆಹ್ವಾನ

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6–8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿ ಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ–ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ
54, 3ನೇ ಕ್ರಾಸ್, ಗವೀಪುರ ವಿಸ್ತರಣ, ಬೆಂಗಳೂರು-560 019

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ
ಸಹಾಯಕ ಸಂಪಾದಕರು : ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೮ ಜೂನ್ ೧೯೯೫ ಸಂಚಿಕೆ ೧

ಪರಿವಿಡಿ

Karnataka Lochana

Half-Yearly Journal, Published by B. M. Sri Memorial Foundation, 54, 3rd Cross, Gavipuram Extension Bangalore-560 019

Chairman; Editorial Board : *Shri. N. Basavaradhya*
Editor : *Vidwan T. Keshava Bhat*

Vol. VIII July 1995 No. 1

CONTENTS

ಸಮಸ್ಯಾಪೂರಣ

[ವಿದ್ವತ್ಪತ್ರಿಕೆಯಾಗಿರುವ ಈ 'ಕರ್ನಾಟಕ ಲೋಚನ'ದಲ್ಲಿ ಸಂಪುಟ ೬, ಸಂಚಿಕೆ ೧ (ಜೂನ್ ೧೯೯೩) ಮೊದಲ್ಗೊಂಡು, 'ಸಮಸ್ಯಾ ಪೂರಣ' ಎಂಬ ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡಕ್ಕೆ ಅತಿಶಯವೆನಿಸುವ ಛಂದೋಬದ್ಧ ಪದ್ಯರಚನೆಗೆ ಪ್ರೋತ್ಸಾಹ ನೀಡುವ ಉದ್ದೇಶವುಳ್ಳದು. ಪ್ರತಿ ಸಂಚಿಕೆಯಲ್ಲಿಯೂ ಮುಂದಿನ ಸಂಚಿಕೆಗಾಗಿ ಸಮಸ್ಯೆಯನ್ನು ಕೊಡಲಾಗುತ್ತಿದೆ. ಇದುವರೆಗೂ ಕಂದಪದ್ಯವನ್ನೇ ಕೊಟ್ಟದ್ದು, ಈ ಸಂಚಿಕೆಗೆ 'ಇಂದ್ರವಜ್ರ' ಎಂಬ ಸಮವೃತ್ತಪಾದವನ್ನು ಕೊಡಲಾಗಿದೆ. ಸಮಸ್ಯಾವಾಕ್ಯವಿದು—"ಟಂಟಂಟ ಟಂಟಂಟ ಟಟಂಟ ಟಂಟ".]

ಬಂದಿರುವ ಸಮಸ್ಯಾಪೂರ್ತಿ ಪದ್ಯಗಳಿವು–

1. ಮೊಂಟೇಸರೀ ಶಾಲೆಯ ಮಕ್ಕಳೀಗಳ್
ಕುಂಟಾಟಮಂ ಸಂಜೆಯೊಳಾಡುತಿರ್ಪರ್
ಘಂಟಾಸ್ವರಂ ಕೇಳ್ದೊಡನೋಡಿ ಪೋಪರ್
ಟಂಟಂಟ ಟಂಟಂಟ ಟಟಂಟ ಟಂಟಂ

ಶಾಳ್ತಜೆ ರಘುಪತಿ

2. ಎಂಟೊಂದೆರಳ್ಕೆಟ್ಟಲ ಮಾಡವೇರ್ದಂ
ತಾಂಟಿತ್ತು ಚೆಂಬೊಂದುರುಳಲ್ಕೆ ಶಬ್ದಂ
ಉಂಟಾಯ್ತು ವೃತ್ತಂ ಧರೆಗಿಂದ್ರ ವಜ್ರಂ
ಟಂಟಂಟ ಟಂಟಂ ಟಟಟಂಟ ಟಂಟಂ

ಟಿ. ಕೇಶವ ಭಟ್ಟ

3. ಮಲಗಿರುವ ಊರವರಂ ಶಯನದಿಂದೆಚ್ಚರಿಸಲ್ಕೆಂದೇ
ಮಹೋತ್ಸಾಹದಿಂ ಮೆರೆವ ಕುಲದೇವರ ಮೆರೆಸಲ್ಕೆಂದೇ
ಮಾರೀ ಮಸಣಿಯರಂ ತಣಿಸೆ ಶಬ್ದ ಮಾಡಿರ್ಪರವರ್ಸ
ಮೂಹ ಭೇರಿಯಲಿ "ಟಂಟಂಟ ಟಂಟಂಟ ಟಟಂಟ ಟಂಟ" ||

ಸದ್ಯೋಜಾತ ಮೂರ್ತಿ

4. ಗಂಟಲ್‌ಸರಂ ಬಿದ್ದಿರೆ ಮದ್ದುವೇಳ್ವೆಂ
ಶುಂಠೀಕಷಾಯಂಗುಡಿ ಮೂದಿನಂ ನೀಂ
ನಂಟಪ್ಪುದೇರುಂ ದನಿ ಸಿನ್ನದಾಗಳ್
ಟಂ ಟಂ ಟ ಟಂ ಟಂ ಟಟ ಟಂಟ ಟಂ ಟಂ

ಶಾಳ್ತಜೆ ಕೃಷ್ಣಭಟ್ಟ, ವಿದ್ವಾನ್

5. ಕಂಠೀರವಂ ವನ್ಯಮೃಗಂಗಳೀಶಂ
ಕಂಠೀಸರಂ ಸ್ತ್ರೀಜನ ಕಂಠಭೂಷಂ
ಘಂಟಾರವಂ ದೇವಪೂಜಾ ವಿಲಾಸಂ
ಟಂ ಟಂ ಟ ಟಂ ಟಂ ಟ ಟ ಟಂ ಟ ಟಂ ಟಂ

ರಾಜೇಶ್ವರಿ ಜಯಕೃಷ್ಣ

6. ಟಂ ಟಂ ಟ ಟಂ ಟಂ ಟ ಟ ಟಂಟ ಟಂ ಟಂ
ಘಂಟಾಸ್ವರಂ ಕೇಳ್ದಿಯೆ ವತ್ಸ ನೀಂ ಶ್ರೀ
ಕಂಠೇಶನಿಂದಿಷ್ಟವನೊಂದು ಬೇಗಂ
ಎಂಟಂಗದಿಂ ವಂದಿಸು ಭಕ್ತಿಯಿಂದಂ

ವಿದ್ವಾನ್ ಎಸ್. ತಿರುಮಲೇಶ್ವರ ಭಟ್ಟ

7. ಗುಂಟೆರ್ಪುರ್ವಾ ಪೊಂಗೊಡಮಿರ್ದ ಸೊಂಟ
ಕಂಟೊತ್ತಿ ಮುತ್ತೊಂದ ಗೋವಳ ನೀಡೆ
ಟಿಂಟೇರಿ ಗೋಪೀಕಟಿಯಿಂ ಕೊಡಂ ಟ
ಟಂಟಂಟ ಟಂಟಂಟ ಟಟಂಟ ಟಂಟ

ಶ್ರೀಕಾಂತಂ ನಾಗೇಂದ್ರಶಾಸ್ತ್ರಿ

8. ಕೆತ್ತಿದನು ಲೋಹದಲ್ಲಜ್ಞಾತ ಶಿಲ್ಪಿ
ಕಾಡುಹಣ್ಗೊಂಚಲನು ನೋಡಿ ಚತುರ ಜನ
ಜರಿದು ನಗುತಿರಲದನು ಕುಕ್ಕುತಿವೆ ಹಕ್ಕಿ
ಟಂಟಂಟ ಟಂಟಂಟ ಟಟಂಟ ಟಂಟ ||

ಗರ್ಗೇಶ್ವರಿ ವೆಂಕಟಸುಬ್ಬಯ್ಯ

'ಲೋಚನ'ದ ಹಿಂದಿನ ಸಂಚಿಕೆಯಲ್ಲಿ ಭೋಜಪ್ರಬಂಧದ ಪದ್ಯವೊಂದರ ಕೊನೆಯ ಪಾದವನ್ನು ಸಮಸ್ಯೆಯಾಗಿ ಸೂಚಿಸಿದ್ದೆ. ಆ ಶ್ಲೋಕದ ಪೂರ್ಣ ಪಾಠ ಇಂತಿದೆ:

ರಾಜ್ಯಾಭಿಷೇಕೇ ಮದವಿಹ್ವಲಾಯಾ
ಹಸ್ತಚ್ಯುತೋ ಹೇಮಘಟೋ ಯುವತ್ಯಾಃ ।
ಸೋಪಾನಮಾರ್ಗೇಷು ಕರೋತಿ ಶಬ್ದಂ
ಟಂಟಂಟ ಟಂಟಂಟ ಟಟಂಟ ಟಂಟ ॥

ಇದು 11 ಅಕ್ಷರಗಳ ಇಂದ್ರವಜ್ರ ವೃತ್ತದಲ್ಲಿದೆ. ಪ್ರತಿಪಾದದಲ್ಲೂ 18 ಮಾತ್ರೆಗಳಿವೆ. 5+5+4+4 ಮಾತ್ರೆಗಳ ಮಾತ್ರಾವೃತ್ತವೆಂದೂ ತೆಗೆದುಕೊಳ್ಳಬಹುದು. ಹಾಗೆ ಭಾವಿಸಿ, ಮಾಡಿದ ಕನ್ನಡದ ಅನುವಾದ:

ರಾಜ್ಯಾಭಿಷೇಕದಲಿ ಮಧುಮತ್ತಳಾದ
ಸುಂದರಿಯು ಕೈಯಿಂದ ಜಾರಿ ಹೊನ್ನಕೊಡ
ಸೋಪಾನಮಾರ್ಗದಲಿ ಮಾಡುತಿದೆ ಸದ್ದ
ಟಂಟಂಟ ಟಂಟಂಟ ಟಟಂಟ ಟಂಟ ॥

ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಲೋಚನದ ಮುಂದಿನ ಸಂಚಿಕೆಗೆ ಸಮಸ್ಯೆ :

"ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ"

ಸೂಚಿಸಿದವರು : **ಪ್ರೊ॥ ಟಿ. ಕೇಶವ ಭಟ್ಟ**

ತಿದ್ದುಪಡಿ

ಹಿಂದಿನ ಸಂಚಿಕೆಯ 'ವ್ಯಾಕರಣಾಂಶ ಸಮೀಕ್ಷೆ' ಎಂಬ ಲೇಖನದಲ್ಲಿ ಪುಟ 55, ದಪ್ಪದ ಅಕ್ಷರದಲ್ಲಿರುವ ವಾಕ್ಯ–'ಆಕಾರಾಂತ ನಾಮಪ್ರಕೃತಿಗೆ....' ಎಂಬುದನ್ನು 'ಅಕಾರಾಂತ ನಾಮ ಪ್ರಕೃತಿಗೆ.... ಎಂದೋದಿಕೊಳ್ಳಬೇಕು. ಪುಟ 56, ಪಂಕ್ತಿ 17 ರಲ್ಲಿರುವ 'ಕುಲ + ಅಂ = ಕುಲಮಂ' ಎಂಬುದನ್ನು 'ಕುಲಂ + ಅಂ = ಕುಲಮಂ' ಎಂದೋದಿಕೊಳ್ಳಬೇಕು.

ಟಿ. ಕೇಶವ ಭಟ್ಟ

ಕ್ರಿಯಾಸಮಾಸ

— ಸೇಡಿಯಾಪು ಕೃಷ್ಣಭಟ್ಟ

'ಗಮಕ ಸಮಾಸ' ಎಂಬ ಹೆಸರಿನ ನನ್ನ ಲೇಖನದ ಒಂದು ಟಿಪ್ಪಣಿಯಲ್ಲಿ (ವಿಚಾರ ಪ್ರಪಂಚ, ಪು. 273) ಹೀಗೆ ಬರೆಯಿಸಿದ್ದೆ:-

"ಒಂದು ಸಮಾಸಪದದ ಘಟಕಗಳಾದ ಎರಡು ಪದಗಳೂ ಸಾಮಾನ್ಯವಾಗಿ ನಾಮಪದ (ಸುಬಂತ)ಗಳೇ ಆಗಿರುತ್ತವೆ. ಈ ಕಾರಣದಿಂದಲೇ ಎಂಬಂತೆ ನಾಗವರ್ಮನೂ ಕೇಶಿರಾಜನೂ 'ಎರಡು ನಾಮಪದಗಳು ಸೇರಿ ಒಂದು ಸಮಾಸಪದವಾಗುತ್ತದೆ' ಎಂಬರ್ಥದ ಮಾತುಗಳನ್ನು ಹೇಳಿರುತ್ತಾರೆ. ('ಸಂಗತಿಯಿಂದಂ ನಾಮಪದಂಗಳವೇಕಾರ್ಥಗತಿಯೊಳಾಗೆ ಸಮಾಸಂ ಸಂಗಳಿಸುಗುಂ – ನಾಗವರ್ಮ, ಶಬ್ದಸ್ಮೃತಿ ಸೂತ್ರ ೪೫ ; 'ಕಱು ತಾಯೆ ಬಟಿಯನುಟೀಯದ ತೆಱದಿಂದಂ ನಾಮಪದಮುದರ್ಥಾನುಗಮಾಗೆಱಗೆ ಸಮಾಸಂ ನೆಗೞ್ಗುಂ'-ಕೇಶಿರಾಜ, ಶಬ್ದಮಣಿದರ್ಪಣ, ಸೂತ್ರ ೭೩). ಆದರೆ ಈ ಇಬ್ಬರು ವೈಯಾಕರಣರೂ ಹೇಳಿರುವ ಸಮಾಸಲಕ್ಷಣದಲ್ಲಿ ವ್ಯಾಪ್ತಿದೋಷವು ಕಂಡುಬರುವಂತಿದೆ. ಏಕೆಂದರೆ, ಇವರಿಬ್ಬರೂ ಕ್ರಿಯಾಸಮಾಸವೆಂಬೊಂದು ಸಮಾಸಭೇದವನ್ನು ತಮ್ಮ ಗ್ರಂಥಗಳಲ್ಲಿ ನಿರೂಪಿಸಿರುತ್ತಾರಷ್ಟೆ.[1] (ಶಬ್ದಸ್ಮೃತಿ, ಸೂತ್ರ ೪೫ ಮತ್ತು ಶಬ್ದಮಣಿ ದರ್ಪಣ. ಸೂತ್ರ ೧೭೮) ಆ ಸಮಾಸದಲ್ಲಿ ಪೂರ್ವಪದವು ನಾಮ

---

1. ಕ್ರಿಯಾಸಮಾಸಕ್ಕೆ ಇವರಿಬ್ಬರೂ ಕೊಟ್ಟಿರುವ ಉದಾಹರಣೆಗಳು ಈ ರೀತಿ ಇವೆ :

೧. ನಾಗವರ್ಮ—ಊರೇಱಲ್, ಮನೆಮಾಡಲ್ಕೆ, ಅರಂಬಂಗೆಯ್ಯಲ್, ಎಟ್ಟಿಗೊಳಲ್, ಆಳಾಳಲ್ಕೆ, ಅರಾಮು ಮಿಡಲ್ಕೆ-(ಶಬ್ದಸ್ಮೃತಿ, ಸೂ. ೪೮) ಇಲ್ಲಿ ಕೊಟ್ಟಿರುವ ಎಲ್ಲಾ ಉದಾಹರಣೆಗಳಲ್ಲಿ ಉತ್ತರಪದವು ನಾಮಪದವಾಗಿರದೆ ಕೃದಂತಾವ್ಯಯಗಳೇ ಆಗಿವೆ.

೨. ಕೇಶಿರಾಜ-ಇವನು ಕೊಟ್ಟಿರುವ ಉದಾಹರಣ ಪ್ರಯೋಗಗಳಲ್ಲಿ ಇದೊಂದು ಪದ್ಯವೂ ಇದೆ :-

ಸವಣಂ ಬಳಪಂಗೊಳೆ ಗಾಂ
ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ
ನವರಿಪು ಚಕ್ರಂಗೊಳೆ ಕಾ
ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ

ಉದಾಹೃತವಾದ ಈ ಪದ್ಯದಲ್ಲಿ ಬಂದಿರುವ ಬಳಪಂಗೊಳೆ, ಬಿಲ್ಗೊಳೆ, ವಜ್ರಂಗೊಳೆ

ಪದವೇ ಆಗಿರಬೇಕಾಗುತ್ತದಾದರೂ, ಉತ್ತರಪದವೂ ನಾಮಪದವೇ ಆಗಿರಬೇಕೆಂಬ ನಿಯಮವೇನೂ ಇಲ್ಲ ; ಅದು ಕ್ರಿಯಾಪದ (ಆಖ್ಯಾತ—finite verb) ವಾಗಿರಬಹುದು, ಕೃದಂತನಾಮವಾಗಿರಬಹುದು, ಕೃದಂತಾವ್ಯಯವಾಗಿರಲೂಬಹುದು. ಉದಾ: ಕ್ರಿಯಾಪದಕ್ಕೆ–ಊಟಮಾಡುತ್ತಾನೆ ; ಕೃದಂತನಾಮಕ್ಕೆ – ಊಟಮಾಡಿದವನು ; ಕೃದಂತಾವ್ಯಯಕ್ಕೆ – ಊಟಮಾಡಿ ಇತ್ಯಾದಿ. ಉಪರ್ಯುಕ್ತ ವೈಯಾಕರಣರಿಬ್ಬರು ಹೇಳಿರುವ ಸಮಾಸಲಕ್ಷಣವೂ ಈ ವಿಶೇಷವನ್ನು ಒಳಕೊಳ್ಳುವಂತಿಲ್ಲವೆಂಬುದು ಸುಸ್ಪಷ್ಟ.

ಕನ್ನಡದ ಕ್ರಿಯಾಸಮಾಸಕ್ಕೆ ಸಮಾನವೇ ಆಗಿರುವ ಪದಯೋಜನೆಗಳು ಹಿಂದೀ ಭಾಷೆಯಲ್ಲಿಯೂ ಇವೆ. ಆದರೆ ಅವರು ಅದನ್ನು ಸಮಾಸವೆಂದು ಭಾವಿಸುವುದಿಲ್ಲ. ಬದಲಾಗಿ ಅಲ್ಲಿ 'ಪೂರ್ವಪದದ ವಿಭಕ್ತಿ ಲುಪ್ತವಾಗಿದೆ' ಎಂದೂ ಕರ್ಮಪದವು ಅಪ್ರಾಣಿವಾಚಕವಾಗಿರುವಲ್ಲೆಲ್ಲ ಹಾಗೆ ಮಾಡುವುದೇ ಭಾಷಾರೂಢಿಯೆಂದೂ ಹೇಳುತ್ತಾರೆ. (ಹಿಂದೀಭಾಷೆಯು ವಿಸಂಧಿ ಭಾಷೆಯಾಗಿ ಪರಿಣಮಿಸಿರುವುದು ಸಹ ಹಿಂದೀವೈಯಾಕರಣರ ಈ ಅಭಿಪ್ರಾಯಕ್ಕೆ ಪೋಷಕವಾಗಿದ್ದಿರಬಹುದು.) ಕನ್ನಡದ ಕ್ರಿಯಾಸಮಾಸವಾದರೂ ಸಾಮಾನ್ಯವಾಗಿ ಅಪ್ರಾಣಿವಾಚಕಕ್ಕೆ ಕ್ರಿಯಾವಾಚಕವು ಸೇರಿದಾಗ ಉಂಟಾಗುತ್ತದೆ. (ಉದಾ :- ಮನೆಕಟ್ಟುವವನು, ಮನೆಕಟ್ಟಲು, ಮರಕಡಿದನು—ಇತ್ಯಾದಿ) ಹೊರತು 'ರಾಮನನ್ನು ಕಂಡನು' ಎಂಬುದನ್ನು ಸಮಸ್ತೀಕರಿಸಿ 'ರಾಮಕಂಡನು' ಎಂದು ಹೇಳುವುದಕ್ಕಾಗುವುದಿಲ್ಲ. ಈ ಕಾರಣದಿಂದ ಆಧುನಿಕ ಕನ್ನಡ ವಿದ್ವಾಂಸರಲ್ಲಿ ಕೆಲವರು ಕ್ರಿಯಾಸಮಾಸವೆಂಬೊಂದು ಸಮಾಸಭೇದವು ಕನ್ನಡಕ್ಕೆ ಅನವಶ್ಯವೆಂದು ಭಾವಿಸುತ್ತಾರೆ. ಈ ಅಭಿಪ್ರಾಯದ ಯುಕ್ತಾಯುಕ್ತತೆಯ ವಿಚಾರವು ಪ್ರಸ್ತುತ ಲೇಖನಕ್ಕೆ ಬಹಿರ್ಭೂತವಾಗಿರುವುದರಿಂದ ಆ ವಿಷಯವನ್ನು ಇಲ್ಲಿ ವಿಸ್ತರಿಸುವುದಿಲ್ಲ."

ನನ್ನ ಈ ಮೇಲಿನ ವಿಚಾರಗಳನ್ನು ಪರಾಮರ್ಶಿಸಿದ ನನ್ನ ಮಿತ್ರರು "ಕ್ರಿಯಾಸಮಾಸದ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂಬುದನ್ನು ಪ್ರಕಟಿಸಿದರೆ, ಕನ್ನಡ ಭಾಷಾಸ್ವರೂಪ ವಿಚಾರದಲ್ಲಿ ಆಸಕ್ತರಾದವರಿಗೆ ಪ್ರಯೋಜನವಾಗಬಹುದು" ಎಂದು ಹಲವು ಬಾರಿ ನನ್ನನ್ನು ಕೇಳಿಕೊಂಡುದರಿಂದ, ಜರಾಜರ್ಜರಿತನೂ ದೃಷ್ಟಿಹೀನನೂ

ಚಕ್ರಂಗೊಳೆ, ಗದೆಗೊಳೆ—ಎಂಬಿವೆಲ್ಲದರ ಉತ್ತರ ಪದಗಳು ಕೃದಂತಾವ್ಯಯಗಳೇ ಆಗಿವೆ ಹೊರತು ನಾಮಪದಗಳಾಗಿಲ್ಲ.

ಆದರೆ ಭಟ್ಟಾಕಲಂಕನು ಸೂತ್ರಿಸಿರುವ ಸಮಾಸಲಕ್ಷಣ ವಾಕ್ಯದಲ್ಲಿ (ಸುಪ್ಸುಪಾ ಸಮಾಸೋ ಬಹುಲಂ) ಇಂತಹ ಅವ್ಯಾಪ್ತಿ ದೋಷವಾವುದೂ ಇಲ್ಲ. ಆ ಸಂದರ್ಭದಲ್ಲಿ ಅವನು ಶಬ್ದಮಣಿದರ್ಪಣಕಾರನು ಉದಾಹರಿಸಿದ 'ಸವಣಂ ಬಳಪಂಗೊಳೆ' ಇತ್ಯಾದಿಯಾಗಿರುವ ಪದ್ಯವನ್ನು ಸಹ ಉದಾಹರಿಸಿದ್ದಾನೆ.

ಆಗಿರುವ ನಾನೀಗ ಲೇಖನವನ್ನು ಬರೆಯಿಸಲೂ ಅಶಕ್ತನಾಗಿರುವೆನಾದರೂ ಮಿತ್ರರ ಅಭ್ಯರ್ಥನೆಯನ್ನು ತಿರಸ್ಕರಿಸಲಾರದೆ ಆ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳ ತೊಡಗಿದ್ದೇನೆ.

ಈ ಮೇಲೆ ಉದ್ಧರಿಸಿದ ಮಾತುಗಳೊಳಗೆ "ಕನ್ನಡದ ಕ್ರಿಯಾಸಮಾಸವಾದರೂ ಸಾಮಾನ್ಯವಾಗಿ ಅಪ್ರಾಣಿವಾಚಕಕ್ಕೆ ಕ್ರಿಯಾವಾಚಕವು ಸೇರಿದಾಗ ಉಂಟಾಗುತ್ತದೆ" ಎಂದಿದೆಯಷ್ಟೆ. ಈ ಸಾಮಾನ್ಯ ನಿಯಮಕ್ಕೆ ಕನ್ನಡದಲ್ಲಿ ಅಪವಾದಗಳು ಅಲ್ಲಲ್ಲಿ ಗೋಚರಿಸುತ್ತವೆ. ಉದಾ :-

ಯೋಧನು **ಕುದುರೆಯೇರಿದನು**.
ಕಟುಕನು **ಕುರಿಕಡಿದು** ಬೇಸತ್ತನು.
ರಾಮನ ಮಿತ್ರರು ರಾಮನಿಗಾಗಿ **ಹೆಣ್ಣು ನೋಡುವುದಕ್ಕೆ** ಹೊರಟರು.
ಮುಸಲ್ಮಾನರು ಸಾಮಾನ್ಯವಾಗಿ **ನಾಯಿಸಾಕುವುದಿಲ್ಲ**.
ಶಾಲೆಗೆಂದು ಹೊರಟ ಸೋಮಾರಿಹುಡುಗನು ಒಂದು ಮರದಡಿಯಲ್ಲಿ ಕುಳಿತು **ನೊಣಹೊಡೆಯುತ್ತಾ** ಕಾಲಕಳೆದನು.

ಇಲ್ಲಿ ಕೊಟ್ಟ ಉದಾಹರಣೆಗಳೆಲ್ಲ ಪ್ರಾಣಿವಾಚಕಗಳಿಗೆ ಕ್ರಿಯಾವಾಚಕಗಳು ಸೇರಿರುವುದನ್ನು ನಿಸ್ಸಂದಿಗ್ಧವಾಗಿ ತೋರಿಸಿ ಕೊಡುತ್ತವೆಯಲ್ಲವೆ ? ಈ ಪರಿಸ್ಥಿತಿಯು ಹೊಸಗನ್ನಡದಲ್ಲಿ ಮಾತ್ರವೆಂದು ಹೇಳುವಂತಿಲ್ಲ. ಹಳಗನ್ನಡದಲ್ಲಿಯೂ ಇಂತಹ ಪ್ರಯೋಗಗಳಿರುವುದನ್ನು ನಾಗವರ್ಮನು ಉದಾಹರಿಸಿರುತ್ತಾನೆ—

ಎತ್ತುಗೊಳಲ್ (= ಎತ್ತನ್ನು ಕೊಳ್ಳಲು)
ಆಳಾಳಲ್ಕೆ (=ಆಳನ್ನು ಆಳಲಿಕ್ಕೆ)

ಆದುದರಿಂದ ಹಿಂದೀ ಭಾಷೆಯ ಕರ್ಮಪದ ಪ್ರತ್ಯಯಲೋಪಕ್ಕೂ ಕನ್ನಡದ ಕ್ರಿಯಾ ಸಮಾಸಕ್ಕೂ ಹೋಲಿಕೆ ಸಲ್ಲುವಂತಿಲ್ಲ. ಇದೂ ಅಲ್ಲದೆ, ಕನ್ನಡದ ಕ್ರಿಯಾಸಮಾಸ ಗಳಲ್ಲಿ, ದ್ವಿತೀಯಾವಿಭಕ್ತಿಯು ಲುಪ್ತವಾಗುವುದು ಮಾತ್ರವಲ್ಲ, ಇತರ ವಿಭಕ್ತಿಗಳೂ ಲುಪ್ತವಾಗುವುದುಂಟು. ಇವನ್ನು ಭಟ್ಟಾಕಳಂಕನೂ ತೋರಿಸಿರುತ್ತಾನೆ. ಉದಾ:-

ಕೊಡಲಿಯಿಂ ಕಡಿದಂ — ಕೊಡಲಿಗಡಿದಂ
ಕಣ್ಣಿಂ ಕಂಡಂ — ಕಣ್ಗಂಡಂ ಇತ್ಯಾದಿ.

ಹೊಸಗನ್ನಡದಲ್ಲಿಯೂ ಇಂಥವುಗಳು ಕಾಣುವುದುಂಟು. ಉದಾ :-

ಮೇಲಕ್ಕೇರು — ಮೇಲೇರು
ಕೆಳಕ್ಕೆ ಬೀಳು— ಕೆಳಬೀಳು ಇತ್ಯಾದಿ.

ಇನ್ನು ಕೆಲವೆಡೆಗಳಲ್ಲಿ ಏಕರೂಪದ ಪದಸಂಯೋಗವಿರುವಲ್ಲಿಯೂ ಬೇರೆ ಬೇರೆ ವಿಭಕ್ತಿಗಳು ಲುಪ್ತವಾಗಿ ಕ್ರಿಯಾಸಮಾಸಗಳಾಗುವುದುಂಟು. ಉದಾ :-

ಮನಗಾಣು [ಮನದಲ್ಲಿ ಕಾಣು]

ಮನಗಾಣಿಸು [ಮನಕ್ಕೆ ಕಾಣಿಸು] ಇತ್ಯಾದಿ

ಪರಿಸ್ಥಿತಿ ಹೀಗಿರುವಾಗ ಹಿಂದೀಭಾಷೆಯ ದ್ವಿತೀಯಾ ವಿಭಕ್ತಿ ಪ್ರತ್ಯಯಲೋಪಕ್ಕೂ ಕನ್ನಡದ ಕ್ರಿಯಾಸಮಾಸಕ್ಕೂ ಗಂಟಿಕ್ಕುವುದು ಸರ್ವಥಾ ಅನುಚಿತ.

ಇನ್ನು ಕೆಲವರು–ಕ್ರಿಯಾಸಮಾಸವೆಂದು ನಮ್ಮ ಪ್ರಾಚೀನ ವೈಯಾಕರಣರು ಹೇಳುವಂತಹ ಪ್ರಯೋಗಗಳಲ್ಲಿ (ಆಡುನುಡಿಯಲ್ಲಿ) ಪೂರ್ವಪದದ ಕೊನೆಗೆ ದೀರ್ಘತ್ವವು ಕಂಡುಬರುವುದರಿಂದ ಅಲ್ಲಿ ಆ ದೀರ್ಘಸ್ವರವೇ ದ್ವಿತೀಯಾ ವಿಭಕ್ತಿ ಎಂದು ತಿಳಿಯಬೇಕೆಂದು ಪ್ರತಿಪಾದಿಸುತ್ತಾರೆ ಮತ್ತು ಇದಕ್ಕಾಗಿ–

ಮರಾ ಕಡಿದನು	(ಮರಕಡಿದನು)
ಮನೇ ಕಟ್ಟು	(ಮನೆಕಟ್ಟು)
ಊಟಾ ಮಾಡಿ	(ಊಟಮಾಡಿ)
ನದೀ ದಾಟಿ	(ನದಿದಾಟಿ)
ಸ್ನಾನಾ ಮಾಡಿ	(ಸ್ನಾನಮಾಡಿ)
ಕುರೀ ಕಾಯಿ	(ಕುರಿಕಾಯಿ)

—ಇತ್ಯಾದಿ ದಿನಬಳಕೆಯ ಪ್ರಯೋಗಗಳನ್ನು ಉದಾಹರಿಸುತ್ತಾರೆ. ಆಡುನುಡಿಯಲ್ಲಿ ಕಂಡುಬರುವ ಈ ರೂಪಗಳು ಪ್ರಾದೇಶಿಕವಾದ ಉಚ್ಚಾರವೈಚಿತ್ರ್ಯಗಳಾಗಿವೆ ಹೊರತು, ಕನ್ನಡನಾಡಿನಲ್ಲಿ ಸಾರ್ವತ್ರಿಕವಾಗಿ ರೂಢವಾಗಿರುವ ರೂಪಗಳಲ್ಲ. ಈ ರೀತಿ ಕ್ರಿಯಾಸಮಾಸವೆಂಬ ಪದದ್ವಂದ್ವಗಳ ಪೂರ್ವಪದಗಳನ್ನು ದೀರ್ಘೀಕರಿಸುವ ಅಭ್ಯಾಸವುಳ್ಳ ಪ್ರದೇಶದ ಜನರು ಶ್ಯಾಮಶಾಸ್ತ್ರಿ ಎಂಬುದನ್ನು ಶ್ಯಾಮಾಶಾಸ್ತ್ರಿಯೆಂದೂ ಭೀಮಜೋಯಿಸ ಎಂಬುದನ್ನು ಭೀಮಾಜೋಯಿಸ ಎಂದೂ ಉಚ್ಚರಿಸುತ್ತಾರಲ್ಲವೇ? ಮತ್ತು ಒಮ್ಮೊಮ್ಮೆ ಬರೆಯುವುದೂ ಉಂಟಲ್ಲವೇ ? (ಉದಾ :- ರಾಮಾಜೋಯಿಸ ಇ.) ಇಲ್ಲಿ ಅವರು ಪ್ರಯೋಗಿಸುವ ದೀರ್ಘಸ್ವರವು ಯಾವ ವಿಭಕ್ತಿಯನ್ನು ಸೂಚಿಸುತ್ತದೆ ? ಇಷ್ಟು ಮಾತ್ರವಲ್ಲ, ಹೀಗೆ ನುಡಿಯುವ ರೂಢಿಯುಳ್ಳ ಜನರು ಪಾಪಪುಣ್ಯ ಎಂಬ ಪದಯುಗ್ಮವನ್ನು ಪಾಪಾಪುಣ್ಯ ಎಂದೂ, ಬಿಳಿಹೆಂಡತಿಯೆಂಬುದನ್ನು ಬಿಳೀಹೆಂಡತಿಯೆಂದೂ ಹೊಸಮನೆಯೆಂಬುದನ್ನು ಹೊಸಾಮನೆಯೆಂದೂ ಗಂಡಹೆಂಡ್ತಿ ಎಂಬುದನ್ನು ಗಂಡಾಹೆಂಡ್ತಿ ಎಂದೂ ಹೇಳುವುದನ್ನು ಯಾರೂ ಕೇಳಬಹುದಾಗಿದೆ. ಈ ವಿಕೃತಿಗೆ ಕಾರಣವೇನೆಂದರೆ ಉಕ್ತ ಪ್ರದೇಶದ ಜನರು ಹೆಚ್ಚು ಕಡಮೆ ಪ್ರತಿಯೊಂದು ಪದದ ಕೊನೆಯನ್ನು ದೀರ್ಘೀಕರಿಸುವುದಾಗಿದೆ ಹೊರತು ವಿಭಕ್ತ್ಯರ್ಥವನ್ನು ಪ್ರಕಟಿಸುವುದಲ್ಲ

ವೆಂಬುದು ಉಪರ್ಯುಕ್ತ ಉದಾಹರಣೆಗಳಿಂದ ಸ್ಪಷ್ಟವಾಗದಿರದು. ಈ ಉಚ್ಚಾರ ವೈಚಿತ್ರ್ಯವು ಪರಭಾಷಾ ಪ್ರಭಾವಕ್ಕೆ ಅತಿಯಾಗಿ ಒಳಗಾದ ಪ್ರದೇಶಕ್ಕೆ ಸೀಮಿತ ವಾಗಿರುವುದರಿಂದ ಇದು ಕನ್ನಡ ಭಾಷೆಯ ಸ್ವಭಾವಸಿದ್ಧ ಲಕ್ಷಣವೆಂದು ಹೇಳುವುದು ಸರಿಯೆನ್ನಿಸಿ ಕೊಳ್ಳುವಂತಿಲ್ಲ.

ಇನ್ನು ಕೆಲವರು–ಶಬ್ದಮಣಿದರ್ಪಣಕಾರನು ಸಮಾಸ ಲಕ್ಷಣವನ್ನು ಹೇಳುವಾಗ, ಅದು ನಾಮಪದಗಳ ಸಂಯೋಗಕ್ಕೆ ಮಾತ್ರ ಅನ್ವಯಿಸುವುದೆಂಬುದಾಗಿ ಹೇಳಿರುವ ಕಾರಣ, ಕ್ರಿಯಾಸಮಾಸದ ಉತ್ತರ ಪದವು ಸಹ ನಾಮಪದ ರೂಪವನ್ನು ಪಡೆದಿರುವ ಕ್ರಿಯಾವಾಚಕವೇ ಆಗಿರಬೇಕೆಂದೂ. ಉತ್ತರಪದವು ನಾಮಪದ (ಸುಬಂತ) ರೂಪವನ್ನು ಪಡೆಯದ ಕ್ರಿಯಾವಾಚಕವಾಗಿರುವುದಾದರೆ (ಕೃದಂತಾವ್ಯಯವೋ, ಕ್ರಿಯಾಪದವೋ–finite verb–ಆಗಿದ್ದರೆ) ಅದನ್ನು 'ಸಂಯುಕ್ತಕ್ರಿಯಾಪದ (?)ವೆಂದು ಹೇಳಬೇಕೇ ಹೊರತು ಕ್ರಿಯಾಸಮಾಸವೆಂದಲ್ಲವೆಂದೂ ಹೇಳುತ್ತಿರುವುದು ಇತ್ತೀಚೆಗೆ ನನಗೆ ತಿಳಿದು ಬಂದಿದೆ. ಇಂಥವರು ಕೇಶಿರಾಜನೇ ಕ್ರಿಯಾಸಮಾಸಕ್ಕೆ ಉದಾಹರಣೆಗಳಾಗಿ ಕೊಟ್ಟಿರುವ ಬಳಸಂಗೊಳೆ, ಬಿಲ್ಗೊಳೆ ಇತ್ಯಾದಿ ಪದಸಂಯೋಗಗಳನ್ನು ಪರಾಮರ್ಶಿಸಲೇ ಇಲ್ಲವೆಂದೂ ಭಟ್ಟಾಕಳಂಕನ ಶಬ್ದಾನುಶಾಸನದ ಪರಿಚಯವು ಇವರಿಗಾಗಿಲ್ಲವೆಂದೂ ವಿಷಾದಪೂರ್ವಕ ಹೇಳಬೇಕಾಗುತ್ತದೆ. ಉತ್ತರಪದವು ನಾಮಪದ ರೂಪವನ್ನು ಪಡೆದ ಕ್ರಿಯಾವಾಚಕ ವಾಗಿರದೆ ಬೇರೆ ರೂಪದ ಕ್ರಿಯಾವಾಚಕವಾಗಿರುವಲ್ಲಿಯೂ ಅದು ಕ್ರಿಯಾಸಮಾಸ–ವೆಂಬುದರಲ್ಲಿ ನಮ್ಮ ವೈಯಾಕರಣರೊಳಗೆ ಮತಭೇದವು ಸರ್ವಥಾ ಇಲ್ಲ. ಆದರೆ ಈ ಮೇಲೆ ತಿಳಿಸಿರುವಂತೆ ನಾಗವರ್ಮನೂ ಕೇಶಿರಾಜನೂ ಹೇಳಿರುವ ಸಮಾಸ ಲಕ್ಷಣವಾಕ್ಯಗಳಲ್ಲಿ ಉಂಟಾದ ವ್ಯಾಪ್ತಿದೋಷವೇ ಉಪರ್ಯುಕ್ತ ಅಪಾರ್ಥದ ಮೂಲವಾಗಿರುತ್ತದೆ.

ಕ್ರಿಯಾಸಮಾಸದ ರೂಪಗಳಲ್ಲಿ ಕೆಲವನ್ನು ಮಾತ್ರ ಸಮಾಸಗಳೆಂದೂ ಉಳಿದವು ಗಳನ್ನು 'ಸಂಯುಕ್ತ ಕ್ರಿಯಾಪದ'ಗಳೆಂದೂ ಹೇಳುವುದರಲ್ಲಿ ಔಚಿತ್ಯವೇನೂ ಇಲ್ಲ. ಹೀಗೆ ಹೇಳುವುದರ ಬದಲಾಗಿ ಕ್ರಿಯಾಸಮಾಸಗಳೆಂದು ನಮ್ಮ ವೈಯಾಕರಣರು ಏಕಕಂಠದಿಂದ ಹೇಳಿರುವ ರೂಪಗಳೆಲ್ಲವಕ್ಕೂ ಸಂಯುಕ್ತ ಕ್ರಿಯಾವಾಚಕವೆಂಬ ಹೆಸರುಕೊಡುವುದು ಲೇಸಲ್ಲವೇ ? ಕೆಲವನ್ನು ಮಾತ್ರ ಸಮಾಸವೆಂದು ಹೇಳಿದರೆ, ಉತ್ತರಪದವು ಗಮಕ ಸಮಾಸವೆಂಬುದರ ಪೂರ್ವಪದದ ರೂಪವನ್ನು ಪಡೆದಾಗ (ಮಾಡಿದ, ನೋಡುವ, ಆಡಿದ ಇತ್ಯಾದಿ) ಅದನ್ನು ಸಂಯುಕ್ತ ಕ್ರಿಯಾವಾಚಕವೆನ್ನ ಬೇಕೋ ಕ್ರಿಯಾಸಮಾಸವೆನ್ನಬೇಕೋ ಎಂಬುದು ನಿಶ್ಚಿತವಾಗುವುದಿಲ್ಲ. ಏಕೆಂದರೆ ಗಮಕ ಸಮಾಸವೆಂಬುದರ ಪೂರ್ವಪದವು ವಿಭಕ್ತಿರಹಿತವಾದ ನಾಮಪ್ರಕೃತಿಯೇ ಆಗಿರುತ್ತದೆ. ಆದುದರಿಂದ ಸಂಯುಕ್ತ ಕ್ರಿಯಾವಾಚಕವೆಂಬ ಒಂದು ಭೇದವನ್ನು

ಕ್ರಿಯಾಸಮಾಸದೊಳಗೆ ತಂದುಹಾಕುವುದು ಅಸಮರ್ಥನೀಯ ಮಾತ್ರವಲ್ಲ ಪೂರ್ವಶಾಸ್ತ್ರ ವಿರುದ್ಧವೂ ಆಗಿ ಪರಿಣಮಿಸುತ್ತದೆ.[2]

ಕ್ರಿಯಾಸಮಾಸವೆಂದು ನಮ್ಮ ವೈಯಾಕರಣರು ಉದಾಹರಿಸಿರುವ ಪದಸಂಯೋಗಗಳಲ್ಲಿ, ಪೂರ್ವಪದದಲ್ಲಿ ಆಗಿರುವ ವಿಭಕ್ತಿಲೋಪವು ಹೆಚ್ಚಾಗಿ ದ್ವಿತೀಯೆಯೇ ಆಗಿರುವುದಾದರೂ ಇತರ ವಿಭಕ್ತಿಗಳೂ ಒಮ್ಮೊಮ್ಮೆ ಲುಪ್ತವಾಗುವುವೆಂಬುದಕ್ಕೆ ಕೆಲವು ಉದಾಹರಣೆಗಳನ್ನು ಈ ಮೇಲೆ ಕೊಡಲಾಗಿದೆಯಷ್ಟೆ. ಆದರೆ ಪೂರ್ವಪದದ ಪ್ರಥಮಾ ವಿಭಕ್ತಿ ಲೋಪಕ್ಕೆ ಉದಾಹರಣೆ ಯಾವುದನ್ನೂ ವೈಯಾಕರಣರು ತೋರಿಸಿರುವುದಿಲ್ಲ. ಪೂರ್ವಪದವು ಪ್ರಥಮಾಂತವಾಗಿರುವಾಗ ಆ ಪದಸಂಯೋಗದ ಸಮಸ್ತರೂಪವೂ ವ್ಯಸ್ತರೂಪವೂ ಏಕರೂಪವಾಗಿ ಕಂಡು ಬರುವುವು. ಉದಾ:-

ಉರಿಹತ್ತಿ (ಉರಿ + ಹತ್ತಿ)

ಬಾಯ್‌ಬತ್ತಿ (ಬಾಯ್ + ಬತ್ತಿ)

ನಿನ್ನ ಕೂದಲುಕೊಂಕದಂತೆ ನೋಡಿಕೊಳ್ಳುವೆನು.

(ಕೂದಲು + ಕೊಂಕು)

ಲಜ್ಜೆಗೆಟ್ಟ (ಲಜ್ಜೆ + ಕೆಟ್ಟ)

ಈ ಸಮಸ್ಯೆ ಬಗೆಹರಿಯಬೇಕಾದರೆ ಸಮಾಸವೆಂದರೇನೆಂಬುದನ್ನು ಸ್ವಲ್ಪ ವಿವರವಾಗಿಯೇ ವಿಚಾರಿಸಬೇಕಾಗುತ್ತದೆ.

---

2. ಕ್ರಿಯಾಪದ ಮತ್ತು ಕ್ರಿಯಾವಾಚಕ ಎಂಬವು ಸಮಾನಾರ್ಥಕಗಳೆಂದು ಭಾವಿಸಬಾರದು. ಕ್ರಿಯಾಪದವೆಂದರೆ ವಾಕ್ಯವನ್ನು ಕೊನೆಗೊಳಿಸಬಲ್ಲ ಆಖ್ಯಾತರೂಪ (finite verb). ಕ್ರಿಯಾ ವಾಚಕವೆಂಬುದು ಕಾರಕಾನ್ವಯಿಯಾದ ಧಾತುರೂಪಗಳೆಲ್ಲವನ್ನೂ — ಎಂದರೆ, ಕೃದಂತಾವ್ಯಯ, ಕೃದಂತನಾಮಪದ, ಕ್ರಿಯಾಪದ ಮತ್ತು ರೂಢಿವಶಾತ್ ಕ್ರಿಯಾರ್ಥವನ್ನು ಕಳೆದುಕೊಳ್ಳದ ಕೃದಂತ ವಿಶೇಷಣಗಳೆಲ್ಲವನ್ನೂ—ಒಳಗೊಳ್ಳುವ ಸಂಜ್ಞೆಯಾಗಿದೆ. ಉದಾ:- ಕ್ರಿಯಾಪದ—ಓಡುತ್ತದೆ ; ಕೃದಂತನಾಮಪದ—ಓಡುವವನು ; ಕೃದಂತಾವ್ಯಯ—ಓಡಿ, ಓಡಲು, ಓಡಿದರೆ ಇತ್ಯಾದಿ ; ಕ್ರಿಯಾರ್ಥವನ್ನು ಕಳೆದುಕೊಳ್ಳದ ಕೃದಂತ ವಿಶೇಷಣ— ಓಡಿದ, ಓಡದ, ಓಡುವ ಇತ್ಯಾದಿ. [ಕೆಲವು ಕೃದಂತ ವಿಶೇಷಣಗಳು ಕಾರಕಾನ್ವಯಿತ್ವವನ್ನು (= ಕ್ರಿಯಾವಾಚಕತ್ವವನ್ನು) ಕಳೆದುಕೊಂಡು ಕೇವಲ ಗುಣವಾಚಕಗಳ ಸ್ವಭಾವವನ್ನು ಪಡೆಯುವುದುಂಟು ; ಕೆಲವು ಸಲ ಅವೇ ಕಾರಕಾನ್ವಯಿಗಳಾಗಿ ಪ್ರಯುಕ್ತವಾಗುವುದೂ ಉಂಟು. ಉದಾ :- ಕೆಟ್ಟ ಜೂಜಾಡುವುದು ಕೆಟ್ಟ ಅಭ್ಯಾಸ (ಇಲ್ಲಿ ಕೆಟ್ಟ ಎಂಬುದು ಒಳ್ಳೆಯದಲ್ಲದ ಎಂಬರ್ಥದ ಕ್ರಿಯಾರ್ಥವನ್ನು ಕಳೆದುಕೊಂಡ ಗುಣವಾಚಕ) : ಹಳಸಿಹೋಗಿ ಕೆಟ್ಟ ಪದಾರ್ಥಗಳನ್ನು ತಿನಬಾರದು (ಇಲ್ಲಿ ಕೆಟ್ಟ [illegible] ಕೆಟ್ಟು ಹೋದ, ಹಾಳಾದ ಎಂಬರ್ಥದ ಕ್ರಿಯಾರ್ಥವುಳ್ಳ ಗುಣವಾಚಕ) ಈ ಉದಾಹರಣೆಗಳಲ್ಲಿ ಮೊದಲನೆಯ

ನಮ್ಮ ವೈಯಾಕರಣರ ಮತದಂತೆ ಸಮಾಸಪದದ ಮುಖ್ಯವಾದೊಂದು ಲಕ್ಷಣವು 'ಏಕಾರ್ಥೀಭಾವ' ಎಂಬುದಾಗಿದೆ. ಏಕಾರ್ಥೀಭಾವವೆಂದರೆ ಪರಸ್ಪರ ಸಂಬಂಧವುಳ್ಳ ಎರಡು ಪದಗಳು ಏಕೀಭವಿಸುವುದಾಗಿದೆ. ಸಮಾಸಪದವೆಂಬುದರ ಇನ್ನೊಂದು ಲಕ್ಷಣವು, ಪೂರ್ವಪದದ ವಿಭಕ್ತಿಯ ಲೋಪವುಂಟಾಗುವುದೆಂಬುದಾಗಿದೆ. ಆದರೆ ಅಲುಕ್‌ಸಮಾಸವೆಂಬೊಂದು ಭೇದವೂ ಸಮಾಸ ಪದಗಳೊಳಗಿದೆಯಷ್ಟೆ. ಅಲ್ಲಿ ಪೂರ್ವಪದದ ವಿಭಕ್ತಿಗೆ ಲೋಪ ಬರುವುದಿಲ್ಲ. ಆದರೆ ಆ ಎರಡು ಪದಗಳೊಳಗೆ ಘನಿಷ್ಠವಾದ ಏಕಾರ್ಥೀಭಾವ ಮಾತ್ರ ಇದ್ದೇಇರುತ್ತದೆ (ಉದಾ:- ಸಂಸ್ಕೃತ-ಕಂಠೇಕಾಲಃ : ಕನ್ನಡ-ಉಪ್ಪಿನಕಾಯಿ)· ನಮ್ಮ ಭಾಷೆಗಳಲ್ಲಿ ಎರಡು ಪದಗಳು ಸಮಸ್ತೀಕೃತವಾಗದಿರುವಲ್ಲಿಯೂ ಸಂಧಿವಶಾತ್ ಒಂದನ್ನೊಂದು ಕೂಡಿಕೊಂಡಿರುತ್ತವೆ. ಹಾಗೆ ಕೂಡಿದೊಡನೆ ಅದೊಂದು ಸಮಾಸಪದವೆನ್ನಿಸುವುದಿಲ್ಲ. ಅದು ಸಮಾಸಪದವೆನ್ನಿಸಿಕೊಳ್ಳಬೇಕಾದರೆ ಅವುಗಳೊಳಗೆ ಏಕಾರ್ಥೀಭಾವವು ಅವಶ್ಯವಾಗಿರುತ್ತದೆ. (ಉದಾ: ಒಂದೆರಡು; ಹಲವೆಡೆ; ಮನೆಗೋಡು ಇತ್ಯಾದಿ). ಸಮಾಸಗಳೊಳಗೆ ಅಲುಕ್‌ಸಮಾಸವೆಂಬುದನ್ನೂ ನಮ್ಮ ವೈಯಾಕರಣರು ಸ್ವೀಕರಿಸಿರುವುದರಿಂದ, ಪೂರ್ವಪದದ ವಿಭಕ್ತಿಲೋಪದಂತೆಯೇ ಏಕಾರ್ಥೀಭಾವವೂ ಸಮಾಸತ್ವದ ಒಂದು ವಿಶಿಷ್ಟ ಲಕ್ಷಣವೆಂದು ಭಾವಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಈ ಮೇಲೆ ಉದಾಹರಿಸಿದ 'ಲಜ್ಜೆಗೆಟ್ಟ' ಇತ್ಯಾದಿ ಪದಯುಗ್ಮಗಳ ವಿಗ್ರಹರೂಪಕ್ಕೂ ಸಂಯುಕ್ತರೂಪಕ್ಕೂ ಭೇದವೇನೂ ಕಂಡುಬಾರದದಿದ್ದರೂ ಅವು ಸಮಾಸಪದಗಳೆಂದೇ ಭಾವಿಸುವುದು ಯುಕ್ತವೆಂದು ತೋರಬಹುದು.

ಆದರೆ ಸಮಾಸ ಅಥವಾ ಸಮಸ್ತ ಎಂಬ ಪದದ ಮೂಲಾರ್ಥವು 'ಸಂಕ್ಷಿಪ್ತ' ಎಂಬುದೇ ಆಗಿದೆ. ಆದಕಾರಣ ಪೂರ್ವಪದದ ವಿಭಕ್ತಿಲೋಪಾದಿಗಳಿಂದ (ಅಪವಾದ-ಅಲುಕ್ ಸಮಾಸ) ಎರಡು ಪದಗಳು ಕೂಡಿ ಒಂದು ಸಂಕ್ಷಿಪ್ತ ರೂಪವಾಗಿರಬೇಕಾದುದು ಸಹ ಸಮಾಸಪದವೆಂಬುದರ ಒಂದು ಲಕ್ಷಣವೆಂದು ತಿಳಿಯಬೇಕಾಗುತ್ತದೆ. ತಾತ್ಪರ್ಯವಾಗಿ ಹೇಳುವುದಾದರೆ-ಸಮಾಸಪದವೆಂದು ಹೇಳಬೇಕಾದ ಪದಯುಗ್ಮಕ್ಕೆ ಈ ಮೊದಲು ಹೇಳಿದ ಪೂರ್ವಪದ ವಿಭಕ್ತಿಲೋಪ, ಎರಡು ಪದಗಳೊಳಗಿನ ಏಕಾರ್ಥೀಭಾವ-ಈಯೆರಡಲ್ಲದೆ ಸಂಕ್ಷಿಪ್ತತೆ ಎಂಬ ಮೂರನೆಯದೊಂದು ಲಕ್ಷಣವೂ ಇದೆಯೆಂದು ಹೇಳುವುದು ತಪ್ಪಾಗಲಾರದು. ಈ ದೃಷ್ಟಿಯಿಂದ ನೋಡಿದಾಗ, ಮೇಲೆ ಉದಾಹರಿಸಿದ ಉರಿಹತ್ತಿ, ಲಜ್ಜೆಗೆಟ್ಟ ಇತ್ಯಾದಿ ಪದಸಂಯೋಗಗಳ ವಿಗ್ರಹರೂಪವೂ ಸಂಯುಕ್ತರೂಪವೂ ಅಭಿನ್ನವೆಂದು ಕಂಡುಬರುವುದರಿಂದ ಸಂಕ್ಷಿಪ್ತತೆಯೆಂಬ ಸಮಾಸದೊಂದು ಲಕ್ಷಣಕ್ಕೂ ಅವುಗಳಲ್ಲಿ ಎಡೆಯೇ ಇಲ್ಲವೆಂಬುದು ಅವಗತವಾಗುತ್ತದೆ. 'ಸಮಾಸಪದ'ಎಂಬ ಸಂಜ್ಞೆಯ ಲಕ್ಷಣಗಳೊಳಗೆ ಇದೂ ಇಲ್ಲಿ ಲುಪ್ತವಾಗಿರುವುದರಿಂದ ಇಂತಹ ಸಂಯೋಗ

ಕಾರಕಾನ್ವಯಿತ್ವವನ್ನು ಕಳೆದುಕೊಂಡ ಕೃದಂತ; ಎರಡನೆಯದು ಕಾರಕಾನ್ವಯಿಯಾಗಿಯೇ ಉಳಿದಿರುವ ಕೃದಂತ.]

ಗಳನ್ನು ಸಮಾಸವೆಂದು ಕರೆಯುವುದು ಸರಿಯೆಂದಾಗಲಾರದು. ಇದೂ ಅಲ್ಲದೆ ಏಕಾರ್ಥೀಭಾವವುಂಟೆಂಬ ಒಂದೇ ಲಕ್ಷಣವನ್ನವಲಂಬಿಸಿ ಪದಯುಗ್ಮಗಳನ್ನು ಸಮಾಸಪದಗಳೆನ್ನುವುದರಲ್ಲಿ ಔಚಿತ್ಯವಿಲ್ಲವೆನ್ನಬೇಕಾಗುತ್ತದೆ. ಮತ್ತು ಇಂತಹ ಪ್ರಯೋಗಗಳ ಪೂರ್ವಪದಗಳಲ್ಲಿ ವಸ್ತುತಃ ಪ್ರಥಮಾವಿಭಕ್ತಿ ಲುಪ್ತವಾಗಿದೆಯೆಂದು ವ್ಯಾಕರಣ ಪಂಡಿತರು ವಾದಿಸಬಹುದಾದರೂ ಇತರರ ಅವಗಾಹನೆಗೆ ಇದು ಬರುವಂತಹುದಲ್ಲ. ಏಕೆಂದರೆ ಇಂತಹ ಸಂಯೋಗಗಳ ಪೂರ್ವಪದಗಳಲ್ಲಿ ವಿಭಕ್ತಿಪ್ರತ್ಯಯ ಲೋಪವೆಂಬುದು, ಅವ್ಯಯಗಳಲ್ಲಿ ಹೇಗೋ ಹಾಗೆ, ವ್ಯಾಕರಣತತ್ವ ಸಮರ್ಥನೆಗಾಗಿ ಆರೋಪಿತವಾಗುವಂತಹುದೇ ಹೊರತು ಸಹಜವಲ್ಲ. ಈ ಎಲ್ಲ ಕಾರಣಗಳಿಂದ ಸಮಾಸರೂಪವೂ ವಿಗ್ರಹರೂಪವೂ ಅಭಿನ್ನವಾಗಿ ಕಾಣುವ ನಾಮಕ್ರಿಯಾ ಸಂಯೋಗಗಳನ್ನು ಅವು ನಾಮಕ್ರಿಯಾ ಸಂಯೋಗಗಳೆಂಬೊಂದೇ ಕಾರಣದಿಂದ ಕ್ರಿಯಾಸಮಾಸಗಳೆಂದು ಹೇಳುವುದು ಅನುಚಿತವೆಂದು ಸಿದ್ಧವಾಗುತ್ತದೆ.

ಆದರೆ ಈ ಸಂಯೋಗಗಳು ಎಷ್ಟೋ ಕಡೆಗಳಲ್ಲಿ ಲಾಕ್ಷಣಿಕವಾಗಿ ವಿಶಿಷ್ಟಾರ್ಥವನ್ನು ಕೊಡುವ ನಿತ್ಯಸಂಯುಕ್ತ ರೂಪಗಳಾಗಿರುವುದರಿಂದ (ಉದಾ :- ಕೂದಲು ಕೊಂಕು, ಲಜ್ಜೆಗೆಟ್ಟ ಇತ್ಯಾದಿ) ಇವುಗಳನ್ನು ವ್ಯಕ್ತವಾಗಿ ಉಚ್ಚರಿಸಿದರೆ ಅರ್ಥಹಾನಿಯೂ ಆಗುವುದರಿಂದ, ಇಂಥವುಗಳನ್ನು ಏನೆಂದು ಕರೆಯಬೇಕು? - ಎಂಬೊಂದು ಪ್ರಶ್ನೆ ಇಲ್ಲಿ ಹುಟ್ಟಬಹುದು. ನನಗೆ ಕಾಣುವಂತೆ ಅದಕ್ಕೆ ಪರಿಹಾರವೇನೆಂದರೆ–ಇವನ್ನು 'ಸಂಘಟಿತ ಕ್ರಿಯಾವಾಚಕ'ಗಳೆಂದು ಕರೆಯಬಹುದೆನ್ನುವುದಾಗಿದೆ. ಈ ವಿಷಯವನ್ನು ಕನ್ನಡ ವ್ಯಾಕರಣ ವಿದ್ವಾಂಸರು ಇನ್ನಷ್ಟು ಸೂಕ್ಷ್ಮವಾಗಿ ಪರಾಮರ್ಶಿಸಬೇಕೆಂಬುದು ನನ್ನ ಅಪೇಕ್ಷೆಯಾಗಿದೆ.

ಈವರೆಗೆ ಮಾಡಿದ ವಿಚಾರದಿಂದ ಕ್ರಿಯಾಸಮಾಸವೆಂಬೊಂದು ಸಮಾಸಭೇದವು ಕನ್ನಡಕ್ಕೆ ಅನವಶ್ಯವೆಂಬ ಮಾತಿನಲ್ಲಿ ಹುರುಳಿಲ್ಲವೆಂಬುದನ್ನೂ ಹಳಗನ್ನಡದಲ್ಲಿ ಹೇಗೋ ಹಾಗೆ ಹೊಸಗನ್ನಡದಲ್ಲಿಯೂ ಇದು ಉಪಸ್ಥಿತವಾಗಿಯೇ ಇದೆಯೆಂಬುದನ್ನೂ ವಾಚಕರು ಮನಗಾಣುವರೆಂದು ನಂಬಿದ್ದೇನೆ.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನೂ ಹೇಳುವುದು ಅಪ್ರಸ್ತುತವಾಗಲಾರದೆಂದು ನನ್ನ ಭಾವನೆ. ಅದೇನೆಂದರೆ – ಕ್ರಿಯಾಸಮಾಸವಾಗಿರದೆಯೂ ನಿತ್ಯಸಂಯುಕ್ತವಾಗಿಯೇ ಇರಬೇಕಾದ ಕೆಲವು ಪದಯುಗ್ಮಗಳು ರೂಢಿಯಲ್ಲಿವೆ. ಉದಾ :-

ಮಗು **ನಡೆದಾಡತೊಡಗಿತು** (ನಡೆದು + ಆಡು)
ಹಕ್ಕಿ ಆಕಾಶದಲ್ಲಿ **ಹಾರಾಡಿತು** (ಹಾರಿ + ಆಡು)
ಬೆಸ್ತನು ಹಿಡಿದ ಮೀನನ್ನು ಬಿಟ್ಟುಬಿಟ್ಟನು (ಬಿಟ್ಟು + ಬಿಡು)
ಬೆಂಕಿಯ ಕೆನ್ನಾಲಗೆಗಳು ಹುಲ್ಲುಗಾವಲನ್ನು

ಸುಟ್ಟುರುಹಿದವು (ಸುಟ್ಟು + ಉರುಹು)
ಓ ಭಾರತೀಯ **ಎದ್ದೇಳು** (ಎದ್ದು + ಏಳು)
ಅವರು ಸಂತಸದಿಂದ **ನಲಿದಾಡಿದರು** (ನಲಿದು + ಆಡು)

ಇಲ್ಲಿ ನಡೆದಾಡು ಮೊದಲಾದ ಸಂಯೋಗಗಳಲ್ಲಿ ಉಭಯಪದಗಳು ಅನ್ಯೋನ್ಯವಾಗಿ ಕೂಡಿಯೇ ವಿಶಿಷ್ಟಾರ್ಥವೊಂದನ್ನು ಕೊಡುವವುಗಳಾಗಿವೆ. ಎಂದರೆ, ಇವುಗಳಲ್ಲಿ ಏಕಾರ್ಥೀಭಾವವು ಸ್ಫುಟವಾಗಿ ಕಂಡು ಬರುವ ಕಾರಣ ಸಕೃದ್ದೃಷ್ಟಿಗೆ ಇವು ಕ್ರಿಯಾ-ಸಮಾಸವೆಂಬ ಭ್ರಾಂತಿಯನ್ನು ಹುಟ್ಟಿಸಬಹುದಾದರೂ ಕ್ರಿಯಾಸಮಾಸವೆಂಬ ಪದಸಂಯೋಗದ ಪೂರ್ವಪದವು ನಾಮಪದವೇ ಆಗಿರುತ್ತದೆಂಬುದನ್ನು ಮನಗಂಡರೆ 'ನಡೆದಾಡು' ಇತ್ಯಾದಿಗಳು ಸಮಾಸಗಳಲ್ಲವೆಂಬುದು ಅವಗತವಾಗದಿರದು. ಪೂರ್ವಪದೋತ್ತರಪದಗಳೆರಡೂ ಸಹ ಕಾರಕಾನ್ವಯಿಗಳಾಗಿಯೇ ಎಂದರೆ ಕ್ರಿಯಾವಾಚಕಗಳಾಗಿಯೇ ಇರುವವಾದರೆ ಅವು ಕ್ರಿಯಾಸಮಾಸವೆಂಬ ಸಂಜ್ಞೆಗೆ ಅರ್ಹವಾಗುವವಲ್ಲವೆಂಬುದನ್ನು ಶಬ್ದಾನುಶಾಸನಕಾರನು ವಿಶದೀಕರಿಸಿರುತ್ತಾನೆ. ಕ್ರಿಯಾಸಮಾಸವೆಂಬ ಸಮಾಸಭೇದದಲ್ಲಿ ಪೂರ್ವಪದವು ಕಾರಕಾನ್ವಯಿಯಾಗಿರದೆ ಕ್ರಿಯಾನ್ವಯಿಯಾಗಿಯೇ ಇರಬೇಕಾಗುತ್ತದೆಂಬುದು ಕನ್ನಡದ ವೈಯಾಕರಣರೆಲ್ಲರಿಗೂ ಸಮ್ಮತವಾದ ನಿಯಮವಾಗಿದೆ. ಹಾಗಿದ್ದರೆ ನಡೆದಾಡು, ಸುಟ್ಟುರುಹು ಮೊದಲಾದ ಸಂಯೋಗಗಳನ್ನು ಏನೆಂದು ಕರೆಯಬೇಕು ?—ಎಂಬೊಂದು ಪ್ರಶ್ನೆ ಇಲ್ಲಿ ಉದ್ಭವಿಸಬಹುದು. ಇದಕ್ಕೆ ಉತ್ತರವಾಗಿ ನನಗೆ ಹೊಳೆದಂತೆ ಹೇಳುವುದಾದರೆ- ಇಂಥವುಗಳನ್ನೆಲ್ಲ ಸಂಯುಕ್ತ ಕ್ರಿಯಾವಾಚಕಗಳೆಂದು ಹೆಸರಿಸುವುದು ಯುಕ್ತವೆಂದಾಗಿದೆ.* ●

---

* ಪ್ರಸ್ತುತ ಲೇಖನದ ಲಿಪಿಕಾರರಾದ ಶ್ರೀ ಪಾದೇಕಲ್ಲು ವಿಷ್ಣುಭಟ್ಟ, ಎಂ.ಎ.— ಇವರಿಗೆ ಅಭಿನಂದನಪೂರ್ವಕ ವಂದನೆಗಳು—ಸೇಡಿಯಾಪು ಕೃಷ್ಣಭಟ್ಟ 16-2-95

ಏಕಾವಳಿ ಅಲಂಕಾರ

—ಎಸ್. ಜಗನ್ನಾಥ

ಅಲಂಕಾರ ಶಾಸ್ತ್ರದಲ್ಲಿ ನಿರೂಪಿತವಾಗಿರುವ ಅರ್ಥಾಲಂಕಾರಗಳಲ್ಲಿ ಶೃಂಖಲಾ ಮೂಲವಾದ ಅಲಂಕಾರಗಳು ಮೂರು. ಒಂದು, ಸಾರ. ಎರಡು, ಕಾರಣಮಾಲಾ. ಮೂರು, ಏಕಾವಳಿ.

ಏಕಾವಳಿಯನ್ನು 'ಆವಳಿ' ಎಂದೂ 'ಮುಕ್ತಪದಗ್ರಹ'ವೆಂದೂ ಪ್ರಾಚೀನಾಲಂಕಾರಿಕರು ಕರೆಯುತ್ತಿದ್ದರು. ಆವಳಿ ಎಂದರೆ ಸಾಲು. ಈ ಅಲಂಕಾರದ ಲಕ್ಷ್ಯದಲ್ಲಿ ಪದಗಳು ಹೇಳಿಕೆಗಳು ಸಾಲುಸಾಲಾಗಿ ಬರುವುದರಿಂದ ಈ ಹೆಸರು ಸರಿಯಾಗಿದೆ. ಮುಕ್ತ ಪದಗ್ರಹವೆಂದರೆ ಬಿಟ್ಟ ಪದವನ್ನು ಮತ್ತೆ ತೆಗೆದುಕೊಳ್ಳುವುದು. ಇದು ಅಲಂಕಾರದ ವಿವರಣೆಯೇ ಹೊರತು ಹೆಸರು ಆಗುವುದು ಕಷ್ಟ. ನವೀನಾಲಂಕಾರಿಕರು ಸ್ವಲ್ಪ ತಲೆ ಓಡಿಸಿ 'ಏಕಾವಳಿ' ಎಂದು ಹೆಸರಿಟ್ಟರು. ಏಕಾವಳಿ ಎಂದರೆ ಮುತ್ತಿನ ಸರ. ಮುತ್ತಿನ ಸರದಲ್ಲಿ ಮಾಲೆಯಾಗಿ ಪೋಣಿಸಲ್ಪಟ್ಟ ಮುತ್ತಿನ ಮಣಿಗಳಂತೆ ಏಕಾವಳಿಯಲ್ಲಿ ಪದಗಳು/ಹೇಳಿಕೆಗಳು ಅಕ್ಕಪಕ್ಕದಲ್ಲಿ ಜೋಡಣೆಗೊಂಡಿರುತ್ತವೆ.

ಮಮ್ಮಟ, ವಿಶ್ವನಾಥ, ವಿದ್ಯಾನಾಥ, ಅಪ್ಪಯ್ಯ ದೀಕ್ಷಿತ, ಜಗನ್ನಾಥ, ರಾಜ ಚೂಡಾಮಣಿದೀಕ್ಷಿತ ಇವರೆಲ್ಲ ಈ ಅಲಂಕಾರವನ್ನು ತಮ್ಮ ರಚನೆಗಳಾದ ಕಾವ್ಯ ಪ್ರಕಾಶ, ಸಾಹಿತ್ಯದರ್ಪಣ, ಪ್ರತಾಪರುದ್ರೀಯ, ಕುವಲಯಾನಂದ, ರಸಗಂಗಾಧರ, ಕಾವ್ಯಾಲಂಕಾರಕಾರಿಕಾ– ಈ ಗ್ರಂಥಗಳಲ್ಲಿ ವರ್ಣಿಸಿರುತ್ತಾರೆ.

ಮಮ್ಮಟನ ಕಾವ್ಯಪ್ರಕಾಶ (vol II 10. 131. ಪುಟ 523, 524.)

ಸ್ಥಾಪ್ಯತೇಽಪೋಹ್ಯತೇ ವಾಪಿ ಯಥಾಪೂರ್ವಂ ಪರಂ ಪರಮ್ ।
ವಿಶೇಷಣತಯಾ ಯತ್ರ ವಸ್ತು ಸೈಕಾವಲೀ ಮತಾ ॥

(ಗದ್ಯ ವಿವರಣೆ) ಪೂರ್ವ ಪೂರ್ವಂ ಪ್ರತಿ ಯಥೋತ್ತರಸ್ಯ (ಉತ್ತರೋತ್ತರಸ್ಯ ಪಾಠಾಂತರ) ವಸ್ತುನೋ ವೀಪ್ಸಯಾ ವಿಶೇಷಣಭಾವೇನ ಯತ್ । ಸ್ಥಾಪನಂ ನಿಷೇಧೋ ವಾ ಸಂಭವತಿ, ಸಾ ದ್ವಿಧಾ ಬುಧೈಃ ಏಕಾವಲೀ ಭಣ್ಯತೇ । ಕ್ರಮೇಣೋದಾಹರಣಮ್ :

ಪುರಾಣಿ ಯಸ್ಯಾಂ ಸವರಾಂಗನಾನಿ
ವರಾಂಗನಾ ರೂಪ ಪುರಸ್ಕೃತಾಂಗ್ಯಃ ।
ರೂಪಂ ಸಮುನ್ಮೀಲಿತ ಸದ್ವಿಲಾಸಂ
ಅಸ್ತ್ರಂ ವಿಲಾಸಾಃ ಕುಸುಮಾಯುಧಸ್ಯ

ನ ತಜ್ಜಲಂ ಯನ್ನ ಸುಚಾರುಪಂಕಜಂ ನ ಪಂಕಜಂ ತದ್ ಯದಲೀನಷಟ್ಪದಮ್ ।
ನ ಷಟ್ಪದೋऽಸೌ ನ ಜುಗುಂಜ ಯಃ ಕಲಂ ನ ಗುಂಜಿತಂ ತನ್ನ ಜಹಾರ ಯನ್ಮನಃ ॥1

(ಒಂದು ವಸ್ತುವು ಹಿಂದಿನದ್ದಕ್ಕೆ ಅನುಗುಣವಾಗಿ ಮುಂದುಮುಂದಿನ ಭಾಗದ ದ್ವಿರುಕ್ತಿಯಾಗಿ [2] ಬಂದು ವಿಶೇಷಣ ರೂಪದಲ್ಲಿ ಸ್ಥಾಪಿತವಾದಲ್ಲಿ ಅಥವಾ ಅಲ್ಲಗಳೆಯಲ್ಪಟ್ಟಲ್ಲಿ ಅದು ಏಕಾವಳಿ.

ಉದಾ : (ಸ್ಥಾಪನೆಗೆ :) ಅದರಲ್ಲಿ (?) ಪಟ್ಟಣಗಳಲ್ಲಿ ಒಳ್ಳೆಯ ಹೆಂಗುಸರಿದ್ದರು. ಒಳ್ಳೆಯ ಹೆಂಗುಸರ ಅಂಗಗಳಲ್ಲಿ ಸೌಂದರ್ಯ ತುಂಬಿಕೊಂಡಿತ್ತು. ಸೌಂದರ್ಯವು ಒಯ್ಯಾರವನ್ನು ಅರಳಿಸುತ್ತಿತ್ತು. ಒಯ್ಯಾರವು ಮನ್ಮಥನ ಅಸ್ತ್ರವಾಗಿತ್ತು.

(ಅಲ್ಲಗಳೆಯುವಿಕೆಗೆ :) ತಾವರೆ ಹೂವುಗಳನ್ನು ಅರಳಿಸದಿರುವುದು ನೀರೇ (=ಸರೋವರವೇ?) ಅಲ್ಲ. ತುಂಬಿ ಮುತ್ತಿಕೊಳ್ಳದಿರುವುದು ತಾವರೆಯೇ ಅಲ್ಲ. ಗುಂಯ್‌ಗುಡದಿರುವುದು ತುಂಬಿಯೇ ಅಲ್ಲ. ಮನಸ್ಸನ್ನು ಸೆಳೆಯದಿರುವುದು ಗುಂಯ್ ಗುಟ್ಟುವಿಕೆಯೇ ಅಲ್ಲ.)

ಮೊದಲನೆಯ ಉದಾಹರಣೆಯಲ್ಲಿ ಪಟ್ಟಣಗಳಿಗೆ ಒಳ್ಳೆಯ ಹೆಂಗುಸರು, ಅವರಿಗೆ ಅಂಗಾಂಗಳ ವಿಶೇಷಣವೆಂಬ ರೀತಿಯಲ್ಲಿ ಸೌಂದರ್ಯ, ಅದಕ್ಕೆ ಒಯ್ಯಾರ, ಅದಕ್ಕೆ ಅಸ್ತ್ರ–ಈ ಕ್ರಮದಲ್ಲಿ ವಿಶೇಷಣವು ವಿಹಿತವಾಗಿದೆ. ಮುಂದಿನ ಉದಾಹರಣೆಯಲ್ಲೂ ಹೀಗೆಯೇ ತಿಳಿದುಕೊಳ್ಳಬೇಕು.

ವಿಶ್ವನಾಥನ ಸಾಹಿತ್ಯ ದರ್ಪಣ (ಪು. 641)

ಪೂರ್ವಂ ಪೂರ್ವಂ ಪ್ರತಿ ವಿಶೇಷಣತ್ವೇನ ಪರಂ ಪರಮ್ ।
ಸ್ಥಾಪ್ಯತೇऽಪೋಹ್ಯತೇ ಚೇತ್ ತತ್ ಸ್ಯಾತ್ ತಥೈಕಾವಳೀ ದ್ವಿಧಾ ॥ 3
ಕ್ರಮೇಣೋದಾಹರಣಮ್ :

ಸರೋ ವಿಕಸಿತಾಂಭೋಜಮಂಭೋಜಂ ಭೃಂಗಸಂಗತಮ್ ।
ಭೃಂಗಾ ಯತ್ರ ಸಸಂಗೀತಾಃ ಸಂಗೀತಂ ಸಸ್ಮರೋದಯಮ್ ॥

(ಸರೋವರದಲ್ಲಿ ಕಮಲಗಳು ಅರಳಿವೆ. ಕಮಲವು ಭೃಂಗಗಳಿಂದ ಕೂಡಿದೆ. ಭೃಂಗಗಳು ಸಂಗೀತ ಹಾಡುತ್ತಿವೆ. ಸಂಗೀತವು ಪ್ರೇಮೋದಯವುಳ್ಳದ್ದಾಗಿದೆ.)

---

1. ಇದು ಭಟ್ಟಿಕಾವ್ಯದಲ್ಲಿ ಬರುವ ಪದ್ಯ. (2. 19)
2. 'ದ್ವಿರುಕ್ತಿಯಾಗಿ'–ಎಂಬುದು ಮೂಲಕಾರಿಕೆಯಲ್ಲಿಲ್ಲವಾದರೂ, ಅದಕ್ಕೆ ವ್ಯಾಖ್ಯಾರೂಪವಾಗಿ ಸ್ವಯಂ ಗ್ರಂಥಕರ್ತೃವೇ ಬರೆದ ವೃತ್ತಿಭಾಗದಲ್ಲಿದೆ.
3. ಈ ಲಕ್ಷಣವು ಮಮ್ಮಟನ ಲಕ್ಷಣದಲ್ಲಿಲ್ಲದ ಹೊಸತೇನನ್ನೂ ಹೇಳುವುದಿಲ್ಲ.

'ನ ತಜ್ಜಲಂ........' (ಈ ಪದ್ಯವನ್ನು ಮಮ್ಮಟನೂ ಉದಾಹರಿಸಿದ್ದಾನೆ. ಇದರ ಮೂಲ ಹಾಗೂ ಅನುವಾದವನ್ನು ಈಗಾಗಲೇ ಕೊಟ್ಟಿದೆ.)

ಕ್ವಚಿದ್ ವಿಶೇಷ್ಯಮಪಿ ಯಥೋತ್ತರ ವಿಶೇಷಣತಯಾ ಸ್ಥಾಪಿತಮಪೋಹಿತಂ ಚ ದೃಶ್ಯತೇ. ಯಥಾ—

ವಾಪ್ಯೋ ಭವಂತಿ ವಿಮಲಾ ಸ್ಫುಟಂತಿ ಕಮಲಾನಿ ವಾಪೀಷು ॥
ಕಮಲೇಷು ಪತಂತ್ಯಲಯಃ ಕರೋತಿ ಸಂಗೀತಮಲಿಷು ಪದಮ್ ॥

(ಕೆಲವೊಮ್ಮೆ ವಿಶೇಷ್ಯರೂಪವಾದ ಹೇಳಿಕೆಯೇ ಮುಂದಿನದ್ದಕ್ಕೆ ವಿಶೇಷಣ ರೂಪದಲ್ಲಿ ಸ್ಥಾಪನೆಯಾಗುವುದೋ ನಿಷೇಧಿಸಲ್ಪಡುವುದೋ ಆಗಿರುತ್ತದೆ. ಉದಾಹರಣೆ:

ಕೊಳಗಳು ತಿಳಿಯಾಗಿವೆ. ಕೊಳಗಳಲ್ಲಿ ತಾವರೆಹೂಗಳು ಅರಳುತ್ತವೆ. ತಾವರೆ ಹೂಗಳಲ್ಲಿ ತುಂಬಿಗಳು ಎರಗುತ್ತವೆ. ತುಂಬಿಗಳಲ್ಲಿ ಸಂಗೀತವು ಅವಕಾಶ ಗಿಟ್ಟಿಸಿದೆ.[3]

ವಿದ್ಯಾನಾಥನ ಪ್ರತಾಪರುದ್ರೀಯ (8. 113, 114)

ಯತ್ರೋತ್ತರೋತ್ತರೇಷಾಂ ಸ್ಯಾತ್ ಪೂರ್ವಂ ಪೂರ್ವಂ ಪ್ರತಿ ಕ್ರಮಾತ್ ।
ವಿಶೇಷಣತ್ವಕಥನಂ ಅಸಾವೇಕಾವಳೀ ಮತಾ ॥

(ಈ ಲಕ್ಷಣದಲ್ಲಿಯೂ ಹೊಸತೇನೂ ಇಲ್ಲ)

ಪ್ರತಾಪರುದ್ರನಗರೀ ಸುಜನೈರುಪಶೋಭಿತಾ ।
ಸುಜನಾಃ ಸ್ಫೀತವಿಭವೈರ್ವಿಭವಾಃ ಸ್ಥೈರ್ಯಶಾಲಿನಃ ॥

(ಪ್ರತಾಪರುದ್ರನ ಪಟ್ಟಣವು ಸಜ್ಜನರಿಂದ ಶೋಭಿತವಾಗಿದೆ. ಸಜ್ಜನರು ಉನ್ನತವಾದ ಸಂಪತ್ತಿನಿಂದ ಶೋಭಾಯಮಾನರಾಗಿದ್ದಾರೆ. ಸಂಪತ್ತುಗಳು ಸ್ಥಿರವಾಗಿವೆ.)

ನ ತದ್ರಾಜ್ಯಂ ಪ್ರಜಾ ಯತ್ರ ನ ಭವಂತ್ಯೂರ್ಜಿತಶ್ರಿಯಃ ।
ನ ತಾಃ ಪ್ರಜಾ ಪ್ರಭುರ್ಯಾಸಾಂ ನ ಸ್ವಯಂ ಕಾಕತೀಶ್ವರಃ ॥

(ಉನ್ನತವಾದ ಸಂಪತ್ತಿನ ಒಡೆಯರಲ್ಲದ ಪ್ರಜೆಗಳಿಂದ ಕೂಡಿಲ್ಲದ ರಾಜ್ಯವು ರಾಜ್ಯವೇ ಅಲ್ಲ. ಯಾರ ಒಡೆಯನು ವೀರರುದ್ರ ರಾಜನಲ್ಲವೋ ಅವರು ನಿಜವಾಗಿ ಪ್ರಜೆಗಳೇ ಅಲ್ಲ.)

---

3. ಈ ಎರಡನೆ ಉದಾಹರಣೆಯಲ್ಲಿ ವಿಶೇಷ್ಯಭಾಗವೇ (ವಾಪ್ಯಃ) ಮುಂದಿನ ವಾಕ್ಯದ ಒಂದು ಭಾಗವಾಗುತ್ತದೆ. 'ಸರೋ....' ಇತ್ಯಾದಿ ಉದಾಹರಣೆಯಲ್ಲಿ ವಿಶೇಷಣ ಭಾಗದಲ್ಲಿ ಬರುವ 'ಅಂಭೋಜ' ಎಂಬುದು ಅನುವೃತ್ತವಾಗಿದೆ. ಈ ಎರಡನೆ ಪ್ರಕಾರದಲ್ಲೂ ನಿಷೇಧರೂಪವಾದ ಉದಾಹರಣೆ ಸಾಧ್ಯವೆಂದು ವಿದ್ಯಾನಾಥ ಹೇಳಿದ್ದಾನೆ, ಆದರೆ ಉದಾಹರಣೆ ನೀಡಿಲ್ಲ.

ಅಪ್ಪಯ್ಯ ದೀಕ್ಷಿತನ ಕುವಲಯಾನಂದ (ಪುಟ 126)

ಗೃಹೀತ ಮುಕ್ತ ರೀತ್ಯಾऽರ್ಥ ಶ್ರೇಣಿರೇಕಾವಳೀ ಮತಾ ।

(ಇದಕ್ಕೆ ಗ್ರಂಥಕರ್ತೃ ಸ್ವಯಂ ನೀಡಿರುವ ಗದ್ಯವಿವರಣೆಯ ಸಾರಾಂಶವೇನೆಂದರೆ, ಪದವನ್ನು ಹಿಡಿದಿಟ್ಟುಕೊಂಡು ಬಿಡುವ ರೀತಿಯಲ್ಲಿ ಬರುವ ಸಾಲು ಏಕಾವಳಿಯೆನ್ನಿಸುತ್ತದೆ. ಹಿಡಿದಿಟ್ಟುಕೊಂಡು ಬಿಡುವ ರೀತಿಯೆಂದರೆ, ಹಿಂದು ಹಿಂದಿನದ್ದು ವಿಶೇಷಣವಾಗಿರುವುದು ಅಥವಾ ಹಿಂದು ಹಿಂದಿನದ್ದಕ್ಕೆ ಮುಂದು ಮುಂದಿನದ್ದು ವಿಶೇಷಣವಾಗಿರುವುದು)

ನೇತ್ರೇ ಕರ್ಣಾಂತ ವಿಶ್ರಾಂತೇ ಕರ್ಣೌ ದೋಃಸ್ತಂಭದೋಲಿನೌ ।
ದೋಃಸ್ತಂಭೌ ಜಾನುಪರ್ಯಂತ ಪ್ರಲಂಬನ ಮನೋಹರೌ ।
ಜಾನುನೀ ರತ್ನ ಮುಕುರಾಕಾರೇ ತಸ್ಯ ಮಹೀಭುಜಃ ॥[1]

ಆ ರಾಜನ ಕಣ್ಣುಗಳು ಕಿವಿಯವರೆಗೆ ವಿಸ್ತರಿಸಿವೆ. ಕಿವಿಗಳು ಸ್ತಂಭದಂತಿರುವ ತೋಳುಗಳ ಮೇಲೆ ಜೋಲಾಡುತ್ತಿವೆ. ಸ್ತಂಭದಂತಿರುವ ತೋಳುಗಳು ಮಂಡಿಯ ವರೆಗೆ ಚಾಚಿಕೊಂಡು ಮನೋಹರವಾಗಿವೆ ಮಂಡಿಗಳು. ರತ್ನದ ಕನ್ನಡಿಯಂತೆ ಇವೆ.)

ದಿಕ್ ಕಾಲಾತ್ಮಸಮೈವ ಯಸ್ಯ ವಿಭುತಾ ಯಸ್ತತ್ರ ವಿದ್ಯೋತತೇ
ಯತ್ರಾಮುಷ್ಯ ಸುಧೀಭವಂತಿ ಕಿರಣಾ ರಾಶೇಃ ಸ ಯಾಸಾಮಭೂತ್ ।
ಯಸ್ತತ್ ಪಿತ್ತ ಮುಷಃಸು ಯೋऽಸ್ಯ ಹವಿಷೇ ಯಸ್ತಸ್ಯ ಜೀವಾತವೇ
ವೋಢಾ ಯದ್ಗುಣಮೇಷ ಮನ್ಮಥರಿಪೋಸ್ತಾಃ ಪಾಂತು ವೋ ಮೂರ್ತಯಃ ॥

[ಇದು ಶಿವನ ಅಷ್ಟಮೂರ್ತಿಗಳೆನಿಸಿದ ಪಂಚಭೂತಗಳು ಹಾಗೂ ಯಾಗಕರ್ತೃ, ಸೂರ್ಯ, ಚಂದ್ರ– ಇವರ ವರ್ಣನೆ :]

ಒಂದು ವಸ್ತುವಿನ ಆಕಾಶದ ವಿಭುತ್ವವೆಂಬ ಧರ್ಮವು ದಿಕ್, ಕಾಲ, ಆತ್ಮ ಮೂರರಲ್ಲೂ ಇದೆ. ಅಲ್ಲಿ (ಆಕಾಶದಲ್ಲಿ) ಒಬ್ಬ (ಸೂರ್ಯ) ವಿರಾಜಮಾನನಾಗಿದ್ದಾನೆ. ಅವನ (ಸೂರ್ಯನ) ಕಿರಣಗಳು ಒಬ್ಬನಲ್ಲಿ (ಚಂದ್ರನಲ್ಲಿ) ಅಮೃತದಂತೆ (ತಂಪಾಗಿವೆ). ಅವನು (ಚಂದ್ರ) ಯಾವುದೋ ಒಂದರ (ನೀರಿನ) ರಾಶಿಯೆನ್ನಿಸಿದ ಸಮುದ್ರದಿಂದ ಹುಟ್ಟಿದ್ದಾನೆ. ಅದರ (ನೀರಿನ) ಪಿತ್ತವೆಂದು[2] ಒಬ್ಬನು (ಅಗ್ನಿಯು) ನಿರೂಪಿತನಾಗಿದ್ದಾನೆ.[3]

---

1. ಇದು ಒಂದೂವರೆ ಶ್ಲೋಕ.
2. ಅಗ್ನಿಯು 'ಅಪ್–ಪಿತ್ತ' (ನೀರಿನ ಪಿತ್ತ) ಎಂದು ಪುರಾಣಾದಿಗಳಲ್ಲಿದೆ.
3. ಇಲ್ಲಿರುವ ಏಕಾವಳಿಯು 'ಪರ್ಯಾಯೋಕ್ತ' ಅಲಂಕಾರಕ್ಕೆ ಅನುಕೂಲವಾಗಿದೆ.

ಅವನಿಗೆ (ಅಗ್ನಿಗೆ) ಹವಿಸ್ಸನ್ನು ನೀಡಲೆಂದೇ ಒಬ್ಬನು (ಯಾಗಕರ್ತೃವು) ಇದ್ದಾನೆ. ಅವನ (ಯಾಗಕರ್ತೃವಿನ) ಬದುಕಿಗೆ ಆಧಾರವಾಗಿರುವವನು ಮತ್ತೊಬ್ಬ (ವಾಯು) ಅವನು (ವಾಯುವು) ಮತ್ತೊಂದರ (ಭೂಮಿಯ) ಗುಣವನ್ನು (ಗಂಧವನ್ನು) ಒಯ್ಯುವ ಧರ್ಮವುಳ್ಳವನು. — ಶಿವನ ಈ ಅಷ್ಟಮೂರ್ತಿಗಳು ನಿಮ್ಮನ್ನು ಕಾಪಾಡಲಿ. [1]

ರಾಜಚೂಡಾಮಣಿ ದೀಕ್ಷಿತನ "ಕಾವ್ಯ ದರ್ಪಣಕಾರಿಕಾ"ದಲ್ಲಿ ಉಕ್ತವಾದ ಏಕಾವಳೀ ಲಕ್ಷಣವು ಮಮ್ಮಟೋಕ್ತವಾದದ್ದರ ಪುನರುಕ್ತಿ ಮಾತ್ರ. ಆದರೆ ಲಕ್ಷ್ಯಪದ್ಯಗಳು ಬೇರೆ.

ವಿಧಿಗೆ

ರಾಮ ಏವ ಧನುಷ್ಪಾಣಿಸ್ತದೇವ ದೃಢಶಿಂಜಿನಿ ।
ಸೈವ ಗಂಭೀರ ನಿರ್ಘೋಷಾ ಸ ಏವ ರಿಪು ಮೋಹನಃ ॥[2]

(ರಾಮನೊಬ್ಬನೇ ನಿಜವಾಗಿ ಧನುರ್ಧರ. ಬಿಗಿಯಾದ ಹೆದೆಯುಳ್ಳದ್ದೇ ನಿಜವಾದ ಧನುಸ್ಸು. ಗಂಭೀರವಾದ ಟಂಕಾರ ಮಾಡಲು ಸಮರ್ಥವಾದದ್ದೇ ನಿಜವಾದ ಹೆದೆ. ಶತ್ರುಗಳನ್ನು ತಬ್ಬಿಬ್ಬುಗೊಳಿಸುವ ಸಾಮರ್ಥ್ಯವುಳ್ಳದ್ದೇ ನಿಜವಾದ ಟಂಕಾರ.)

ನಿಷೇಧಕ್ಕೆ

ನ ಶಸ್ಯತೇ ಸ ಲೋಕೇಷು ಯತ್ರ ನೈವ ಗುಣಾಃ ಶುಭಾಃ ।
ನ ತೇ ಗುಣಾ ಯೇ ಕಾಕುತ್ಸ್ಥಪದಭಕ್ತಿಂ ವಿನಾಕೃತಾಃ ॥

(ಯಾರಲ್ಲಿ ಒಳ್ಳೆಯ ಗುಣಗಳಿಲ್ಲವೋ ಅವನು ಪ್ರಕಾಶಿಸುವುದಿಲ್ಲ. ಯಾವ ಗುಣಗಳು ರಾಮನ ಪಾದಗಳಲ್ಲಿ ಭಕ್ತಿಯಿಲ್ಲದೆ ಇವೆಯೋ ಅವು ಗುಣಗಳೇ ಅಲ್ಲ.)

ಈ ಅಲಂಕಾರದ ವಿಷಯವನ್ನು ಶಾಸ್ತ್ರೀಯವಾಗಿ ಹಾಗೂ ವಿಸ್ತೃತವಾಗಿ ವಿವೇಚಿಸಿದವನೆಂದರೆ **ಪಂಡಿತರಾಜಜಗನ್ನಾಥ**. ತನ್ನ **'ರಸಗಂಗಾಧರ'**ದಲ್ಲಿ (620, 624, 625) ಅವನು ಇದರ ಬಗೆಗೆ ಕೊಟ್ಟಿರುವ ಮಾಹಿತಿಗಳ ಸಾರಾಂಶವಿದು:

ಸಾಲಾಗಿ ಬಂದ ಅರ್ಥಗಳ (—ಹೇಳಿಕೆಗಳ) ಪೈಕಿ ಹಿಂದು ಹಿಂದಿನದು ಮುಂದು ಮುಂದಿನದಕ್ಕೂ ಮುಂದು ಮುಂದಿನದು ಹಿಂದು ಹಿಂದಿನದ್ದಕ್ಕೂ ಗಾಢವಾದ ಸಂಪರ್ಕ

---

1. ಹೇಳಬೇಕಾದದ್ದನ್ನು ನೇರವಾಗಿ ಹೇಳದೇ ಪ್ರಕಾರಾಂತರದಿಂದ ಹೇಳಿದರೆ ಅದನ್ನು 'ಪರ್ಯಾಯೋಕ್ತ'ವೆನ್ನುತ್ತಾರೆ. ಪ್ರಕೃತ ಉದಾಹರಣೆಯು ಪರ್ಯಾಯೋಕ್ತಕ್ಕೆ ಅನುಕೂಲವಾದ ಏಕಾವಳಿಯಾಗಿರುತ್ತದೆ.
2. ಇಲ್ಲಿ ವಿಶೇಷಣಾಂಶಗಳೆಲ್ಲ ಸಮಾಸದೊಳಗೆ ಸೇರಿಕೊಂಡಿರುವುದರಿಂದ 'ತದ್' ಶಬ್ದದ ಅನ್ವಯ ಸರಿಯಾಗಿ ಬಂದಿಲ್ಲ. ತಿರುಚಿ ಅರ್ಥಮಾಡಬೇಕಾಗಿದೆ.

ಪಡೆದಿರುವ ವಾಕ್ಯಾಕಾರವನ್ನು 'ಶೃಂಖಲಾ' ಎಂದು ಕರೆಯುತ್ತಾರೆ. ಇಂತಹ ಸಂಪರ್ಕವು ವಿಶೇಷ್ಯ ವಿಶೇಷಣ ಭಾವದ ರೂಪದಲ್ಲಿದ್ದರೆ ಏಕಾವಳಿ.[1]

ಇದು ಎರಡು ರೀತಿಯಾಗಿರುತ್ತದೆ. ಹಿಂದುಹಿಂದಿನದ್ದು ಮುಂದುಮುಂದಿನದ್ದಕ್ಕೆ ವಿಶೇಷ್ಯವಾಗಿರುವುದು ಒಂದು ಬಗೆ. ಹಿಂದುಹಿಂದಿನದು ಮುಂದುಮುಂದಿನದ್ದಕ್ಕೆ ವಿಶೇಷಣವಾಗಿರುವುದು ಮತ್ತೊಂದು ಬಗೆ. ಮೊದಲನೆಯದು ಸ್ಥಾಪಕ ಹಾಗೂ ಅಪೋಹಕವೆಂದು ಎರಡು ಬಗೆ.

ಉದಾ :

ಸ ಪಂಡಿತೋ ಯಃ ಸ್ವಹಿತಾರ್ಥದರ್ಶೀ ಹಿತಂ ಚ ತದ್ಯತ್ರ ಪರಾನಪಕ್ರಿಯಾ।
ಪರೇ ಚ ತೇ ಯೇ ಶ್ರಿತಸಾಧುಭಾವಾ ಸಾ ಸಾಧುತಾ ಯತ್ರ ಚಕಾಸ್ತಿ ಕೇಶವಃ॥

(ತನ್ನ ಹಿತವನ್ನು ನೋಡಿಕೊಳ್ಳುವವನೇ ನಿಜವಾಗಿ ಪಂಡಿತ. ಶ್ರೇಷ್ಠರಾದವರಿಗೆ ಅಪಕಾರವನ್ನು ಮಾಡದಿರುವುದೇ ನಿಜವಾಗಿ ಹಿತ. ಸಾಧುತ್ವವುಳ್ಳವರೇ ನಿಜವಾದ ಶ್ರೇಷ್ಠರು. ಕೇಶವನಲ್ಲಿ (ಭಕ್ತಿಯನ್ನು) ಹೊಂದಿರುವುದೇ ನಿಜವಾದ ಸಾಧುತ್ವ). ಇಲ್ಲಿ ವಿಶೇಷ್ಯವು ಸ್ಥಾಪಕವಾಗಿದೆ. ಹೇಗೆಂದರೆ 'ಪಂಡಿತ' ಎನ್ನುವುದು ಮೊತ್ತಮೊದಲಿಗೆ ವಿಶೇಷ್ಯವಾಗಿದೆ. ಅನಂತರ 'ಸ್ವಹಿತಾರ್ಥದರ್ಶೀ'—ಎನ್ನುವುದು ವಿಶೇಷಣವಾಗಿದೆ. ಈ ವಿಶೇಷಣವೇ ಸ್ಥಾಪಕ (= ಸ್ಥಾಪನೆ ಮಾಡುವಂತಹದು) ಆಗಿದೆ. ಏಕೆಂದರೆ 'ಸ್ವಹಿತಾರ್ಥದರ್ಶಿ'— ಎಂಬ ವಿಶೇಷಣದ ಸಂಬಂಧ ಉಂಟಾದಾಗಲೇ ಪಂಡಿತತ್ವದ ಸ್ಥಾಪನೆಯಾಗುತ್ತದೆ. 'ಹಿತಾರ್ಥದರ್ಶಿ' ಯೇ ಪಂಡಿತ, ಬೇರೊಬ್ಬನಲ್ಲ— ಎಂಬುದು ಇಂಥ ಸ್ಥಾಪನೆಯ ಸ್ವರೂಪ. ಇನ್ನು ವಿಶೇಷಣವಿಲ್ಲದಾಗ ವಿಶೇಷ್ಯತ್ವದ ಅಭಾವ ವಿದೆಯೆಂಬ ಜ್ಞಾನವನ್ನು ಉಂಟುಮಾಡುವುದನ್ನು ಅಪೋಹಕ ಎನ್ನುತ್ತಾರೆ. ಉದಾ:

ನಾಽಽರ್ಯಃ ಸ ಯೋ ನ ಸ್ವಹಿತಂ ಸಮೀಕ್ಷತೇ। ನ ತದ್ ಹಿತಂ ಯನ್ನ ಪರಾನುತೋಷಣಮ್।
ನ ತೇ ಪರೇ ಯೈರ್ನಹಿ ಸಾಧುತಾಽಽಶ್ರಿತಾ। ನ ಸಾಧುತಾ ಸಾ ನ ಹಿ ಯತ್ರ ಮಾಧವಃ॥

(ತನ್ನ ಹಿತದ ಬಗ್ಗೆ ಮುಂದಾಲೋಚನೆಯಿಲ್ಲದವನು ಗೌರವಾನ್ವಿತ ವ್ಯಕ್ತಿಯೇ ಅಲ್ಲ. ಒಳ್ಳೆಯವರಿಗೆ ಸಂತೋಷವುಂಟು ಮಾಡದಿರುವುದು ಹಿತವೇ ಅಲ್ಲ. ಸಾಧುತ್ವ ಇಲ್ಲದವರು

1. ಅದರೆ, ಕಾರ್ಯಕಾರಣ ಭಾವರೂಪದಲ್ಲಿದ್ದರೆ 'ಕಾರಣಮಾಲಾ'; ಉತ್ಕೃಷ್ಟ-ಅಪಕೃಷ್ಟ ಭಾವ ರೂಪದಲ್ಲಿದ್ದರೆ, 'ಸಾರ'.

ಒಳ್ಳೆಯವರೇ ಅಲ್ಲ. ಯಾರ ಚಿಂತನೆಯಲ್ಲಿ ಶ್ರೀಕೃಷ್ಣ ಇಲ್ಲವೋ ಅವರು ಸಾಧುಗಳೇ ಅಲ್ಲ. [1]

– ಇಲ್ಲಿ 'ಸ್ವಹಿತಂ ಸಮೀಕ್ಷತೇ'—ಎಂಬ ವಿಶೇಷಣವು ತನ್ನ ಅಭಾವವಿದ್ದಾಗ ವಿಶೇಷ್ಯವಾದ 'ಆರ್ಯ' ಪದದ ಅಸ್ತಿತ್ವವನ್ನೇ ನಿರಾಕರಿಸುತ್ತದೆ.

ಸ್ಥಾಪಕದ ಉದಾಹರಣೆಯಲ್ಲಿ ಅಪೋಹಕತ್ವವೂ ಅಪೋಹಕತ್ವದ ಉದಾಹರಣೆಯಲ್ಲಿ ಸ್ಥಾಪಕತ್ವವೂ ಧ್ವನಿತವಾಗುತ್ತದೆ. 'ತನ್ನ ಹಿತವನ್ನು ನೋಡಿಕೊಳ್ಳುವನೇ ನಿಜವಾದ ಪಂಡಿತ'–ಎಂದರೆ ತನ್ನ ಹಿತವನ್ನು ನೋಡಿಕೊಳ್ಳದವನು ಪಂಡಿತನೇ ಅಲ್ಲ' ಎಂಬ ಅರ್ಥ ಸ್ಪಷ್ಟವಾಗಿದೆ. ಆದರೆ ಸ್ಥಾಪಕೋದಾಹರಣೆಯಲ್ಲಿ ಅಪೋಹಕವನ್ನು ವಾಚ್ಯವಾಗಿ ಹೇಳಿಲ್ಲವಾದ್ದರಿಂದ ಎರಡು ಪ್ರಭೇದಗಳನ್ನು ಒಪ್ಪಿರುವುದೇನೂ ತಪ್ಪಲ್ಲ.

ಹಿಂದು ಹಿಂದಿನದ್ದು ವಿಶೇಷಣವಾಗಿರುವುದಕ್ಕೆ ಉದಾಹರಣೆ :

> ಧರ್ಮೇಣ ಬುದ್ಧಿಸ್ತವ ದೇವ ! ಶುದ್ಧಾ ಬುದ್ಧ್ಯಾ ನಿಬದ್ಧಾ ಸಹಸೈವ ಲಕ್ಷ್ಮೀಃ ।
> ಲಕ್ಷ್ಮ್ಯಾ ಚ ತುಷ್ಟಾ ಭುವಿ ಸರ್ವಲೋಕಾ ಲೋಕೈಶ್ಚ ನೀತಾ ಸಹಸೈವ ಕೀರ್ತಿಃ ॥

(ಹೇ ರಾಜನ್! ನಿನ್ನ ಬುದ್ಧಿಯು ಧರ್ಮದಿಂದ ಶುದ್ಧವಾಗಿದೆ. ಬುದ್ಧಿಯಿಂದ ಶೀಘ್ರವಾಗಿ ಸಂಪತ್ತು ಗಳಿಸಲ್ಪಟ್ಟಿದೆ. ಸಂಪತ್ತಿನಿಂದ ಭೂಮಿಯಲ್ಲಿ ಎಲ್ಲಾ ಪ್ರಜೆಗಳಿಗೂ ಆನಂದವಾಗಿದೆ. ಎಲ್ಲಾ ಪ್ರಜೆಗಳಿಂದಲೂ ನಿನ್ನ ಕೀರ್ತಿಯು ಹರಡಲ್ಪಟ್ಟಿದೆ).

ಈ ಉದಾಹರಣೆಯಲ್ಲಿ 'ಧರ್ಮಯುಕ್ತವಾಗಿರುವುದು' —ಎಂಬ ವಿಶೇಷಣವು ಮೊದಲು ಬಂದಿದೆ. 'ಬುದ್ಧಿ'—ಎಂಬ ವಿಶೇಷ್ಯವು ಅನಂತರ ಬಂದಿದೆ. [2]

ಕನ್ನಡದಲ್ಲಿ ನಾಗವರ್ಮನು ಈ ಅಲಂಕಾರವನ್ನು ಹೀಗೆ ಲಕ್ಷಿಸುತ್ತಾನೆ:— ಸೂ (೬೨೧)

> ....ಮು
> ತ್ತಡಕಿಲ್ಗೊಳೆ ಪಲವುಮನೊಂ
> ದೆಡೆಯೊಳ್ ಸಮುಗೊಳಿಸಿ ಪೇಳ್ದುದಾವಳಿ ಪೆಸರಿಂ

---

1. ಸ್ಥಾಪಕ ಹಾಗೂ ಅಪೋಹಕ ಎರಡು ಪ್ರಕಾರಗಳಿಗೂ ಒಂದೇ ಅರ್ಥದ ಉದಾಹರಣೆ ಕೊಟ್ಟಿರುವುದರ ಉದ್ದೇಶವೇನೆಂದರೆ–ಒಂದೇ ಹೇಳಿಕೆಯನ್ನೇ ಎರಡು ರೀತಿಯಿಂದಲೂ ಹೇಳಬಹುದೆಂದು ತೋರಿಸುವುದು.
2. ಮುಂದೆ 'ಮಾಲಾದೀಪಕ'ದ ವಿಚಾರವನ್ನು ಜಗನ್ನಾಥ ಚರ್ಚೆಗೆತ್ತಿಕೊಂಡು, ಮಾಲಾದೀಪಕವು ವಾಸ್ತವಿಕವಾಗಿ ಸಾಲುಸಾಲಾಗಿ ಬರುವ ಏಕಾವಳಿಯೇ ಹೊರತು ಅದೇನೂ ದೀಪಕಾಲಂಕಾರ ಪ್ರಭೇದವಲ್ಲವೆಂದು ನಿರ್ಣಯಿಸಿದ್ದಾನೆ.

-ಸ್ಥಾಪನೆಗೆ ಆವನು ಕೊಟ್ಟಿರುವ ಉದಾಹರಣೆ

ಕೊಳಗಳ್ ದಳಿತಾಬ್ಜಂಗಳ್
ದಳಿತಾಬ್ಜಂಗಳ್ ಸಮೃದ್ಧ ಮಧುಗಳ್ ಮಧುಗಳ್
ಚಳದಳಿಕುಳಾಕುಳಂಗಳ್
ವಿಳಸದಳಿ ಪ್ರಕರ ಮಧುರವಿರುತಿಯೆ ಬನದೊಳ್ ॥ (೬೨೪.)

ಇದು ರುದ್ರಟನ ಕಾವ್ಯಾಲಂಕಾರದಲ್ಲಿ ಬರುವ :

ಸಲಿಲಂ ವಿಕಾಸಿ ಕಮಲಂ ಕಮಲಾನಿ ಸುಗಂಧಿಮಧುಸಮೃದ್ಧಾನಿ ।
ಮಧುಲೀನಾಲಿಕುಲಾಕುಲಮಲಿಕುಲಮಪಿ ಮಧುರರಣಿತಮಿಹ ॥

ಎನ್ನುವುದರ ಅನುವಾದ. [1]

ಕಳರುತಿಯಿಲ್ಲದ ಮಧುಪಾ
ವಳಿ ಮಧುಕರನಿಕರಮಿಲ್ಲದಂಬುರುಹವನಂ
ಜಳರುಹಮಿಲ್ಲದ ತಿಳಿಗೊಳ
ನಲರ್ದ ಸರಃಪ್ರಕರ ಮಿಲ್ಲಮೂರಿಲ್ಲದಱಿತೊಳ್ ॥ (೬೨೮)

ಇದು ಹಿಂದೆ ಉದಾಹರಿಸಲ್ಪಟ್ಟ 'ನ ತಜ್ಜಲಂ ಯನ್ನ'-ಎನ್ನುವುದರ ಹಿಂದು ಮುಂದಾದ ಅನುವಾದ. ಜಲ, ಪಂಕಜಂ ,ಷಟ್ಪದ, ಗುಂಜಿತ. ಮನೋಹಾರಿತ್ವ— ಎಂಬ Itemಗಳಲ್ಲಿ ಮನೋಹಾರಿತ್ವವನ್ನು ಬಿಟ್ಟು ಉಳಿದದ್ದನ್ನು ಮಾತ್ರ ಗುಂಜಿತ, ಷಟ್ಪದ, ಪಂಕಜ, ಜಲ ಎಂಬ ಹಿಂದುಮುಂದಾದ ಕ್ರಮದಲ್ಲಿ ಇಲ್ಲಿ ತೆಗೆದುಕೊಂಡಿದೆ. 'ಜಲಂ' ಎನ್ನುವುದಕ್ಕೆ 'ತಿಳಿಗೊಳಂ'— ಎಂಬ ಅನುವಾದ ಸರಿಯಾಗಿಯೇ ಇದೆ. ಏಕೆಂದರೆ ಜಲವು ಲಕ್ಷಣಾ (ಉಪಾದಾನ ಲಕ್ಷಣಾ) ವ್ಯಾಪಾರದಿಂದ 'ತಿಳಿಗೊಳ್' ಎಂಬ ಅರ್ಥವನ್ನು ಕೊಡುತ್ತದೆ. ಇಲ್ಲಿನ ಮತ್ತೊಂದು ಸ್ವಾರಸ್ಯವೇನೆಂದರೆ ಪೂರ್ವಪೂರ್ವವು ವಿಶೇಷ್ಯವಾಗುವ ಉದಾಹರಣೆ ಮೂಲ ಸಂಸ್ಕೃತಪದ್ಯದ್ದಾದರೆ [2] ಪೂರ್ವಪೂರ್ವವು ವಿಶೇಷಣವಾಗುವ ಉದಾಹರಣೆ ಕನ್ನಡಾನುವಾದದ್ದಾಗಿದೆ [3]

ಪ್ರಾಸಂಗಿಕವಾಗಿ ಒಂದು ಮಾತು. ಪಂಪಭಾರತದ ಪ್ರಥಮಾಶ್ವಾಸದಲ್ಲಿ 8, 24, 27, 52, ಹಾಗೂ 53 ಈ ಸಂಖ್ಯೆಯ ಪದ್ಯಗಳಲ್ಲಿ ಏಕಾವಳಿ ಕಾಣಿಸುತ್ತದೆ. 8ರಲ್ಲಿ ಬರುವ ಕ್ರಮವು ಉಪಮಾನಕ್ಕೆ ಅನುಕೂಲವಾಗಿದೆ. ಉಳಿದವುಗಳಲ್ಲಿ ವಿಶೇಷಣವು ಪೂರ್ವದಲ್ಲಿ ಬರುವ ಏಕಾವಳಿಯ ಎರಡನೆಯ ಪ್ರಭೇದಕ್ಕೆ ಲಕ್ಷ್ಯಗಳಾಗುತ್ತವೆ. ●

---

1. 'ಕಾವ್ಯಾವಲೋಕನ'ದ ಪರಿಶಿಷ್ಟದಲ್ಲಿ ಇದನ್ನು ಉದಾಹರಿಸಲಾಗಿದೆ.
2. 'ಜಲಂ' ಎನ್ನುವುದು ವಿಶೇಷ್ಯ, 'ಸುಚಾರು ಪಂಕಜಂ' ಎನ್ನುವುದು ವಿಶೇಷಣ.
3. 'ಕಳರುತಿಯಿಲ್ಲದ' — ಎನ್ನುವುದು ವಿಶೇಷಣ, 'ಮಧುಪಾವಳಿ' ಎನ್ನುವುದು ವಿಶೇಷ್ಯ.

ದಾಸ ಸಾಹಿತ್ಯದಲ್ಲಿ ಬೌದ್ಧಾವತಾರ

ಡಾ|| ಭೀಮರಾವ್ ಚಿಟಗುಪ್ಪಿ

ನಿರೀಶ್ವರಾಧಿಷ್ಠಿತ, ವೈದಿಕ ಧರ್ಮವಿರೋಧಿ ಬೌದ್ಧಮತವು ಎಂದಿನಿಂದಲೂ ವೈದಿಕ ಮತೀಯರ ಹೀಗಳಿಕೆಗೊಳಗಾಗಿವೆ. ಅದನ್ನು ಪಾಷಂಡ (ವೇದಬಾಹಿರ) ಮತವೆಂದು ದೂಷಿಸುವುದು ಸರ್ವಶ್ರುತವಿದೆ. ದ್ವೈತ ಅಥವಾ ಮಾಧ್ವ ಮತವಾದರೂ ಇದಕ್ಕೆ ಅಪವಾದವೇನಲ್ಲ. ಆದರೂ ಅವರ ಈ ಹೀಗಳಿಕೆ ಇಷ್ಟಕ್ಕಿಂತ ಹೆಚ್ಚು ಮುಂದುವರಿದಂತಿಲ್ಲ. ಮಾಧ್ವರು ಬುದ್ಧನನ್ನು (ಗೌತಮ ಬುದ್ಧನಲ್ಲ) ವಿಷ್ಣುವಿನ ಅವತಾರವೆಂದು ಸಂಪೂರ್ಣ ನಂಬಿರುವರಲ್ಲದೆ ಆ ಮತ (ಬೌದ್ಧ) ಅವನಿಂದಲೇ ಪ್ರೋಕ್ತ ಎಂದು ವೇದ ವಿರುದ್ಧವಿರುವ ಅದರಲ್ಲಿನ ತತ್ವಗಳನ್ನು ತಮ್ಮ ಪ್ರಣಾಲಿಗೆ ಹೊಂದುವಂತದಲ್ಲಿ ಅರ್ಥವಿಸಿಕೊಂಡು ಆ ಬಗೆಯ ಅನುಸಂಧಾನದೊಂದಿಗೆ ಅವನನ್ನು ಸ್ತುತಿಸಿರುವರು.

ಭಕ್ತಿಯೇ ನಿಜವಾದ ಮುಕ್ತಿಗೆ ಸಾಧನವೆಂದು ಸಾರಿದ ಶ್ರೀಮಧ್ವಾಚಾರ್ಯರು ತೌರ್ಯತ್ರಯ ಅಂದರೆ ಸಂಗೀತದ ಅಂಗಗಳಾದ ಗಾನ, ವಾದನ, ನರ್ತನಗಳಿಗೆ ಒಗ್ಗುವಂದದಲ್ಲಿ ರಚಿತವಾದ ಕೃತಿ. ಅಥವಾ ಕೀರ್ತನೆಗಳಿಂದ ಭಗವಂತನನ್ನು ತಣಿಸಿ ಕರ್ನಾಟಕದ ಹರಿದಾಸ ಪರಂಪರೆಗೆ ಆದ್ಯರಾಗಿರುವರು.

ಅಧಿಕಾಂಶ ಹರಿದಾಸರು ಮಾಧ್ವರು. ರಾಗ. ತಾಳ, ನರ್ತನಗಳಿಗೆ ಅನುಸರಿಸಿ ರಚಿತವಾದ ಅವರ ಸಾಹಿತ್ಯವು ಆಚಾರ್ಯಮಧ್ವರು ಬೋಧಿಸಿದ ಬಗೆಯ ಭಕ್ತಿಯ ನಿರಂತರ ನಿಧಿ. ತಮ್ಮ ಕೀರ್ತನೆಗಳಲ್ಲಿ ಅವರು ವಿಷ್ಣುವಿನ ಅನೇಕ ಅವತಾರಗಳಲ್ಲಿ ವಿಶೇಷವಾಗಿ ಆತನ ಮತ್ಸ್ಯಕೂರ್ಮಾದಿ ದಶಾವತಾರಗಳಲ್ಲಿ ಉಕ್ತವಾದ ಅವನ ಲೀಲೆ, ಭಕ್ತಪರಾಧೀನತೆ. ವಾತ್ಸಲ್ಯ. ಆತನ ಪರಮ ಭಕ್ತರಿದ್ದ ಸಾಕ್ಷಾತ್ ವಾಯುದೇವರ ಅವತಾರರೆಂದಿರುವ ಪೌರಾಣಿಕ ಹನುಮಂತ, ಭೀಮಸೇನ, ವಿಶೇಷವಾಗಿ ಮಾಧ್ವರಿಂದ ಅವರದೇ ಮೂರನೆಯ ಅವತಾರವೆಂದು ಬಗೆಯಲಾದ ಗುರು ಮಧ್ವರು, ಧ್ರುವ, ಪ್ರಹ್ಲಾದ ಮೊದಲಾದ ಪೌರಾಣಿಕ ವ್ಯಕ್ತಿಗಳು, ಮಂತ್ರಾಲಯ ಪ್ರಭು ಶ್ರೀರಾಘವೇಂದ್ರರು ಇವರೇ ಮೊದಲಾದ ಭಕ್ತಶಿರೋಮಣಿಗಳ ಚರಿತ್ರಾಂಶ ಮಹಿಮಾತಿಶಯಗಳನ್ನು ಮನವಾರೆ ಕೊಂಡಾಡಿರುವರು. ಜೊತೆಗೆ ಆತ್ಮಬೋಧೆ, ನೀತಿಬೋಧೆ, ಡಾಂಭಿಕ ಆಚಾರ ವಿಚಾರಗಳ ಖಂಡನೆ ಇರುವ ಪದಪದ್ಯಗಳೂ ಹೇರಳವಾಗಿವೆ.

ಬುದ್ಧಾವತಾರ

ವಿಷ್ಣುವಿನ ದಶಾವತಾರ ಮಾಲಿಕೆಯಲ್ಲಿ ಎಂಟನೆಯ ಕೃಷ್ಣಾವತಾರದ ಅನಂತರ ಒಂಬತ್ತನೆಯ ಅವತಾರವೆಂದು ಬುದ್ಧ ಬಂದಿರುವನು. ಹತ್ತನೆಯ ಅವತಾರ ಕಲ್ಕಿ

ಇನ್ನೂ ಬರಲಿದೆ. ಒಂದಾನೊಂದು ಕಾಲದಲ್ಲಿ ಭಾರತದಾದ್ಯಂತ, ಭಾರತದ ಹೊರಗೆ ಸಹ ಪ್ರಸರಿಸಿದ್ದ ಬೌದ್ಧಮತವನ್ನು ತಡೆಗಟ್ಟಿ ಹಿಮ್ಮೆಟ್ಟುತ್ತಿದ್ದ ವೈದಿಕಮತದ ಪುನರುತ್ಥಾನಕ್ಕಾಗಿ ವಿಷ್ಣುವಿನ ದಶಾವತಾರಗಳಲ್ಲಿ ಒಂಬತ್ತನೆಯ ಅವತಾರವೆಂದು ಇತಿಹಾಸ ಪ್ರಸಿದ್ಧ ಗೌತಮ ಬುದ್ಧನನ್ನು ಸೇರಿಸಿ ಕೊಳ್ಳಲಾಯಿತೆಂಬುದು ಕೆಲವು ಆಧುನಿಕ ಅನ್ವೇಷಕರ ಅಭಿಪ್ರಾಯವಿದೆ. ಜನಸಾಮಾನ್ಯರಾದರೊ ಈ ಬುದ್ಧ ಪುರಾಣೋಕ್ತ ವಿಷ್ಣುವಿನ ಅವತಾರವೆಂದು ನಂಬಿದಂತಿದೆ. ಈತ ವಿಷ್ಣುವಿನ ಪಟ್ಟಕ್ಕೇರಿಸಲ್ಪಟ್ಟ ಇತಿಹಾಸ ಪ್ರಸಿದ್ಧ ಗೌತಮ ಬುದ್ಧನೆಂಬ ಆಧುನಿಕ ಅನ್ವೇಷಕರ ಪರಿಕಲ್ಪನೆ ಅವರಲ್ಲಿ ಇರಲೇ ಇಲ್ಲ. ಆಪ್ಟೆ ಸಂಸ್ಕೃತ– ಇಂಗ್ಲಿಷ್ ಕೋಶದಲ್ಲಿ ಬುದ್ಧನ (ಗೌತಮ) ವಿಷಯದಲ್ಲಿ : He is sometimes regarded as ninth incarnation of Vishnu ಎಂಬ ವಿವರಣೆಯಾದರೂ ಈ ಬಗೆಯ ಅನುಮಾನಕ್ಕೆ ಪೂರಕವಾಗುವಂತಿದೆ.

ಆಚಾರ್ಯಮಾಧ್ವರು ಗೌತಮ ಬುದ್ಧನಿಗಿಂತ (ಕ್ರಿ.ಪೂ.೫೦೦–೩೪೫) ಅದೆಷ್ಟೊ ಈಚೆಯವರು. ಸಾಕ್ಷಾತ್‌ವಿಷ್ಣುವೆಂದು ದೃಢವಾಗಿ ನಂಬಿದ ಬುದ್ಧನನ್ನು (ಗೌತಮ ಬುದ್ಧನಲ್ಲ) ಅವರು ಆ ರೂಪದಲ್ಲಿಯೇ 'ದೈತ್ಯ ವಿಮೋಹಕ' ಅಂದರೆ ದೈತ್ಯರನ್ನು ನಗ್ನ ರೂಪ ಧರಿಸಿ ಭ್ರಾಂತಿಗೊಳಿಸಿದವ) ಎಂದು ಸ್ತುತಿಸಿ 'ಭವ ಮಮ ಶರಣಂ' ಎಂದು ರಕ್ಷಣೆ ಕೋರಿರುವರು. ಹರಿದಾಸರಂತೂ ಅವರಿಗಿಂತ ಇನ್ನೂ ಈಚೆಯವರು. ಅವರಾದರೂ ಅವನನ್ನು ಹೀಗೆಯೇ ಸ್ತುತಿಸಿರುವರು. ಅವರ ಸ್ತುತಿಯಲ್ಲಿ ಪುರಾಣೋಕ್ತ ತ್ರಿಪುರದಹನ ಆಖ್ಯಾನದಲ್ಲಿ ಬುದ್ಧನೆಂದು ನಗ್ನರೂಪದಲ್ಲಿ ಪ್ರಕಟನಾದ ವಿಷ್ಣು ಅಲ್ಲಿನ ದೈತ್ಯರನ್ನು ವೈದಿಕಮತದ ವಿರುದ್ಧ ಇಲ್ಲದ ಸಲ್ಲದ ಮಾತುಗಳನ್ನು (ಔಪಧರ್ಮ) ಬೋಧಿಸಿ ಆ ವರೆಗೆ ಆ ಮತ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದ, ಆದರೂ ತದ್ವಿರುದ್ಧ ಆಚಾರ ವಿಚಾರಗಳಿಂದ. ಅದಕ್ಕೂ ಹೆಚ್ಚಾಗಿ ಲೋಕಕಂಟಕರಾಗಿದ್ದ ಅವರನ್ನು ಮತಿಗೆಡಿಸಿದನು (ಮೋಹಗೊಳಿಸಿದನು). ಅವರೊಂದಿಗೆ ತನ್ನ ನಗ್ನರೂಪ ದರ್ಶನದಿಂದ ಚಿತ್ತವಿಕಲರನ್ನಾಗಿಸಿ ದೈತ್ಯಸ್ತ್ರೀಯರ ವ್ರತವನ್ನು ಭಂಗಿಸಿದನು ಎಂಬ ಬಣ್ಣನೆ ಬರುತ್ತದೆ. ದೈತ್ಯಸ್ತ್ರೀಯರ ಪಾತಿವ್ರತ್ಯಭಂಗ ಅವಾಂತರ ಸನ್ನಿವೇಶ. ಇದಕ್ಕೆ ಆಧಾರವಿಲ್ಲ. ಹೆಂಗಸರ ಹಾಡುಗಳಲ್ಲಿ ಮಾತ್ರ ಕಾಣಸಿಗುತ್ತದೆ, ಎಂದಿದೆ ಸಂಶೋಧಕರ ಅಭಿಪ್ರಾಯದಲ್ಲಿ. ಅತಏವ ಸಂಭಾವ್ಯವೆನಿಸುವ ಊಹಾಪೋಹಗಳಿಂದ ಇದಕ್ಕೆ ಸಮಾಧಾನವನ್ನು ಕಂಡುಕೊಳ್ಳಬೇಕು.

ದಾಸಸಂಪ್ರದಾಯಕ್ಕೆ (ಕನ್ನಡದಲ್ಲಿ) ಆದ್ಯರೆಂದು ಬಗೆಯಲ್ಪಟ್ಟ ಶ್ರೀಪಾದರಾಯರಿಂದ ಜಗನ್ನಾಥದಾಸರ ವರೆಗಿನ ಪ್ರಮುಖ ಹರಿದಾಸರೆಲ್ಲರೂ ಇವೇ ಅಥವಾ ಸಮಾನಾರ್ಥಕ ಶಬ್ದಗಳಿಂದ ಬುದ್ಧರೂಪಿ ವಿಷ್ಣುವನ್ನು ಸ್ತುತಿಸಿ ಅವನ ಅನುಗ್ರಹ ಬೇಡಿರುವರು. ದಾಸರ ಈ ಬಗೆಯ ಬಣ್ಣನೆ ಧರ್ಮಸ್ಥಾಪನೆಯ ಸೋಗಿನಲ್ಲಿ ವಿಷ್ಣುವಿನ ಅವತಾರವೆಂದು ಸ್ವೀಕರಿಸಲ್ಪಟ್ಟ ಬುದ್ಧನ (ಗೌತಮ) ಮತತತ್ವ

ಚರಿತ್ರಾಂಶಾದಿಗಳನ್ನು ಬಿಟ್ಟು ತ್ರಿಪುರಾಂಗನೆಯರ ವ್ರತಭಂಗಿಸಿದನೆಂಬ ಆಪಾದನೆಗೆ ಒಳಗಾಗಿಸಿದೆ. ಇದು ನಿಂದ್ಯ, ಕ್ರೂರ, ಎಂದು ಆಕ್ಷೇಪಿಸಲಾಗಿದೆ. ಆದರೆ ಇದು ಮಾಧ್ವ ಮತ್ತು ಅದರದೇ ಅಂಗವಾದ ದಾಸ ಸಾಹಿತ್ಯದ ಯಥೋಚಿತ ಅವಲೋಕನೆ ಇಲ್ಲದೆ ಎತ್ತಿದ ಏಕಪಕ್ಷೀಯ ಆಕ್ಷೇಪವೆಂಬುದು ಈ ಮುಂದಣ ವಿವೇಚನೆಯಿಂದ ಸ್ಪಷ್ಟವಾಗದಿರದು. ತ್ರಿಪುರಾಂಗನೆಯರ ವ್ರತಭಂಗ ಸಂದರ್ಭ ಪರಂಪರಾಗತವಾಗಿ ನುಸುಳಿಕೊಂಡಿದ್ದು ಅದಕ್ಕೆ ಸಮರ್ಥಕವೆನಿಸಬಹುದಾದ ಊಹೆಗಳಿಂದ ಸಮಾಧಾನಪಟ್ಟುಕೊಳ್ಳಬೇಕೆಂಬ ಮಾತು ಈಗಾಗಲೆ ಬಂದು ಹೋಗಿದೆ.

ಅವತಾರೀ ಬುದ್ಧನನ್ನು ಕುರಿತು ಇವು ಕೆಲವು ದಾಸೋಕ್ತ ಬಣ್ಣನೆಯ ಉದಾಹರಣೆಗಳು-

ಶ್ರೀಪಾದರಾಯರು–ಬುದ್ಧನಾಗಿ ಪತಿವ್ರತೆಯರನಾಳಿದೆ (ಜೋ ಜೋ ಪದ).

ಪುರಂದರದಾಸರು—ಬತ್ತಲೆನಿಂತ ಬೌದ್ಧಸಿಗೆ (ಆರತಿ).

> ದಾನವರಂದು ಖೇಚರದೊಳು ಮುಪ್ಪುರವ ರಚಿಸಿ ಮೂರುಜಗಕೆ
> ಉಪಹತಿ ಮಾಡುತಿರೆ। ಅಸಮರೂಪದಿ (ಬತ್ತಾಲೆ) ನಿಂದು....
> ದೈತ್ಯಸ್ತ್ರೀಯರ ಪಾತಿವ್ರತ್ಯ ಭಂಗ ಮಾಡಿ ಮುಪ್ಪುರವನಳಿದ ನಿಸ್ಸೀಮ
> (ದಶಾವತಾರಸ್ತುತಿ)

ವಾದಿರಾಜರು– ವಿಷ್ಣುವಿನ ದಶಾವತಾರ ಲೀಲೆಗಳನ್ನು ಬಣ್ಣಿಸಿದ ಹರಿದಾಸರುಗಳಲ್ಲಿ ಇವರನ್ನು ಸಮಕಟ್ಟುವವರು ಇಲ್ಲೆನ್ನಬಹುದು. ಇಪ್ಪತ್ತೈದು ಮಿಕ್ಕಿವೆ. ಒಂದೆರಡನ್ನು ನೋಡೋಣ. ಇದು ಸತ್ಯಭಾಮೆ ಕೃಷ್ಣನಿಗೆ ಹೇಳುವ ಮಾತು :

ಮಂದಗಮನೆಯರ ಮುಂದೆ ನಿರ್ವಾಣದಿ(ಬತ್ತಲೆ) ನಿಂದೆ ; ಸತ್ಯಭಾಮೆ–ಸತಿಯರ
ಮೋಹಿಸಿ ನೀನು, ರಂಗಯ್ಯ,
ಬಲುಚತುರ ಬುದ್ಧನಾದೆ ; ನಗೆಗೇಡು ಮಾಡಿಕೊಂಡು ದಿಗ್ವಸನನಾಗಿ ನಿಂತ ।
ಹಗರಣವಿದೇನೊ ಪೇಳು ರಂಗಯ್ಯ ।
ಕೃಷ್ಣ-ಮಿಗೆ ಮೂರು ಪುರದ ಸತಿಯರ ಕೆಡಿಸಿ ।
ಜಗಮೋಹಿಸುವ ಬೌದ್ಧ ಎಲೆ ಸತ್ಯಭಾಮೆ ।

ತ್ರಿಯಂಬಕನ ಹಿತಕಾಗಿ ತ್ರಿಪುರ ವಧುಗಳನು ಕೆಡಿಸಿದೆ – ಸ್ವಪ್ನಪದ : ಸ್ವಯಂ ವಿಷ್ಣು ಶ್ರೀವಾದಿರಾಜರ ಸ್ವಪ್ನದಲ್ಲಿ ಪ್ರಕಟನಾಗಿ ತನ್ನ ದಶಾವತಾರಗಳಲ್ಲಿನ ಲೀಲೆಗಳನ್ನು ವರ್ಣಿಸಿರುವನು. ತ್ರಿಪುರಗಳನ್ನು ದಹಿಸಿ 'ತ್ರಿಪುರಾರಿ' ಆದವನು ಶಿವ. ವಿಷ್ಣು ಬ್ರಹ್ಮರು ಅವನ ನೆರವಿಗಿದ್ದರು.

ವಿಷ್ಣುವಿನ ದಶಾವತಾರಗಳಲ್ಲಿನ ಒಂದೊಂದು ಆತನ ಲೋಕೋತ್ತರ ಕಾರ್ಯಗಳನ್ನು ಉಲ್ಲೇಖಿಸುತ್ತ ಬುದ್ಧಾವತಾರ ಸಂದರ್ಭದಲ್ಲಿ ಭಕ್ತ (ಶಿವ) ರಕ್ಷಣೆಗಾಗಿ 'ಪಾಪಕಂಜದೆ' ತ್ರಿಪುರಾಂಗನೆಯರ ವ್ರತಭಂಗಿಸಿದನು. 'ಸೋಽಹಂ' ಎಂದುಕೊಳ್ಳುವ ನೀವಾದರೂ ಇಂಥ ಕಾರ್ಯಗಳನ್ನು ಮಾಡಬಲ್ಲವರಿದ್ದರೆ ಹೀಗೆಂದುಕೊಳ್ಳಿರಿ. ಇಲ್ಲವಾದರೆ ಇಲ್ಲ, ಎಂಬ ಅದ್ವೈತ (ಜೀವೇಶ್ವರ–ಐಕ್ಯ) ವಾದಿಗಳ ಮೂದಲಿಕೆ.

ವಸನರಹಿತನಾಗಿ ವಸುಧೆಯ ತಿರುಗಿದೆ । ಬಿಸಜನಾಭ ನಿನಗೆ ವಸನ ಉಡಿಸುವೆ । (ರುಕ್ಮಿಣಿ ಕೃಷ್ಣನಿಗೆ ಉರುಟಣೆ ಮಾಡಿದ ಸಂದರ್ಭ)

ಕನಕದಾಸರು– ರಮಣಿಯರ್ಗೋಲಿದು ಬತ್ತಲೆ ನಿಂದೆ ಗೋವಿಂದ– (ಸಲಹೆನ್ನನು).

ತ್ರಿಪುರ ಲಲನೆಯರ ವ್ರತಗೆಡಿಸಿ ಕೂಡಿಸಿದ ಕೆಲಸ ಉತ್ತಮವಾಯ್ತು
ರಕ್ಷಿಸು ನಮ್ಮನನವರತ (ಹರಿಭಕ್ತಿಸಾರ)

ಒಂದೊಂದಾಗಿ ಸಂಚರಿಸುತ್ತಿದ್ದ ಲೋಕಕಂಟಕ ವಿಮಾನ ಸದೃಶ ಆ ಮೂರು ಪುರಗಳು ಒಂದೆಡೆ ಕೂಡಿದಾಗ ಅವುಗಳ ನಾಶ ಸಾಧ್ಯವೆಂಬ ಸಂದರ್ಭಕ್ಕೆ ಇಲ್ಲಿರುವ 'ಕೂಡಿಸಿದೆ' ಪದ ಸಂಬಂಧಿಸಿದೆ. 'ಉತ್ತಮವಾಯ್ತು' ಪದದಲ್ಲಿ ಆತನ ಈ ಕಾರ್ಯದ ಪ್ರಶಂಸೆ ಇದ್ದಂತಿದೆ.

ವಿಜಯದಾಸರು– ಕೃಷ್ಣ-ಸತ್ಯಭಾಮೆಯರ ಸಂವಾದ-

ಕೃಷ್ಣ–(ತಾನು)ತ್ರಿಪುರಾಂಗನೆಯರ ಚಪಳನಲ್ಲೆ ಭಾಮೆ ।
ಸತ್ಯಭಾಮೆ– ಚಪಳನೊ ವಿಪುಳನೊ ಆ ವಿಪರೀತವ ನಾನರಿಯೆ ।

ಹೀಗೆ ಸಂವಾದ ಮುಂಬರಿದು ಕೃಷ್ಣ ತಾನು ಸೃಷ್ಟಿಕರ್ತ ವಿಜಯವಿಠ್ಠಲನೆಂದಾಗ, ಇಷ್ಟ್ಯಾಂದ್ಯಾತಕೆ ಡಟ್ಟಡಿಗಳಿಗೊಂದಿಸುವೆ ಎಂಬ ಸತ್ಯಭಾಮೆಯ ಉತ್ತರದೊಂದಿಗೆ ಸಂವಾದ ಕೊನೆಗೊಳ್ಳುತ್ತದೆ.

ಗೋಪಾಲದಾಸರು- ಬತ್ತಲೆನಿಂದು ತ್ರಿಪುರವ ಒಗೆದು ಮೆರೆದವ ಬೌದ್ಧಾವತಾರನು । ನೀನು (ಸ್ತುತಿ)

ಜಗನ್ನಾಥದಾಸರು– ಬುದ್ಧರೂಪದಿ ತ್ರಿಪುರ ಸತಿಯರ । ಬುದ್ಧಿ ಭೇದವ ಮಾಡ್ದನ । (ಸ್ತುತಿ)

ತ್ರಿಪುರಾಂಗನೆಯರ ವ್ರತಭಂಗದ ಹೊರತಾಗಿ ಕೇವಲ ಬುದ್ಧಸ್ತುತಿ ಇರುವ ಪದ್ಯಗಳಾದರೂ ಇಲ್ಲದಿಲ್ಲ. ವಾದಿರಾಜರ ಕೀರ್ತನೆಗಳಲ್ಲಿಯೇ ೧೨ ಸಿಕ್ಕಿವೆ. ಅವುಗಳಲ್ಲಿನ ಇವು ಮೂರು–

(1) ಪಾವನ್ನ ಬುದ್ಧಬಾರೊ.... ಚೆಲುವ ಮಂಗಳಮೂರ್ತಿ ಬಾರಯ್ಯ. (ಸ್ತುತಿ)

(2) ಕೋಲು ಕೋಲೆನ್ನ ಕೋಲು.... ಸಿರಿ ಕೃಷ್ಣರಾಯನ ಕೋಲೆ.... ಬುದ್ಧನ ಕೋಲೆ (ಕೋಲಾಟ)

(3) ಲಾಲಿ ಆಡಿದ ರಂಗ ಲಾಲಿ ಆಡಿದ । ಬಾಲೆ ರುಕ್ಮಿಣಿಯೊಡನೆ .... ಅಂಬರವ ತೊರೆದು ದಿಗಂಬರನ ವೇಷವ ಧರಿಸಿ । ಮಂಗಳಾತ್ಮಕ ಪೂಜನಕ ರಂಗ ನಾಯಕಿಯೊಡನೆ ಕೃಷ್ಣ.... [ಲಾಲಿ ಆಟ]

ಇನ್ನೀಗ ಬುದ್ಧನ ಅವತಾರಕ್ಕೆ ಕಾರಣವಾದ **ತ್ರಿಪುರದಹನ** ಕಥೆಯನ್ನು ನೋಡೋಣ.

ಭಾಗವತಾದಿ ಪುರಾಣಗಳಲ್ಲಿ ಈ ಕಥೆ ಅಷ್ಟಿಷ್ಟು ವ್ಯತ್ಯಾಸಗಳೊಂದಿಗೆ ಬಂದಿದೆ. ಹಿರಣ್ಯಕಶ್ಯಪನ ವಧೆಯ ಅನಂತರ ದೈತ್ಯರು ಪರದೇಶಿಗಳಂತಾದರು. ಅವರಲ್ಲಿ ಪ್ರಮುಖರಿದ್ದ, ಷಣ್ಮುಖನಿಂದ ಹತನಾದ ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲನಯನ, ವಿದ್ಯುನ್ಮಾಲಿಯರು ದೈತ್ಯಶಿಲ್ಪಿ ಮಯಾಸುರನಿಗೆ ಮರೆಹೊಕ್ಕು ಅಜಿಂಕ್ಯವಿದ್ದ ಏನಾದರೊಂದು ಸಾಧನವನ್ನು ಸಿದ್ಧಪಡಿಸಿಕೊಡೆಂದು ಬೇಡಿಕೊಂಡರು. ಆತ ಬಂಗಾರ, ಬೆಳ್ಳಿ, ಕಬ್ಬಿಣಗಳಿಂದ ರಚಿಸಿದ ಮೂರುನಗರ [ರಥ]ಗಳನ್ನು ನಿರ್ಮಿಸಿ ಕೊಟ್ಟನು. ವಿಮಾನ ಸದೃಶವಿದ್ದ ಆ ರಥಗಳು ಆಕಾಶದಲ್ಲಿ ಅದೃಶ್ಯವಾಗಿ ಇಚ್ಛೆ ಬಂದಂತೆ ಹಾರಾಡುತ್ತ ಕೆಳಗಿನ ನಗರ ಗ್ರಾಮಗಳ ಮೇಲೆ ಎರಗಿ ಅವುಗಳನ್ನು ನಾಶಪಡಿಸತೊಡಗಿದವು. ಲೋಕದಲ್ಲಿ ಹಾಹಾಕಾರವೆದ್ದಿತು. ಅವುಗಳಲ್ಲಿ ಮೃತ ಸಂಜೀವಿನಿ ರಸಯುಕ್ತ ಒಂದು ಕೊಳವೂ ಇದ್ದಿತು. ಯುದ್ಧದಲ್ಲಿ ಮಡಿದ ದೈತ್ಯ ಸೈನಿಕರನ್ನು ಅದರಲ್ಲಿ ಮುಳುಗಿಸಿದಾಗ ಅವರು ಮತ್ತಿಷ್ಟು ಬಲಿಷ್ಠರಾಗಿ ಜೀವಿಸಿ ಬರುತ್ತಿದ್ದರು.

ದೈತ್ಯ ದೇವತೆಗಳದು ನಿರಂತರ ವೈರತ್ವ. ಹಿರಣ್ಯಾಕ್ಷ ಹಿರಣ್ಯಕಶ್ಯಪರಿಂದ ತೊಡಗಿದ ಅವರ ವಿಷ್ಣುದ್ವೇಷ ಕೊನೆಯಿಲ್ಲದ್ದು. ದೇವತೆಗಳಾದರೊ ಅಮರರು. ವಿಷ್ಣು ಭಕ್ತರು. ಅವರಿಗೆ ಯಾವಾಗಲೂ ಅವನ ಬೆಂಬಲವಿದ್ದಿತು. ದೈತ್ಯರು ತಾವೂ ಅಮರತ್ವ ಪಡೆಯ ಬೇಕೆಂದು ತಪಸ್ಸಿನಿಂದ ಬ್ರಹ್ಮನನ್ನಾಗಲಿ ಶಿವನನ್ನಾಗಲಿ ಒಲಿಸಿಕೊಂಡು ಅಮರತ್ವ ಬೇಡುತ್ತಿದ್ದರು. ಅದೊಂದನ್ನು ಬಿಟ್ಟು ಬೇರೆ ಏನಾದರೊಂದು ಕೇಳೆಂದಾಗ ಅಮರತ್ವ ಸದೃಶ ಆಶೀವ ದುಸ್ತರವಿದ್ದ ವರ ಕೇಳಿ ಪಡೆಯುತ್ತಿದ್ದರು. ತ್ರಿಪುರ ದೈತ್ಯರು ತಪಸ್ಸಿನಲ್ಲಿ ಬ್ರಹ್ಮನನ್ನು ಒಲಿಸಿಕೊಂಡು ಒಂದೊಂದಾಗಿ ಸಂಚರಿಸುತ್ತಿದ್ದ ತಮ್ಮ ರಥಗಳು ಎಂದಾದರೊಮ್ಮೆ ಒಂದೆಡೆ ಕೂಡಿದಾಗ ಒಂದೇ ಬಾಣದಿಂದ ದಹಿಸಲ್ಪಟ್ಟಾಗ ತಮಗೆ ಮರಣ ಬರಲೆಂಬ ವರ ಪಡೆದು ಮತ್ತಿಷ್ಟು ಲೋಕಕಂಟಕರಾಗಿ ದೇವತೆಗಳ ಮೇಲೇರಿ ಹೋಗತೊಡಗಿದರು. ಭಯದಿಂದ ದೇವತೆಗಳು ಶಿವನನ್ನು ಸಮೀಪಿಸಿ ಅವನಿಂದ ರಕ್ಷಣೆಯ ಅಭಯ ಪಡೆದರು. ತ್ರಿಪುರಗಳು ಒಂದೆಡೆ ಕೂಡುವ ದಾರಿಯನ್ನೇ ಕಾಯುತ್ತಿದ್ದ ಅವರು ಆ ಕಾಲ ಸಮೀಪಿಸಿದಾಗ ಯುದ್ಧಸನ್ನಾಹ ಪ್ರಾರಂಭವಾಯಿತು. ತ್ರಿಪುರ

ದಹನ ಕಾರ್ಯವನ್ನು ಶಿವ ವಹಿಸಿಕೊಂಡನು. ಬ್ರಹ್ಮ ಅವನ ಸಾರಥಿಯಾದನು. ಪ್ರಾರಂಭದಲ್ಲಿ ದೈತ್ಯರದೇ ಮೇಲುಗೈ. ವಿಷ್ಣು ನೆಲದಲ್ಲಿ ಕುಸಿದುಹೋದ ಶಿವನ ರಥ ವನ್ನು ಮೇಲಕ್ಕೆತ್ತಿ ಯುಕ್ತ ಸ್ಥಳದಲ್ಲಿ ಇಟ್ಟುಕೊಟ್ಟನು. ತಾನು ಗೋವಾಗಿ ಬ್ರಹ್ಮ ನನ್ನು ಕರುವಾಗಿಸಿಕೊಡು ಮೃತಸಂಜೀವಿನಿ ಕೊಳವನ್ನು ಶೋಷಿಸಿದನು.

ಸ್ವಭಾವದಿಂದ ತಾಮಸರಿದ್ದರೂ ವಿಷ್ಣುದ್ವೇಷಿಗಳಿದ್ದರೂ ದೈತ್ಯರಾದರೂ ಅವರು ವೈದಿಕ ಮತಕ್ಕೆ ಸೇರಿದವರು. ಬ್ರಹ್ಮ ಶಿವರಾದರೂ ವೈದಿಕ ದೇವತೆಗಳು. ಕೂಟ ನೀತಿಯ ಅಂಗವಾಗಿ ವಿಷ್ಣು ಅತ್ಯಂತ ಮೋಹಕ ಬುದ್ಧ (ನಗ್ನ) ರೂಪ ಧರಿಸಿ ಅವರು ಅನು ಸರಿಸುತ್ತಿದ್ದ ವೈದಿಕ ಮತದ ವಿರುದ್ಧ ಇಲ್ಲದ ಸಲ್ಲದ ಕಟ್ಟು ಕಥೆಗಳಿಂದ (ಔಪಧರ್ಮ) ಅವರನ್ನು ಭ್ರಾಂತಿಗೊಳಿಸಿದನು. ಅದೇ ಅಂದರೆ ನಗ್ನರೂಪದಲ್ಲಿ ಅವರ ಸ್ತ್ರೀಯರಿಗೆ ಕಾಣಿಸಿಕೊಂಡು ಅವರ ಮತಿ ವಿಚಲಿತಗೊಳಿಸಿದನು. ಪಾತಿವ್ರತ್ಯಭಂಗದ ವ್ಯಾಖ್ಯೆ ಪುರುಷನನ್ನು ಕಣ್ಣೆತ್ತಿ ನೋಡುವದರಿಂದ ಅಂಗಸಂಗದ ವರೆಗೆ ವ್ಯಾಪಿಸಿದೆ. ಪ್ರಕೃತದಲ್ಲಿ ಪರಪುರುಷನ ನಗ್ನದರ್ಶನಕ್ಕಷ್ಟೇ ಮಿತವಾಗಿದೆ. ಏಕೆಂದರೆ ಇದೆಲ್ಲ ನಡೆದದ್ದು ಸಮರ ಭೂಮಿಯಲ್ಲಿ. ಹೀಗೆ ದೈತ್ಯರ ಬಲವನ್ನು ಮತ್ತಷ್ಟು ಕುಗ್ಗಿಸಿ ಶಿವನ ಬಾಣದಲ್ಲಿ ಸೇರಿ ಕೊಂಡು ಆ ಒಂದೇ ಬಾಣದಿಂದ ತಾರಾಕ್ಷಾದಿ ದೈತ್ಯರು ಸಹಿತ ಅವರ ಮೂರೂ ಪುರಗಳು ಸುಟ್ಟು ಭಸ್ಮವಾಗುವಂತೆ ಶಿವನಿಗೆ ನೆರವಾದನು. ತನ್ಮೂಲಕ ಶಿವ 'ತ್ರಿಪುರಾರಿ' ಆದನು. ತಾನು 'ದೈತ್ಯ ವಿಮೋಹಕ' ಆದನು. ಆತನ ಆ ಅವತಾರಕ್ಕೆ [ಬುದ್ಧ] 'ಮೋಹಕಾ ವತಾರ, ಎಂಬ ಮತ್ತೊಂದು ಹೆಸರು ಬಂದಿತು.

ಭಾಗವತದಲ್ಲಿರುವ ತ್ರಿಪುರಾಖ್ಯಾನದಲ್ಲಿ ಬೌದ್ಧಾವತಾರದ ಉಲ್ಲೇಖವಿಲ್ಲ. ಅನ್ಯತ್ರ ಬಂದಿರುವ ಒಂದು [ಸ್ಕಂದ೨-೭-೩೭] ಶ್ಲೋಕದಲ್ಲಿ ಬುದ್ಧನ ನಾಮ ನಿರ್ದೇಶವಿಲ್ಲದಿದ್ದರೂ ವಿಷ್ಣು 'ಅತಿ-ಪ್ರಲೋಭಂ ವೇಷಂ' ತಾಳಿ 'ಔಪಧರ್ಮ' ಬೋಧಿಸಿ ದೇವದ್ವೇಷಿಗಳಾದ ದೈತ್ಯರನ್ನು ಮತಿಗೆಡಿಸಿದನು. ಮೋಹಗೊಳಿಸಿದನು ಎಂದಿದೆ. ಭವಿಷ್ಯಕಥನವಿರುವ ಇನ್ನೊಂದು ಶ್ಲೋಕದಲ್ಲಿ (ಸ್ಕಂದ ೧-೩-೨೪ ರಲ್ಲಿ) ದೇವದ್ವೇಷಿ ದೈತ್ಯರನ್ನು ಮೋಹ ಗೊಳಿಸಲೆಂದು ವಿಷ್ಣು ಕೀಟಕವೆಂಬ ಪ್ರದೇಶದಲ್ಲಿ (ಉತ್ತರ ಬಿಹಾರ) ಜಿನಸುತ ಬುದ್ಧ ನೆಂದು ಜನಿಸುವನು ಎಂದಿದೆ. ಅ ಜನಸುತ ಎಂಬ ಪಾಠಾಂತರವೂ ಇದೆ.

ತ್ರಿಪುರದಹನದ ಆಖ್ಯಾನದ ಲೋಕಪ್ರಿಯತೆ

ತ್ರಿಪುರದಹನ ಆಖ್ಯಾನದ ಉಲ್ಲೇಖ ಭರತನ ನಾಟ್ಯಶಾಸ್ತ್ರದಲ್ಲೂ ಬಂದಿದೆ. ಆದರಲ್ಲಿ ಆತ 'ಡಿಮ' ಎಂಬ ನಾಟ್ಯಪ್ರಕಾರದಲ್ಲಿ ತ್ರಿಪುರದಹನ ಬಗೆಯ ಕಥೆಗಳನ್ನು ವಸ್ತುವಾಗಿ ಬಳಸಿಕೊಳ್ಳಬಹುದು ಎಂದಿರುವನು (ನಾ. ಶಾ. ೧೮.೧೬–೧೯). ಸಂಸ್ಕೃತ ನಾಟ್ಯ ಸಾಹಿತ್ಯಚರಿತ್ರೆಯಲ್ಲಿ ತ್ರಿಪುರದಾಹ, ತ್ರಿಪುರಮರ್ದನ, ತ್ರಿಪುರಾರಿ, ತ್ರಿಪುರ ವಿಜಯ ಎಂಬ ನಾಟಕಗಳು ಉಕ್ತವಾಗಿವೆ. ಕಾವ್ಯಗ್ರಂಥಗಳಲ್ಲಿ 'ತ್ರಿಪುರ

ದಹನಂ' ಎಂಬುದೊಂದು 'ಯಮಕ' ಕಾವ್ಯ ಲಭ್ಯವಿದೆ. ಕೇರಳೀಯ ಕವಿ ವಾಸುದೇವ ಭಟ್ಟಾತಿರಿ ಎಂಬವನು (ಕ್ರಿ.ಶ. ೯) ಇದರ ರಚಯಿತ. 'ಯಮಕ' ಎಂಬುದು ಒಂದು ಬಗೆಯ ಪದ್ಯರಚನೆ. ಪಾದಾರ್ಧದಲ್ಲಿ ಪ್ರಯುಕ್ತವಾದ ಶಬ್ದ ಅಥವಾ ಶಬ್ದಗಳು ಉಳಿದ ಅರ್ಧದಲ್ಲೂ ಆದರೆ ಬೇರೊಂದು ಅರ್ಥದಲ್ಲಿ ಪುನರಾವೃತ್ತವಾಗುತ್ತವೆ. ಶ್ರೀ ಮಧ್ವಾಚಾರ್ಯರೂ 'ಯಮಕಭಾರತ' ಎಂಬುದೊಂದು ಲಘುಕಾವ್ಯವನ್ನು ರಚಿಸಿರುವರು. ವಾಸುದೇವ ಭಟ್ಟಾತಿರಿಯದು ಶಿವಪಾರಮ್ಯ ಕಾವ್ಯ. ಇಲ್ಲಿ ವಿಷ್ಣು ಶಿವನ ಪರಮಭಕ್ತ. ತ್ರಿಪುರ ದೈತ್ಯರೆಲ್ಲರೂ ಶ್ರೇಷ್ಠ ಶಿವಭಕ್ತರು. ಯುದ್ಧದಲ್ಲಿ ಕೈಸಾಗದಂತಾಗಿ ದೇವತೆಗಳು ವಿಷ್ಣುವನ್ನು ಮುಂದೆ ಮಾಡಿಕೊಂಡು ಶಿವನತ್ತ ಹೋಗುವರು. ಶಿವ ತನ್ನ ಭಕ್ತರನ್ನು ತಾನೇ ಕೊಲ್ಲಲಾರ. ಆದರೆ ಲೋಕ ರಕ್ಷಣೆಯ ದೃಷ್ಟಿಯಿಂದ ಅವರ ಸಂಹಾರ ಅಗತ್ಯ ವಿದ್ದಿತು. ಆಗ ವಿಷ್ಣು ಶಿವನಿಗೆ-ನಿನ್ನ ಮೇಲಣ ಭಕ್ತಿಯೇ ಅವರಿಗೀಗ ರಕ್ಷಾಕವಚವಾಗಿದೆ. ಅದು ಮೊದಲು ಅಳಿಯಬೇಕೆಂದು ಸಲಹೆ ನೀಡುವನು. ಶಿವನ ಅನುಮತಿಯಿಂದ ಆತ ಮತ್ತು ನಾರದಮಹರ್ಷಿ ಕೂಡಿ ದೈತ್ಯ ಮತ್ತು ದೈತ್ಯಾಂಗನೆಯರಿಗೆ ಚಾರ್ವಾಕ ಮತ ಬೋಧಿಸಿ ಅವರೆಲ್ಲರ ಮತಿಗೆಡಿಸುವರು. ಹೀಗೆ ಅವರ ಶಿವಭಕ್ತಿ ಅಳಿದಾಗ ಶಿವ ತನ್ನ ಬಾಣದಿಂದ ದೈತ್ಯರು ದೈತ್ಯಾಂಗನೆಯರು ಸಹಿತ ಅವರ ತ್ರಿಪುರಗಳನ್ನು ಸುಟ್ಟು ಭಸ್ಮ ಮಾಡುವನು. ಇಲ್ಲಿ ಬುದ್ಧನ ಪಾತ್ರವಿಲ್ಲ. ನಾಮ ನಿರ್ದೇಶ ಕೂಟ ಇಲ್ಲ. ನನಗೆ ತಿಳಿದ ಮಟ್ಟಿಗೆ ದೈತ್ಯಸ್ತ್ರೀಯರ ಪಾತ್ರ ಮೊದಲು ಸಲ ಬಂದಿರುವದು ಇಲ್ಲಿ ಮಾತ್ರ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ರುದ್ರಭಟ್ಟನ ಜಗನ್ನಾಥವಿಜಯದಲ್ಲಿ, ಕುಮಾರ ವ್ಯಾಸನ ಭಾರತ ಮತ್ತು ಕ್ರಿ.ಶ. ೧೬೫೦ರಲ್ಲಿ ಆಗಿಹೋದ ಮಲ್ಲರಸನ ದಶಾವತಾರ ಚರಿತ್ರೆಯಲ್ಲಿ ಬುದ್ಧಾವತಾರದ ಪ್ರಸಕ್ತಿ ಬಂದಿದೆ. ರುದ್ರಭಟ್ಟನ ಬುದ್ಧನು ಯೋಗಿ, ದಾರ್ಶನಿಕ. ಕುಮಾರವ್ಯಾಸನ ಮತ್ತು ಮಲ್ಲರಸನ ಕೃತಿಗಳಲ್ಲಿ ಅಷ್ಟಿಷ್ಟು ವ್ಯತ್ಯಾಸಗಳೊಂದಿಗೆ ಪರಿಚಿತ ತ್ರಿಪುರದಹನ ಕಥೆ ಇದೆ. ಮಲ್ಲರಸನ ಕೃತಿಯಲ್ಲಿ ವಿಷ್ಣುವಿನ ಬದಲು ಕೃಷ್ಣ ಬಂದಿರುವನು. ಅವನೇ ಶಿವನ ಸಾರಥಿ. ಅವನೇ ಬುದ್ಧಾವತಾರ (ನಗ್ನ) ತಾಳಿರುವನು.

ಆಚಾರ್ಯ ಮಧ್ವರ ಕೃತಿಗಳಲ್ಲಿ

ಭಕ್ತಿ, ಛಂದಸ್ಸು ಮತ್ತು ಸಂಗೀತ ದೃಷ್ಟಿಯಿಂದ ಆಚಾರ್ಯಮಧ್ವರ ದ್ವಾದಶ ಸ್ತೋತ್ರ ಒಂದು ಅಪೂರ್ವಕೃತಿ. ಅರ್ಥದಲ್ಲೂ ಅಷ್ಟೇ ವಿಷ್ಣುವಿನ ದಶಾವತಾರ ಲೀಲೆಗಳ ಸ್ತುತಿ ಇರುವ ಹನ್ನೆರಡು ಸ್ತೋತ್ರಗಳಿರುವುದರಿಂದ ಇದಕ್ಕೆ 'ದ್ವಾದಶಸ್ತೋತ್ರ' ಎಂಬ ಹೆಸರು ಬಂದಿದೆ. ಇದರಲ್ಲಿ ಆರನೆಯ ಮತ್ತು ಒಂಬತ್ತನೆಯ ಸ್ತೋತ್ರಗಳಲ್ಲಿ ಬುದ್ಧನನ್ನು [ವಿಷ್ಣು] 'ದೈತ್ಯವಿಮೋಹಕ ನಿತ್ಯಸುಖಾದೇ' ದಿತಿ-ಸುತ ಮೋಹನ ವಿಮಲ ವಿಬೋಧನ ಪರಗುಣ ಸಮೋದಿತ ಬುದ್ಧ ಹೇ ಭವ ಮಮ ಶರಣಂ' ಎಂದು ಸ್ತುತಿಸಿರುವರು.

ಮೂವತ್ತೆರಡು ಅಧ್ಯಾಯಗಳಿಂದ ಕೂಡಿದ ಶ್ರೀಮಧ್ವಾಚಾರ್ಯರ 'ಮಹಾಭಾರತ ತಾತ್ಪರ್ಯ ನಿರ್ಣಯ' ಒಂದು ಪದ್ಯಬಂಧ ಮೇರು ಕೃತಿ. ವ್ಯಾಸ ಭಾರತದ ಅರ್ಥ

ವಿವರಣೆಗೊಂದು ಹೊಸದಾರಿಯನ್ನು ತೆಗೆದಿರಿಸಿದೆ. ವ್ಯಾಸಭಾರತದ ಪೂರ್ವಾಪರ ಸಂಬಂಧಯುಕ್ತ ಸಂದರ್ಭಗಳ ಪರಿಣಾಮಕಾರಿ ಸಮನ್ವಯವನ್ನು ಇಲ್ಲಿ ಸಾಧಿಸಲಾಗಿದೆ. ಇದರ ಅಧ್ಯಾಯ ೩ರಲ್ಲಿ, (ಶ್ಲೋಕ ೧೩೭-೧೬೨) ಬುದ್ಧಾವತಾರದ ವಿಚಾರ ಬರುತ್ತದೆ. ಪಾಂಡವ ನಿರ್ಯಾಣದ ಅನಂತರ ಪರೀಕ್ಷಿತ ಮತ್ತು ಅನ್ಯ ಕೆಲವರು ಕ್ಷೇಮಕಾಂತನೆಂಬ ರಾಜನ ವರೆಗೆ ೧೦೦೦ ವರ್ಷ ಭಗವಾನ್ ವ್ಯಾಸರ ಮಾರ್ಗದರ್ಶನದಲ್ಲಿ ಸನಾತನ ವೈದಿಕ ಧರ್ಮವನ್ನು ರಕ್ಷಿಸಿಕೊಂಡು ಬಂದಿದ್ದರು. ಅಷ್ಟೊತ್ತಿಗೆ ಕಲಿಯುಗ ಕಾಲಿರಿಸಿತ್ತು. ವ್ಯಾಸರು ತಮ್ಮ ಶಿಷ್ಯ ಪ್ರಶಿಷ್ಯರೊಂದಿಗೆ ಸ್ವಸ್ಥಾನಕ್ಕೆ (ಬದರಿಕಾಶ್ರಮ) ತೆರಳಿದ್ದರೂ ಅವರು ಹಾಕಿಕೊಟ್ಟ ಧರ್ಮ ಕರ್ಮ ಸಂಪ್ರದಾಯಗಳು ಬಳಕೆಯಲ್ಲಿದ್ದವು. ತ್ರಿಪುರ ದಹನ ಸಂದರ್ಭದಲ್ಲಿ ಅಳಿದುಳಿದ ಕೆಲವು ದೈತ್ಯರು ಮಾನವರಾಗಿ ಜನಿಸಿದ್ದರು. ಅವರು ಆ ಸಂಪ್ರದಾಯಗಳನ್ನು ಎತ್ತಿಕೊಂಡು ದೇವತೆಗಳೊಡನೆ ಸ್ಪರ್ಧಿಸತೊಡಗಿದರು. ದೇವತೆಗಳಿಗೆ ಇದು ಸಹಿಸದಾಯಿತು. ಲೋಕಕ್ಕೆ ಅವರಿಂದ ಅಷ್ಟೊಂದು ಪೀಡೆ ಇಲ್ಲದ್ದರಿಂದ ಸಂಹಾರದ ಪ್ರಶ್ನೆಯೂ ಇದ್ದಿಲ್ಲ. ತಾಮಸಿಗಳಿದ್ದ ಅವರ ಕೈಯಲ್ಲಿ ಸಿಕ್ಕ ವ್ಯಾಸಪ್ರೋಕ್ತ ಸನಾತನ ವೈದಿಕ ಸಂಪ್ರದಾಯ ಎತ್ತ ಮತ್ತು ಹೇಗೆ ಹೊರಳೀತೆಂಬ ಭಯ ಮಾತ್ರ ಇದ್ದಿತು. ಆ ಸಂಪ್ರದಾಯದ ವಿಷಯದಲ್ಲಿ ಅವರ ಮತಿಗೆಡಿಸಿ (ಮೋಹಗೊಳಿಸಿ) ಅವರನ್ನು ಮತ್ತೊಂದು ದಿಶೆಗೆ ಹೊರಳಿಸುವದೊಂದು ಸೂಕ್ತ ಉಪಾಯವೆನಿಸುತ್ತಿತ್ತು. ಇದನ್ನೆಲ್ಲ ಪರ್ಯಾಲೋಚಿಸಿ, ಮಾರ್ಗದರ್ಶನಕ್ಕೆಂದು ಬಂದ ದೇವತೆಗಳಿಗೆ ಅಭಯ ನೀಡಿ ವಿಷ್ಣು ಓರ್ವ ಸುಂದರ ಶಿಶು ರೂಪಧರಿಸಿ ಶ್ರೀ ಕ್ಷೇತ್ರ ಗಯೆಯಲ್ಲಿ (ಬಿಹಾರ) ಪ್ರಕಟನಾದನು. ತ್ರಿಪುರ ದೈತ್ಯರಲ್ಲಿ ಪ್ರಮುಖನಿದ್ದ ತಾರಾಕ್ಷನು ಶುದ್ಧೋದನ ಜಿನನೆಂಬ ಮಾನವನಾಗಿ ಜನಿಸಿದ್ದನು. ಜಿನ ಶಬ್ದ ಗೌರವಾರ್ಥಕ ಉಪಪದವಿದ್ದು ಬೌದ್ಧ ಮತ್ತು ಜೈನ ಎರಡೂ ಮತಗಳಲ್ಲಿನ ಸಾಧುಗಳಿಗೆ ಅನ್ವಯಿಸುತ್ತದೆ. ಶುದ್ಧೋದನ ಅರಸನೆಂಬ ಮಾತಿದ್ದರೂ ಅವನು ಅರಸನಿದ್ದಿಲ್ಲ. ಹೆಚ್ಚೆಂದರೆ ಅವನೋರ್ವ ತನ್ನ ಬುಡಕಟ್ಟಿನ ಸಿರಿವಂತ ನೇತಾರನಿರಬಹುದೆಂದು ಆಧುನಿಕ ವಿದ್ವಾಂಸರ ಅಭಿಪ್ರಾಯವಿದೆ.

ಶುದ್ಧೋದನ ಗಯೆಯಲ್ಲಿ ಪ್ರಕಟನಾದ ಶಿಶುರೂಪಿ ವಿಷ್ಣು ತನ್ನ ಮಗನೆಂದು ಭ್ರಮಿಸಿ ಮನೆಗೆ ಕೊಂಡೊಯ್ದನು. ಮುಂದೆ ನಾಮಕರಣಾದಿ ಸಂಸ್ಕಾರಗಳನ್ನು ಮಾಡಲುದ್ಯುಕ್ತನಾದಾಗ ಶಿಶುರೂಪಿ ವಿಷ್ಣು ಹಿಂದಕ್ಕೆ ಸರಿದು ತಿರಸ್ಕಾರಯುಕ್ತ ನಗೆಯಿಂದ ಇವಾವುವೂ ನನಗೆ ಬೇಡ, ನಾನು ಬುದ್ಧ, ಸರ್ವಜ್ಞ ಎಂದನು. ಇದೇ ಬುದ್ಧ ಮತ್ತು ಬೌದ್ಧ ಧರ್ಮದ ಉಗಮ. ಶಿಶುವಿನ ಈ ಮಾತಿನಿಂದ ವಿಸ್ಮಿತರಾದ ಶುದ್ಧೋದನಾದಿಗಳಿಗೆ ಅದರಲ್ಲಿ ವಿಶ್ವಾಸ ಮೂಡಲಿಲ್ಲ. ಆಗ ವಿಷ್ಣು ದೇವತೆಗಳನ್ನು ಸ್ಮರಿಸಿ ಬರಮಾಡಿಕೊಂಡು ತನ್ನ ಮೇಲೆ ಅವರ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಲು ಆದೇಶಿಸಿದನು. ತನ್ನ ಚಕ್ರವನ್ನು ಹೊರತೆಗೆದು ಅದರಿಂದ ಅವನ್ನೆಲ್ಲ ನಿಷ್ಕ್ರಿಯವಾಗಿಸಿ ಚಕ್ರವನ್ನು ಹಿಂತೆಗೆದುಕೊಂಡು ದೇವತೆಗಳಿಗೆ ಮರಳಿ ಹೋಗಲು ಅಪ್ಪಣೆ ಕೊಟ್ಟನು.

ಆಗ ಶುದ್ಧೋದನಾದಿಗಳಿಗೆ ಆ ಮಗು ಸಾಮಾನ್ಯ ಮಗುವಲ್ಲ, ಸಾಕ್ಷಾತ್ ವಿಷ್ಣುವೆಂಬ ನಂಬುಗೆ ಮೂಡಿತು. ಮಗುವಿನ ಆಕರ್ಷಕರೂಪ ಮಾತುಗಳಿಂದ ಮೋಹಿತರಾದ ಅವರು ಆವರೆಗೆ ಅನುಸರಿಸುತ್ತಿದ್ದ ವ್ಯಾಸಪ್ರೋಕ್ತ ವೈದಿಕ ಸಂಪ್ರದಾಯಗಳನ್ನು ತ್ಯಜಿಸಿ ಪ್ರಪಂಚವೆಲ್ಲ ಕ್ಷಣಿಕ, ಶೂನ್ಯ, ಜ್ಞಾನ ಅಸ್ಥಿರ ಎಂದು ಮುಂತಾಗಿ ಬಗೆದು ಆ ರೀತಿ ವರ್ಣಿಸತೊಡಗಿದರು.

ಬಳಿಕ ವಿಷ್ಣು ದೇವತೆಗಳಿದ್ದಲ್ಲಿ ಹೋಗಿ ಶುದ್ಧೋದನಾದಿ ಮಾನವ ರೂಪಿ ದೈತ್ಯರಿಗೆ ಬೋಧಿಸಿದ ಮತ ಸನಾತನ ವೈದಿಕ ಮತಕ್ಕೆ ಅದೆಂತು ಅವಿರೋಧವಾಗಿದೆ ಎಂಬುದನ್ನು ಆಗ ಬಳಸಿದ ಶಬ್ದಗಳಲ್ಲಿಯೇ ವಿವರಿಸಿದನು. ಅದು ಹೀಗೆ—"ಕ್ಷಣ ಮತ್ತು ಕ್ಷಣಿಕ ಎರಡೂ ಕಾಲವಾಚಕ ಶಬ್ದಗಳು. ಗಡಿಗೆ ಮಡಕೆ ಮೊದಲಾದವು ವಸ್ತುವಾಚಕ ಶಬ್ದಗಳು. ಆದರೂ ಅಲ್ಪಕಾಲ ಬಾಳುವ ಅವುಗಳಿಗೆ ಕ್ಷಣಿಕ ಎನ್ನುತ್ತೇವೆ. ಒಂದಿಲ್ಲೊಂದು ದಿನ ಪ್ರಳಯೋದಕದಲ್ಲಿ ಮುಳುಗಿ ಹೋಗುವ ಪ್ರಪಂಚಕ್ಕೆ ಕೂಡ ಕ್ಷಣಿಕ ಎನ್ನುತ್ತೇವೆ. ಇದು ಭಾಷಾಬಳಕೆಯ ವೈಶಿಷ್ಟ್ಯ. ನಿಜವಾಗಿ ನೋಡಿದರೆ ಎಲ್ಲವೂ ಸತ್ಯ. ಕಾಲಾಧೀನ. ಕಾಲಕ್ಕೆ ಆದಿ ಇಲ್ಲ, ಅಂತ್ಯವಿಲ್ಲ. ಅಸಂಖ್ಯ ಕ್ಷಣಗಳಿಂದ ಕೂಡಿದ ಕಾಲಚಕ್ರ ಸಂತತ ತಿರುಗುತ್ತಲೇ ಇರುತ್ತದೆ. ಗಡಿಗೆ ಮಡಕೆಗಳು ತಾವು ಇರುವಷ್ಟು ಕಾಲ ಇದ್ದಲ್ಲಿಯೇ ಇರುತ್ತದೆ. ಆ ಕಾಲ ನಾನೇ. ಅಂತೆಯೆ ನನಗೆ ಕಾಲರೂಪಿ ಪರಮಾತ್ಮ ಎನ್ನುವರು.

"ಸ್ರಷ್ಟೃ ದೃಷ್ಟ ಕರ್ತನಾದ ನಾನು (ವಿಷ್ಣು)–'ಶಂ' (ಕಲ್ಯಾಣ ರೂಪಿ,) ಪರಮೋಚ್ಚ. ಅತಏವ 'ಶೂ', ವಿಶ್ವ ನಿಯಂತ್ರಣವೂ ನನ್ನಿಂದಲೇ—'ನೀ', ಆದ್ದರಿಂದ 'ಶೂನ್ಯ' ಎಂದರೂ ನಾನೇ. 'ಅ–ಸತ್' ಎಂದರೂ ನಾನೇ–ಮಿಕ್ಕೆಲ್ಲವುಗಳಿಂದ ಭಿನ್ನ ಎಂಬರ್ಥದಲ್ಲಿ ('ಅ'). ದೋಷವರ್ಜಿತ ಎಂಬರ್ಥದಲ್ಲೂ 'ಅ' ಅಕ್ಷರವನ್ನು ಬಳಸುವದುಂಟು. ಪ್ರಳಯಕಾಲದಲ್ಲಿ ವಿಶ್ವವೆಲ್ಲವೂ ಪ್ರಳಯೋದಕದಲ್ಲಿ ಮುಳುಗಿ ಹೋಗುವದು. ಆದ್ದರಿಂದ ಅದು 'ಅಸತ್' ಎನ್ನುವುದುಂಟು. ಆದರೆ ಪ್ರಳಯ ಒದಗುವುದಾದರೂ ನನ್ನಿಂದಲೇ ಪ್ರಳಯೋದಕದಲ್ಲಿ ವಿಶ್ವವು ಮುಳುಗಿ ಹೋದರೂ ಅದು ಸಂಪೂರ್ಣ ನಿಶ್ಶೇಷವಾಗುವುದಿಲ್ಲ. ಮೂಲ ಘಟಕಗಳಲ್ಲಿ ಇದ್ದೇ ಇರುತ್ತದೆ. ಸೃಷ್ಟಿ ಪ್ರಾರಂಭವಾದಾಗ ಮತ್ತೆ ಭಿನ್ನ ಭಿನ್ನ ರೂಪಗಳಿಂದ ಮೇಲೆ ಬರುತ್ತದೆ. ಆದ್ದರಿಂದ 'ಅಸತ್' ಅಥವಾ 'ಕ್ಷಣಿಕ' ಎನ್ನುವುದು ಕಲ್ಪನೆ ಮಾತ್ರ. ಮುಂದುವರಿದು ವಿಷ್ಣು ಚೈತನ್ಯಸ್ವರೂಪ ('ಜ್ಞ'), ಸರ್ವಶ್ರೇಷ್ಠ ಎಂದರೂ ನಾನೇ. ಜಡ ವಸ್ತುಗಳ ನಿಯಂತ್ರಣ ('ಅನ') ಕೂಡ ಜ್ಞಾನಿಯಾದ (ಜ್ಞ—ಅನ) ನನ್ನಿಂದಲೇ. ಸಕಲ ಚೇತನಾ — ಚೇತನ ವಸ್ತುಗಳ ನಿಯಂತ್ರಣ ನನ್ನಿಂದಲೇ, ಆಗುವುದರಿಂದ 'ಜ್ಞಾನಾತ್ಮಕ' ಎಂದರೂ ನಾನೇ."

ದೈತ್ಯರಿಗಿತ್ತ ತನ್ನ ಈ ಉಪದೇಶದಲ್ಲಿ ಶಿಶುರೂಪಿ ವಿಷ್ಣು ಬಳಸಿದ ಕ್ಷಣಿಕ, ಶೂನ್ಯ, ಅಸತ್, ಜ್ಞಾನಾತ್ಮಕ ಶಬ್ದಗಳಿಗೆ ಬೌದ್ಧಾಗಮದಲ್ಲಿ ಮಹತ್ವದ ಸ್ಥಾನ

ವಿದೆಂಬುದು ಗಮನಾರ್ಹವಿದೆ. ಈ ರೀತಿ ವಿಷ್ಣು ದೇವತೆಗಳಿಗೆ ದೈತ್ಯರಿಗಿತ್ತ ತನ್ನ ಉಪದೇಶದ ಗೂಢ ಅಥವಾ ಒಳ ಅರ್ಥವನ್ನು ತಿಳಿಹೇಳಿದಾಗ ಅವರಿಗೆ ಅದಾದರೂ ವೈದಿಕ ಮತ ವಿರೋಧಿಯಾಗದೆಂಬ ಸಮಾಧಾನವಾಗಿ 'ಪ್ರಶಾಂತ ವಿದ್ಯೆ' ಎಂದು ಅವರು ಅದನ್ನು ಸ್ವೀಕರಿಸಿದರು. ಇತ್ತ ದೈತ್ಯರಿಗೆ ಆ ಉಪದೇಶದ ತೋರಿಕೆ ಅಥವಾ ವಾಚ್ಯಾರ್ಥವು ಸುಗಮ ಮತ್ತು ಆಕರ್ಷಕ ಎನಿಸಿ ಅವರು ಅದನ್ನು ಬುದ್ಧನಿಂದ (ಶಿಶುರೂಪಿ ವಿಷ್ಣು) ಉಪದೇಶಿಸಲ್ಪಟ್ಟದ್ದರಿಂದ ಬೌದ್ಧಮತವೆಂದು ಸ್ವೀಕರಿಸಿ ಅನುಸರಿಸತೊಡಗಿದರು ತಮಗೆ ಸರಿದೋರಿದಂತೆ ಬೆಳಸಿ ವಿಸ್ತರಿಸಿದರು. ಉಳಿದವರು ಅಂದರೆ ವೈದಿಕ ಮತೀಯರು ಎಂದಿನಂತೆ ಸಮಾಧಾನ ಚಿತ್ತದಿಂದ ವ್ಯಾಸಸಂಪ್ರದಾಯದ ಅನುಸರಣೆಯಲ್ಲಿ ತೊಡಗಿದರು.

ಶ್ರೀಮದ್ವಾಚಾರ್ಯರು ತಮ್ಮ ಈ ವಿವರಣೆಯಲ್ಲಿ ಪುರಾಣೋಕ್ತ ವಿಷ್ಣು ಬುದ್ಧಾವತಾರದಲ್ಲಿ ನಗ್ನರೂಪಿ ಎಂಬುದನ್ನು ಮರೆತಿಲ್ಲ. ತಮ್ಮ ವಿವರಣೆಯಲ್ಲಿನ ಶಿಶುರೂಪಿ ವಿಷ್ಣುವನ್ನು "ಚಾರುತಮಾಕೃತಿಶ್ಶಿಶುಃ" ಎಂದು ಬಣ್ಣಿಸಿರುವರು. ನವಜಾತ ಶಿಶುವಾದರೂ ನಗ್ನವಾಗಿರುತ್ತದೆಂಬುದನ್ನು ಬೇರೆ ಹೇಳಬೇಕಿಲ್ಲ. ಈ ರೀತಿ ದೈತ್ಯರಿಗೆ ಅವರಿಗಿಷ್ಟವಿರುವಂಥ ನಿಯತ್ತಾದ ಒಂದು ಧರ್ಮವನ್ನು ಒದಗಿಸಿರುವರಲ್ಲದೆ ವ್ಯಾಸ ಸಂಪ್ರದಾಯಿ ವೈದಿಕ ಮತೀಯರ ಉಪಾಸನಾಮಾರ್ಗವನ್ನು ನಿಷ್ಕಂಟಕವಾಗಿಸಿರುವರು. ಬೌದ್ಧಮತದ ಆಗುಹೋಗುಗಳು ಏನೇ ಇದ್ದರೂ ಆಚಾರ್ಯರು ತತ್ಕಾಲೀನ ಬೌದ್ಧಮತಾಂತರ್ಗತ ಗೂಢಾರ್ಥವನ್ನು ಆಶ್ರಯಿಸಿ ತಮ್ಮ ಪ್ರಣಾಲಿಗೆ ಹೊಂದುವಂತೆ ಪುನಃ ರಚಿಸಿಕೊಂಡಿರುವರು, ಆನುಷಂಗಿಕವಾಗಿ ಅವತರಿಸಿದ (ಬುದ್ಧ) (ವಿಷ್ಣು) ನಗ್ನ ಮತ್ತು ತನ್ಮೂಲಕ ದೈತ್ಯರನ್ನು ಮೋಹಿಸಿದ್ದುದರಿಂದ 'ದೈತ್ಯವಿಮೋಹಕ' ಎಂದು ಒಮ್ಮನಸ್ಸಿನಿಂದ ಅವನನ್ನು ಸ್ತುತಿಸಲು ಎಡೆಮಾಡಿಕೊಟ್ಟಿರುವರು. ಸ್ವತಃ ತಾವೇ ಆ ರೀತಿ ಸ್ತುತಿಸಿ ಆತನ ಅನುಗ್ರಹ ಕೋರಿರುವರು.

ಇಷ್ಟೇ ಅಲ್ಲ. ಬದರಿಕಾಶ್ರಮದಲ್ಲಿ ಭಗವಾನ್ ವ್ಯಾಸರೊಂದಿಗೆ ಸಾಕ್ಷಾತ್ ಶ್ರೀನಾರಾಯಣನ ದರ್ಶನಕ್ಕೆ ಹೋದಾಗ ತಮ್ಮ ವಂದನಾತ್ಮಕ ಸ್ತುತಿಯಲ್ಲಿ ಆತನ ದಶಾವತಾರಗಳ ಲೀಲೆಗಳಲ್ಲಿ ಬುದ್ಧಾವತಾರವನ್ನು "ಲಲಿತ ಬಾಲ್ಯ ಮನಯಂ। ಪ್ರತಿಭಾ ಬಲೇನ ಕೃತ ದೈತ್ಯಕೌತುಕಃ" ಎಂದು ಶಿಶುರೂಪಿ ಬುದ್ಧನನ್ನು (ವಿಷ್ಣು) ಬಣ್ಣಿಸಿರುವರು. 'ನಾರಾಯಣ ಪಂಡಿತರ 'ಸುಮಧ್ವವಿಜಯ' – ಸರ್ಗ ೮. ೧೭' ನಾರಾಯಣ ಪಂಡಿತರ ಹೊರತಾಗಿ ಶಿಶುರೂಪಿ ಬುದ್ಧನ (ವಿಷ್ಣು) ಸ್ತುತಿ ಸಂಸ್ಕೃತದಲ್ಲಿರುವ ವಾದಿರಾಜರ ಮತ್ತು ಉತ್ತರಾದಿ ಮಠದ ಪೀಠಾಧಿಪತಿ ಶ್ರೀಸತ್ಯವ್ರತ ತೀರ್ಥರ ಪೂರ್ವಾಶ್ರಮ ಪುತ್ರ ಕೋನೇರಿ ಅವರ ದಶಾವತಾರ ಸ್ತೋತ್ರಗಳಲ್ಲೂ ಬಂದಿದೆ.

ಸ್ತುತಿಯೊಂದಿಗೆ ಬೌದ್ಧಮತದ ಮೂದಲಿಕೆಯೂ ಇದೆ. ಶ್ರೀವಾದಿರಾಜರು 'ಗುಂಡಕ್ರಿ' ಎಂಬ ಗಾನವಿಶಿಷ್ಟ ಹೆಸರಿನ ತಮ್ಮ ಕೃತಿಯಲ್ಲಿ–

ಇದ್ದ ದೇವಮಾನವರ ಮಾತಿನೊಳು । ಶ್ರದ್ಧೆಯ ಮಾಡುವರು ಲೋಕದವರು ಬುದ್ಧರೂಪದಿಂದ । ಆದ್ಯ ನಾರಾಯಣನು ಬಂದಿಲ್ಲಿ ಪೇಳ್ದ ಸಿದ್ಧಾಂತವನು । ಗದ್ದು ಗನ್ನವ ಮಾಡಲುದ್ಭವಿಸಿದ ಕತೆ । ಸಿದ್ಧವಾಗಲಿಲ್ಲವೆ....?

—ದೇವಮಾನವರು ಎಂದರೆ ದೇವತೆಗಳ ಹಂತಕ್ಕೆ ಏರಿಸಲ್ಪಟ್ಟ ಗೌತಮಬುದ್ಧ ಮತ್ತು ಇತರರು. 'ಮಹಾಯಾನ' ಬೌದ್ಧ ಶಾಖೆಯಲ್ಲಿ ಸೃಷ್ಟಿ-ಸ್ಥಿತಿ-ಲಯಕರ್ತ ವಿಷ್ಣು ಸಮಾನ ಆದಿ ಬುದ್ಧನೊಬ್ಬನು ಪ್ರಾದುರ್ಭವಿಸಿರುವನು. ಗೌತಮ ಬುದ್ಧ ಮೊದಲಾದವರು ಬೋಧಿಸತ್ವರಾಗಿರುವರು. ತಾರಾ ಭಗವತಿ-ಮೊದಲಾದ ಬೌದ್ಧ ಸ್ತ್ರೀ ದೇವತೆಗಳು ಉದ್ಭವಿಸಿರುವರು. ಆದ್ಯನಾರಾಯಣ ಎಂದರೆ ಶಿಶುರೂಪದಲ್ಲಿ ಅವತರಿಸಿದ ವಿಷ್ಣು. ಗದ್ದುಗನ್ನ ಎಂದರೆ ಕಿಚಡಿ.

ಆಚಾರ್ಯ ಮಧ್ವ ಮತ್ತು ದಾಸರ ಮತದಲ್ಲಿ ತ್ರಿಪುರದಹನ ಪ್ರಸಂಗದಲ್ಲಿ ಅವತರಿಸಿದ ಬುದ್ಧ (ವಿಷ್ಣು). ಕಲಿಯುಗದಲ್ಲಿ ಅವತರಿಸಿದ ಶಿಶುರೂಪಿ ಬುದ್ಧ (ವಿಷ್ಣು) ಏಕವ್ಯಕ್ತಿ. ಗೌತಮ ಬುದ್ಧ ಬೇರೆ ವ್ಯಕ್ತಿ. ಶುದ್ಧೋದನಾದಿ ಮಾನವರೂಪಿ ದೈತ್ಯನಿಗೆ ಉಪದೇಶಿಸಿ ವಿಷ್ಣು ನೇರವಾಗಿ ದೇವತೆಗಳತ್ತ ಹೋಗಿ ಅವರಿಗೆ ತನ್ನ ಉಪದೇಶದ ಗೂಢಾರ್ಥವನ್ನು ತಿಳಿಸಿ, ಅಲ್ಲಿಂದ ಮುಂದೆ ತನ್ನ ನಿಜರೂಪದಲ್ಲಿ ವೈಕುಂಠಕ್ಕೆ ಹೋಗುವನು. ಮರಳಿ ಭೂಲೋಕಕ್ಕೆ ಬರುವುದಿಲ್ಲ. ಪರಿಸ್ಥಿತಿ ಇಂತಿರುವಾಗ ತ್ರಿಪುರದಹನ ಪ್ರಸಂಗದ ಬುದ್ಧ, ಕಲಿಯುಗದ ಶಿಶುರೂಪಿ ಬುದ್ಧ, ಅದೇ ಯುಗ ದವನಾದ ಗೌತಮ ಬುದ್ಧ ಮೂವರೂ ಏಕವ್ಯಕ್ತಿ ಎಂದು ಬಗೆಯುವದೆಂತು ?

ಇಷ್ಟೇ ಅಲ್ಲ. ಶಿಶುರೂಪಿ ಬುದ್ಧನ (ವಿಷ್ಣು) ಮೋಹಕ್ಕೊಳಗಾದ ಪ್ರಥಮ ವ್ಯಕ್ತಿ ಶುದ್ಧೋದನ ಇರುವದರಿಂದ ದಾಸರು ಅವನನ್ನೇ ಪ್ರಚಲಿತ ಬೌದ್ಧಮತದ ವಾರಸು ದಾರನನ್ನಾಗಿಸಿರುವರು. ಅವನನ್ನು 'ಗುರು ಶುದ್ಧೋದನ' ಎಂದಿರುವರು. ಆ ಹೆಸರಿ ನಿಂದಲೇ ವಾದಿರಾಜರು ತಮ್ಮ 'ಗುಂಡಕ್ರಿ' ಪದದಲ್ಲಿ—

ಅದ್ವೈತವಾದಿ ನಿನ್ನ ವಿದ್ವನ್ಮತದಲ್ಲಿ । ಬುದ್ಧದೇವನಿಗೆ ಪೆಸರಿದ್ದ ಕಾರಣದಿಂದ
ಅದ್ವಯವಾದಿಯೆಂದು (ನಿಮ್ಮ) ರಾದ್ಧಾಂತದ ಗುರು । ಶುದ್ಧೋದನ ಮುನಿ
ಪೇಳ್ದ ಬುದ್ಧ ಮತವ । ಶುದ್ಧಾಗಿ ಶೋಧಿಸಿ
ಸಿದ್ಧಾಂತ ಕತೆಗಳು ಬದ್ಧವಾಗುವದಿಲ್ಲವೆ....?

—ಎಂದು ಶಾಂಕರ ಅದ್ವೈತ ವಾದಿಗಳಿಗೆ ಸವಾಲು ಹಾಕಿರುವರು. ಗೌತಮ ಬುದ್ಧ ನನ್ನು ಸಂಪೂರ್ಣ ಬದಿಗೆ ಸರಿಸಿರುವರು.

ಆಕ್ಷೇಪಣೆಯ ಪೂರ್ತಿಪಾಠ

ಶ್ರೀವಾದಿರಾಜರ 'ಸ್ವಪ್ನಪದ' ಎಂಬ ಕೀರ್ತನೆಯಲ್ಲಿ ಸ್ವಯಂ ವಿಷ್ಣು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು ತನ್ನ ಇತರ ಮಹತ್ ಕೃತಿಗಳೊಂದಿಗೆ ಬುದ್ಧಾವತಾರದಲ್ಲಿ

'ತ್ರಿಯಂಬಕನ ಹಿತಕ್ಕಾಗಿ ತ್ರಿಪುರವಧುಗಳನಾ ಕೆಡಿಸಿದೆ' ಎಂದು ಹೇಳಿದ್ದರೂ ಅದನ್ನು ಕಡೆಗಣಿಸಿ ಆಕ್ಷೇಪಕರು.... "ಬುದ್ಧಾವತಾರವೆತ್ತಿದ ಕೃಷ್ಣನ (ವಿಷ್ಣು) ಉದ್ದೇಶ ತ್ರಿಪುರಗಳ ಅಂಗನೆಯರನ್ನು ಹೊಲಬುಗೆಡಿಸುವದು. ಅದಕ್ಕಾಗಿ ನಗ್ನದರ್ಶನ: ಈ ಆಶಯ ಎಷ್ಟು ಕ್ರೂರವಾಗಿದೆ ಎಂದರೆ ಆ ತ್ರಿಪುರಗಳ ಮುಗ್ಧೆಯರಾದ ಪತಿವ್ರತೆಯರನ್ನು ಹಾಳು ಮಾಡುವುದು ಧರ್ಮಸ್ಥಾಪನೆಯ ಸೋಗಿನಲ್ಲಿ ಸಮರ್ಥನೀಯವಾಗಿದೆ! ಎಂದರೆ ಬುದ್ಧನನ್ನು ತಮ್ಮಲ್ಲಿ ಸೇರಿಸಿಕೊಂಡಿದ್ದರೂ ಬುದ್ಧಿವಂತಿಕೆಯಿಂದ ಆ ತತ್ವದ ಪೊಳ್ಳುತನವನ್ನು ವ್ಯಂಗ್ಯ ಮಾರ್ಗದಲ್ಲಿ ಹೇಳುವುದೇ ಈ ತಂತ್ರಗಾರಿಕೆಯೆಂದು ತೋರುತ್ತದೆ. ವಿಶೇಷವೆಂದರೆ "ಬೌದ್ಧದರ್ಶನದಿಂದ ಅವರನ್ನು (ತ್ರಿಪುರದವರನ್ನು) ಸೋಲಿಸಿದ" ಎಂಬ ಹೇಳಿಕೆಗಳು ಇವೆಯೇ ವಿನಾ ಆ ಬೌದ್ಧದರ್ಶನದ ವಿವರಗಳಿಲ್ಲ", ಎಂದು ಆಕ್ಷೇಪಿಸಲಾಗಿದೆ.

ಇದು ತಪ್ಪು. ವಿಷಯದ ಸರ್ವಾಂಗೀಣ ವಿಮರ್ಶೆ ಇಲ್ಲದೆ ಆಚಾರ್ಯ ಮಧ್ವ ಮತ್ತು ದಾಸವರ್ಣಿತ ಬುದ್ಧ ಇತಿಹಾಸ ಪ್ರಸಿದ್ಧ ಗೌತಮ ಬುದ್ಧ ಏಕವ್ಯಕ್ತಿ ಎಂದು ಬಗೆದಿದ್ದರ ಫಲಿತಾಂಶ. ಈ ವರೆಗಣ ವಿವರಣೆಯಿಂದ ಆಚಾರ್ಯ ಮಧ್ವರಾಗಲಿ ದಾಸರಾಗಲಿ ವಿಷ್ಣುವಿನ ದಶಾವತಾರಗಳಲ್ಲಿ ಸೇರಿಸಿಕೊಳ್ಳಲಾದ ಐತಿಹಾಸಿಕ ಗೌತಮ ಬುದ್ಧನಿಗೆ ಮನ್ನಣೆ ಇತ್ತಿಲ್ಲ. ಆತ ಸಾಕ್ಷಾತ್ ವಿಷ್ಣುವೆಂದು ಬಗೆದು ಆ ರೀತಿ ಸ್ತುತಿಸಿರುವದು ಪುರಾಣೋಕ್ತ ಬುದ್ಧನನ್ನು. ಪರಿಸ್ಥಿತಿ ಇಂತಿರುವಾಗ ಅವರ ಸಾಹಿತ್ಯದಲ್ಲಿ ಗೌತಮ ಬುದ್ಧಪ್ರೋಕ್ತ ಮತತತ್ವಗಳಿಗಾಗಲಿ ಚರಿತ್ರಾಂಶಗಳಿಗಾಗಲಿ (ಮೂದಲಿಕೆ ಬಿಟ್ಟು) ಎಡೆ ದೊರೆಯುವದೆಂತು ?

ಇನ್ನು ತ್ರಿಪುರಾಂಗನೆಯರ ವ್ರತಭಂಗ ಆಪಾದನೆ. ಆಪಾದಿತರು ಸಾಮಾನ್ಯರಲ್ಲ, ಸ್ವಯಂ ವಿಷ್ಣು ಪರಮಾತ್ಮ ಮತ್ತು ಆತನ ಪರಮ ಭಕ್ತರಿದ್ದ ದೇವಾಂಶ, ಋಷಿ, ಮಹರ್ಷಿಗಳ ಅಂಶರೆಂದು, ಗಣಿಸಲ್ಪಟ್ಟ ಹರಿದಾಸರು. ಬುದ್ಧನೆಂದು ಭವ್ಯಸುಂದರ ನಗ್ನ ರೂಪವನ್ನು ಧರಿಸಿ ಪ್ರಕಟನಾಗಿ ತ್ರಿಪುರ ದೈತ್ಯರಿಗೆ 'ಔಪಧರ್ಮ' ಬೋಧಿಸಿದ್ದು ಸಮರಾಂಗಣದಲ್ಲಿ ದೈತ್ಯ ಸ್ತ್ರೀಯರದು ಅವಾಂತರ ಉಪಸ್ಥಿತಿ. ಬಹುಶಃ ವಿಶ್ವಮೋಹಕ ನಗ್ನರೂಪಿ ಪುರುಷನೋರ್ವನು ತಮ್ಮ ಪತಿಗಳಿಗೆ ಏನೇನೊ ಬೋಧಿಸುತ್ತಿರುವನೆಂಬುದನ್ನು ಕೇಳಿ ನಮ್ಮ ಹಳಗನ್ನಡ ಕಾವ್ಯಗಳಲ್ಲಿ ಪುರನಾರಿಯರು ಮೆರವಣಿಗೆ ಹೊರಟ ರಾಜಕುಮಾರನನ್ನು ನೋಡುವ ಔತ್ಸುಕ್ಯದಲ್ಲಿ ಕೈಯಲ್ಲಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು ಇದ್ದ ಸ್ಥಿತಿಯಲ್ಲಿಯೇ ಓಡಿ ಬಾಗಿಲಿಗೆ ಬರುವಂತೆ, ನಗ್ನ ಪುರುಷನ ದರ್ಶನದಿಂದ ತಮ್ಮ ಪತಿವ್ರತಾಧರ್ಮ ಭಂಗವಾಗುವದೆಂಬುದರ ಪರಿವೆ ಇಲ್ಲದೆ ರಣರಂಗಕ್ಕೆ ಧಾವಿಸಿ ಬಂದಂತಿದೆ. ಬುದ್ಧನೀಯುತ್ತಿದ್ದ 'ಔಪಧರ್ಮ' ಉಪದೇಶಕ್ಕಿಂತ ಆತನ ಅಲೌಕಿಕ ರೂಪ ಆಕರ್ಷಕ ಮಾತುಗಳು ಅವರನ್ನು ಹೆಚ್ಚು

ಮೋಹಗೊಳಿಸಿದಂತಿದೆ. ಇದು ಸ್ತ್ರೀ ಸಹಜ ಸ್ವಭಾವ. ವಸ್ತುಸ್ಥಿತಿ ಹೇಗೆಯೇ ಇರಲಿ, ಅವರ ಪತಿವ್ರತಾಧರ್ಮ ಮಾತ್ರ ಭಂಗವಾಗದೆ ಉಳಿಯಲಿಲ್ಲ.

ಇದನ್ನು ಗಣನೆಗೆ ತೆಗೆದುಕೊಂಡು ವಾದಿರಾಜರು, 'ಆ ಹರಿ ನಾನೆಂಬ ಕುಮತವ ಸುಡು, ಎಂದು ತೊಡಗುವ ಕೀರ್ತನೆಯಲ್ಲಿ ವಿಷ್ಣುವಿನ ದಶಾವತಾರಗಳಲ್ಲಿ ಒಂದೊಂದು ಅವತಾರದಲ್ಲಿನ ಅವನ ಅದ್ಭುತ ಕೃತಿಗಳನ್ನು ಬಣ್ಣಿಸುತ್ತ ಬುದ್ಧಾವತಾರದ ಅವಸರದಲ್ಲಿ—

ಸತಿಯರ ವ್ರತವ ಕೆಡಿಸಿ ಕುಮತವ ತೋರಿ। ಕ್ಷಿತಿಯೊಳು ರಾಯರ ಕೊಲ್ಲುವ ಶ್ರುತಿ ನಿಸಿದ್ಧ ಪಥದಿ ನಡೆದು ಪಾಪಕಂಜದೆ । ಯತಿ-ಶ್ರುತಿ-ತತಿಗಳೆಲ್ಲರ ಹೊಂದಿದ ॥ ಎಂದು ವರ್ಣಿಸಿರುವರು. ಶ್ರುತ್ಯಾದಿಗಳೆಲ್ಲ ದುಷ್ಟದಂಡನ, ಶಿಷ್ಟಪಾಲನ. ಭಕ್ತರಕ್ಷಣ (ಪ್ರಕೃತದಲ್ಲಿ ಶಿವ), ಇತ್ಯಾದಿ ಮಹತ್ಕಾರ್ಯಗಳನ್ನು ವಿಷ್ಣುವಿಗೆ ಒಪ್ಪಿಸಿ ಅವುಗಳನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸಿದ್ದಕ್ಕೆ ಅವನನ್ನು ಅಥದಿಂದ ಇತಿವರೆಗೆ ಕೊಂಡಾಡಿವೆ. ಯುದ್ಧದಲ್ಲಿ ಶತ್ರುವಿನ ಬಲಕುಗ್ಗಿಸಲು ಕೂಟನೀತಿಯ ಅಂಗವಾಗಿ ಸ್ತ್ರೀಯರ ವ್ರತಭಂಗ, ದುಷ್ಟನಿದ್ದ ಸೋದರಮಾವ ಕಂಸನ ವಧೆಯಂಥ ಪಾಪ ಕಾರ್ಯಗಳನ್ನು ಹಿಂದು ಮುಂದು ನೋಡದೆ ಪಾಪಕಂಜದೆ ಮಾಡಬೇಕಾಗುವುದ್ಸ ಮಾಡಿರುವನು. ಆದರೂ ಯತಿ–ಶ್ರುತಿ–ತತಿಗಳು ಅವನನ್ನು ಪರಮಾತ್ಮ ಸರ್ವತಂತ್ರ ಸ್ವತಂತ್ರ, ದೋಷವರ್ಜಿತ ಎಂದು ಕೀರ್ತಿಸಿವೆ. ಅಚಿಂತ್ಯ ಅದ್ಭುತವೆಂದು ನಿಂದ್ಯ ವೆಂದು ಗಣಿಸಲಾದ ಇಂಥ ಕೃತಿಗಳಿಂದ ಒದಗುವ ಪಾಪದಿಂದ ನಿರ್ಲಿಪ್ತವಾಗಿವೆ. ವಿಷಯವನ್ನು ಹೆಚ್ಚು ಬೆಳೆಸದೆ ವಾದಿರಾಜರ ಇನ್ನೊಂದು ಕೀರ್ತನೆಯಲ್ಲಿ ಗೋಪಿಯರು ಶ್ರೀಕೃಷ್ಣನ ಜಾರ-ಚೋರ ಕೃತಿಗಳ ಪಟ್ಟಿಯನ್ನು ಯಶೋದೆಯೆದುರು ಬಿಡಿಸಿ ಹೇಳಿ ದಾಗ ಆಕೆ—ಅನ್ಯಾಯದ ಮಾತುಗಳಾಡದಿರಿ—

ಕ್ಷೀರಸಾಗರ ಶಾಯಿ ಆಗಿದ್ದವನು [ನಿಮ್ಮ] ಪಾಲು
ಸೋರೆ ಕದ್ದುದು ನಿಜವೆ?
ನಾರೇರೆಂದರೆ ಮನಕೆ ತಾರದ ಸ್ವರಮಣ
ಪೋರೇರ ನೆರೆದಾನೇನೆ ?

—ಎಂಬ ಮರುಪ್ರಶ್ನೆಯಿಂದ ಪ್ರಕೃತ ವಿವೇಚನೆಯನ್ನು ಇಲ್ಲಿ ಗೇನೆ ನಿಲ್ಲಿಸುವುದು ಸೂಕ್ತ ಮತ್ತು ಔಚಿತ್ಯಪೂರ್ಣ ಎನಿಸುವುದು. ●

ಕೃತಜ್ಞತೆ— ಡಾ॥ ಬಿ. ಎನ್. ಕೆ. ಶರ್ಮ, ಆಚಾರ್ಯ ಮಧ್ವರ 'ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿನ ಬುದ್ಧಾವತಾರದ ಅರ್ಥ ವಿವರಣೆಗಾಗಿ'

ಭೀಮನು ದುಃಶಾಸನನ ರಕ್ತವನ್ನು ಕುಡಿದನೆ ?

—ಕೌಲಗಿ ಶೇಷಾಚಾರ್, ಮೈಸೂರು

ಪಾಂಡವರು ಎರಡನೆಯ ಸಲವೂ ಜೂಜಾಟದಲ್ಲಿ ಸೋತು ನಿಯಮದಂತೆ ವನವಾಸಕ್ಕೆ ತೆರಳಬೇಕು. ರಾಜವೇಷವನ್ನು ತೊರೆದು ವನವಾಸಕ್ಕೆ ಯೋಗ್ಯವಾದ ವೇಷವನ್ನು ಧರಿಸಿ ಹೊರಡುವಾಗ ದುಃಶಾಸನನು ಪಾಂಡವರನ್ನು ಕುರಿತು "ಗೌಃ ಗೌಃ" ಎಂದು ಮೂದಲಿಸುತ್ತಾನೆ. "ಗೌಃ" ಎಂದರೆ ಹಸು, ಗೂಳಿ ಅಥವಾ ಎತ್ತು. ಇವು ಮತ್ತೊಬ್ಬರ ಅಧೀನದಲ್ಲಿ ಬಾಳುವ ಪ್ರಾಣಿಗಳು. ಹಾಗೆಯೇ ಪಾಂಡವರು ಸ್ವತಂತ್ರರಲ್ಲ, ಕೌರವರ ಅಡಿಯಾಳುಗಳು. ಅಲ್ಲದೆ "ಗೌಃ" ಎಂಬ ಪದದಲ್ಲಿ ದ್ರೌಪದಿಯನ್ನು ಚುಚ್ಚುವ ಅರ್ಥವೂ ಅಡಗಿದೆ. "ಗೌಃ" ಎಂದರೆ ಹಸು; ಹಸುವಿಗೆ ಒಂದೇ ಗೂಳಿಯ ನಿಯಮವಿಲ್ಲ. ಹಾಗೆಯೇ ದ್ರೌಪದಿಗೆ ಐವರು ಗಂಡಂದಿರು; ಅರ್ಥಾತ್ ಸೂಳೆ ಎಂಬ ಅರ್ಥವೂ ಧ್ವನಿತವಾಗುತ್ತದೆ. ಮೂದಲಿಕೆಯ ಮಾತನ್ನು ಕೇಳಿ ಕೆರಳಿದ ಭೀಮನು, ಉತ್ತರ ರೂಪವಾಗಿ ರಾಜಸಭೆಯಲ್ಲಿ ಹೀಗೆ ಪ್ರತಿಜ್ಞೆ ಮಾಡುತ್ತಾನೆ.

"ಮೈವಸ್ಮ ಸುಕೃತಾಂಲ್ಲೋಕಾನ್ ಗಚ್ಛೇತ್ಪಾರ್ಥೋ ವೃಕೋದರಃ ।
ಯದಿ ವಕ್ಷೋ ಹಿ ತೇ ಭಿತ್ತ್ವಾ ನ ಪಿಬೇಚ್ಛೋಣಿತಂ ರಣೇ ॥

ಸಭಾಪರ್ವ ಅಧ್ಯಾಯ 77-21

(ಯುದ್ಧದಲ್ಲಿ ನಿನ್ನ ಎದೆಯನ್ನು ಸೀಳಿ ರಕ್ತವನ್ನು ಕುಡಿಯದಿದ್ದರೆ ಪೃಥೆಯ ಮಗನಾದ ವೃಕೋದರನು–ಭೀಮನು–ಪುಣ್ಯಲೋಕಗಳನ್ನು ಕುರಿತು ಹೋಗಲಾರ.)"

"ಎಲ್ಲ ಬಿಲ್ಲುಗಾರರೂ ಅಸಹಾಯಕರಾಗಿ ನೋಡುತ್ತಿರುವಾಗಲೇ ಧೃತರಾಷ್ಟ್ರನ ಮಕ್ಕಳನ್ನು ಯುದ್ಧದಲ್ಲಿ ಕೊಂದು ಬೇಗನೆ ಶಾಂತಿಯನ್ನು ಪಡೆಯುತ್ತೇನೆ. ನಿನಗೆ ಈ ಸತ್ಯವನ್ನು ಹೇಳುತ್ತಿದ್ದೇನೆ. ಸಭೆಯ ಮಧ್ಯದಲ್ಲಿ ಈ ದೊಡ್ಡ ಮಾತನ್ನು ಮತ್ತೆ ಹೇಳುತ್ತೇನೆ. ನಮ್ಮ (ಪಾಂಡವ ಕೌರವರ) ಯುದ್ಧವಾಗುವಾಗ ಇದನ್ನು ದೇವತೆಗಳು ಸತ್ಯವನ್ನಾಗಿ ಮಾಡುತ್ತಾರೆ. ಈ ಪಾಪಿಯಾದ ಸುಯೋಧನನನ್ನು ಯುದ್ಧದಲ್ಲಿ ಗದೆಯಿಂದ ಕೊಲ್ಲುವೆನು. ನೆಲದ ಮೇಲೆ ಬಿದ್ದ ಇವನ ತಲೆಯನ್ನು ಕಾಲಿನಿಂದ ತುಳಿಯುವೆನು. ಮಾತಿನ ಮಲ್ಲನೂ ಕ್ರೂರಿಯೂ ಮತ್ತು ದುರಾತ್ಮನೂ ಆದ ದುಃಶಾಸನನ ರಕ್ತವನ್ನು ಸಿಂಹದಂತೆ ಕುಡಿಯುವೆನು. (ಪಾತೌಸ್ಮಿ ಮೃಗರಾಡಿವ)" (ಸಭಾಪರ್ವ ಅಧ್ಯಾಯ–77 ಪದ್ಯ 29). ಇದು ಭೀಮಸೇನನು ಮಾಡಿದ ಪ್ರತಿಜ್ಞೆ. ಈ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದ್ದು ರಣರಂಗದಲ್ಲಿ. ಈಗ ಕರ್ಣಪರ್ವಕ್ಕೆ ತೆರಳೋಣ.

ರಣರಂಗದಲ್ಲಿ ಭೀಮದುಃಶಾಸನರ ಕಾಳಗವು ನಡೆಯುತ್ತಿದೆ. ಇದರ ವರ್ಣನೆಯನ್ನು ಸಾರಥಿ ಸಂಜಯನು ಕುರುಡನಾದ ಧೃತರಾಷ್ಟ್ರನಿಗೆ ಹೀಗೆ ಹೇಳುತ್ತಾನೆ:– ಭೀಕರವಾದ ಕಾಳಗವನ್ನು ನಡೆಸುತ್ತಿರುವ ರಾಜಪುತ್ರನಾದ ದುಃಶಾಸನನು ಕಷ್ಟವಾದ ಕೆಲಸವನ್ನು ಮಾಡಿದನು. ಅರುವತ್ತು ಬಾಣಗಳಿಂದ ಭೀಮನ ಸಾರಥಿಯನ್ನು ಗಾಯಗೊಳಿಸಿದನು. ಭೀಮನ ಬಿಲ್ಲನ್ನು ತನ್ನ ಬಾಣದಿಂದ ತುಂಡರಿಸಿದನು. "ಎಲೈ ವೀರನೆ, ನೀನು ನನ್ನನ್ನು ಬೇಗನೆ ಬಹುವಾಗಿ ಗಾಯಗೊಳಿಸಿದ್ದೀಯೆ ; ತಿರುಗಿ ನನ್ನ ಗದೆಯ ಹೊಡೆತವನ್ನು ಸಹಿಸಿಕೊ" ಎಂದು ಗಟ್ಟಿಯಾಗಿ ಹೇಳಿ, ಕೋಪಗೊಂಡ ಭೀಮನು (ದುಃಶಾಸನನನ್ನು ಕೊಲ್ಲಲು) ಭಯಂಕರವಾದ ಗದೆಯನ್ನು ಕೈಗೆತ್ತಿಕೊಂಡನು ಮತ್ತು "ಎಲೈ ದುರಾತ್ಮನೆ, ಈ ಹೊತ್ತು ನಾನು ಯುದ್ಧದ ಮಧ್ಯದಲ್ಲಿ ನಿನ್ನ ರಕ್ತವನ್ನು ಕುಡಿಯುವೆನು" ಎಂದು ಹೇಳಿದನು. ಈ ರೀತಿ ಹೇಳಲ್ಪಟ್ಟ ನಿನ್ನ ಮಗನು ಮೃತ್ಯುರೂಪವಾದ ಶಕ್ತಿ ಎಂಬ ಅಸ್ತ್ರವನ್ನು ವೇಗವಾಗಿ (ಭೀಮನ ಕಡೆಗೆ) ಬಿಟ್ಟನು. ಭೀಮನೂ ರೋಷದಿಂದ ಕೂಡಿದ ಆಕಾರವುಳ್ಳವನಾಗಿ ತುಂಬಾ ಘೋರವಾದ ತನ್ನ ಗದೆಯನ್ನು ತಿರುಗಿಸಿ ಎಸೆದನು. ಅದು ಕೂಡಲೇ ದುಃಶಾಸನನ ಶಕ್ತಿ ಎಂಬ ಅಸ್ತ್ರವನ್ನು ಚೂರು ಚೂರು ಮಾಡಿ ನಿನ್ನ ಮಗನ ತಲೆಯ ಮೇಲೆ ಅಪ್ಪಳಿಸಿತು. ಆಗ ಭೀಮನು ಕೇಳಿದನು:–

ಯೇ ರಾಜಸೂಯಾವಭೃಥೇ ಪವಿತ್ರಾ
ಜಾತಾಃ ಕಚಾ ಯಾಜ್ಞಸೇನ್ಯಾ ದುರಾತ್ಮನ್ ।
ತೇ ಪಾಣಿನಾ ಕತರೇಣಾವ ಕೃಷ್ಟಾ–
ಸ್ತದ್ಬ್ರೂಹಿ ತ್ವಾಂ ಪೃಚ್ಛತಿ ಭೀಮಸೇನಃ ॥

(ಕರ್ಣಪರ್ವ ಅಧ್ಯಾಯ 83-21)

(ಎಲೈ ದುರಾತ್ಮನೆ, ರಾಜಸೂಯ ಯಾಗದ ಅವಭೃಥಸ್ನಾನದಲ್ಲಿ ದ್ರೌಪದಿಯ ಯಾವ ಕೂದಲುಗಳು ಪವಿತ್ರವಾದುವೋ ಅವು ನಿನ್ನ ಯಾವ ಕೈಯಿಂದ ಸೆಳೆಯಲ್ಪಟ್ಟವು ? ಅದನ್ನು ಹೇಳು. ಭೀಮನು ನಿನ್ನನ್ನು ಕೇಳುತ್ತಿದ್ದಾನೆ.)

ಅದಕ್ಕೆ ಉತ್ತರವಾಗಿ ದುಃಶಾಸನನು,

ಅಯಂ ಕರಿಕರಾಕಾರಃ .... ।
ಗೋಸಹಸ್ರಪ್ರದಾತಾ ಚ ಕ್ಷತ್ರಿಯಾಂತಕರಃ ಕರಃ ॥ (83-23)

(ಆನೆಯ ಸೊಂಡಿಲಿನಂತಿರುವ .... ಸಾವಿರ ಗೋಗಳನ್ನು ದಾನ ಮಾಡುವ, ಕ್ಷತ್ರಿಯರನ್ನು ಕೊನೆಗಾಣಿಸುವ ಈ ಕೈ) ಎಂದು ಹೇಳಿದನು.

ಸಂಜಯನು ಮುಂದುವರಿಸಿ ಹೇಳುತ್ತಾನೆ. "ಈ ರೀತಿ ಕೋಪಗೊಂಡ ಮಹಾಬಲಿಷ್ಠನಾದ ಭೀಮನು ದುಃಶಾಸನನ ತೋಳನ್ನು ತನ್ನ ಕೈಯಿಂದಲೇ ಕಿತ್ತು ಹಾಕಿ

ದನು. ವಜ್ರಾಯುಧದಂತಿರುವ ಆ ಕೈಯಿಂದ, ವೀರರ ಮಧ್ಯದಲ್ಲಿ, ದುಃಶಾಸನನನ್ನು ಹೊಡೆದನು. ಅನಂತರ ಭೂಮಿಯ ಮೇಲೆ ಬಿದ್ದಿರುವ ದುಃಶಾಸನನ ಎದೆಯನ್ನು ಬಗೆದು (ಕುಡಿಯಲು) ಸಾಕಷ್ಟು ಬಿಸಿಯಾದ ರಕ್ತವನ್ನು ಕುಡಿದನು.

(ಉತ್ಕೃತ್ಯ ವಕ್ಷಃ ಪತಿತಸ್ಯ ಭೂಮಾವಥಾ ಪಿಬಚ್ಛೋಣಿತಮಸ್ಯ ಕೋಷ್ಣಂ । 83.28)

ರಾಜನೆ, (ಮೇಲೇಳಲು ಯತ್ನಿಸಿದ) ದುಃಶಾಸನನನ್ನು ನೆಲಕ್ಕೆ ತಳ್ಳಿ ಕತ್ತಿಯಿಂದ ನಿನ್ನ ಮಗನ ತಲೆಯನ್ನು ತುಂಡರಿಸಿ, ತನ್ನ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡ ಲಿಚ್ಛಿಸುವವನಾಗಿ ಮತಿವಂತನಾದ ಭೀಮನು ಸಾಕಷ್ಟು ಬಿಸಿಯಾದ ದುಃಶಾಸನನ ರಕ್ತವನ್ನು ಕುಡಿದನು. ಅದರ ರುಚಿ ನೋಡಿ, ಸುತ್ತಲೂ ನೋಡುತ್ತಾ (ಆಸ್ವಾದ್ಯ ಚಾಸ್ವಾದ್ಯ ಚ ವೀಕ್ಷಮಾಣಃ) ಕೋಪಗೊಂಡ ಭೀಮನು, ದುಃಶಾಸನನನ್ನು ಕುರಿತು ಈ ಮಾತನ್ನು ಹೇಳಿದನು:–

ಸ್ತನ್ಯಸ್ಯ ಮಾತುರ್ಮಧು ಸರ್ಪಿಷೋರ್ವಾ
ಮಾಧ್ವೀಕಪಾನಸ್ಯ ಚ ಸತ್ಕೃತಸ್ಯ ।
ದಿವ್ಯಸ್ಯ ವಾ ತೋಯರಸಸ್ಯ ಪಾನಾತ್
ಪಯೋದಧಿಭ್ಯಾಂ ಮಥಿತಾಚ್ಚ ಮುಖ್ಯಾತ್ ॥

ಅನ್ಯಾನಿ ಪಾನಾನಿ ಚ ಯಾನಿ ಲೋಕೇ
ಸುಧಾಮೃತ ಸ್ವಾದುರಸಾನಿ ತೇಭ್ಯಃ ।
ಸರ್ವೇಭ್ಯ ಏವಭ್ಯಧಿಕೋ ರಸೋಽಯಂ ।
ಮಮಾದ್ಯ ಚಾ ಸ್ಯಾಹಿತ ಲೋಹಿತಸ್ಯ ॥ (83-30, 31)

(ಇಂದು ನಾನು ಸ್ವೀಕರಿಸಿದ ರಕ್ತದ ಈ ರಸವು ತಾಯಿಯ ಎದೆ ಹಾಲಿನ, ಜೇನುತುಪ್ಪದ, ತುಪ್ಪದ, ಸೊಗಸಾಗಿ ತಯಾರಿಸಿದ ಮಧೂಕಪುಷ್ಪಮದ್ಯದ (ಅಥವಾ ದ್ರಾಕ್ಷಾರಸದ), ದಿವ್ಯವಾದ ಪಾನಕದ ಪಾನಕ್ಕಿಂತಲೂ, ಹಾಲು ಮೊಸರುಗಳಿಂದ ಮುಖ್ಯವಾಗಿ ಕಡೆದ ಪಾನಕಕ್ಕಿಂತಲೂ, ಲೋಕದಲ್ಲಿ ಹಾಲು ಅಮೃತಗಳಿಗಿಂತಲೂ ರುಚಿಕರವಾದ ಬೇರೆ ಯಾವ ಪಾನಕಗಳುಂಟೋ ಅವಕ್ಕಿಂತಲೂ ಸರ್ವಪಾನಗಳಿ ಗಿಂತಲೂ ಹೆಚ್ಚು ರುಚಿಯುಳ್ಳದ್ದಾಗಿದೆ.

ಅನಂತರ ಉಗ್ರವಾದ ಕೆಲಸಗಳನ್ನು ಮಾಡುವ ಮತ್ತು ಕೋಪದಿಂದ ಕೂಡಿದ ಮನಸ್ಸುಳ್ಳವನಾದ ಭೀಮನು, ದುಃಶಾಸನನು ಸತ್ತಿರುವುದನ್ನು ಗಮನಿಸಿ, ನಕ್ಕು, ಎತ್ತರದ ಧ್ವನಿಯಲ್ಲಿ "ಏನು ತಾನೇ ಮಾಡಲಿ ! ನೀನು ಮೃತ್ಯುವಿನಿಂದ ರಕ್ಷಿತ ನಾಗಿರುವೆ" ಎಂದನು.

ರಕ್ತದ ರುಚಿ ನೋಡಿ, ಅತಿ ಸಂತೋಷಗೊಂಡಿರುವ ಮತ್ತು ಹೀಗೆ ಹೇಳುತ್ತಾ ಅಲ್ಲಿ ಕುಣಿದಾಡುತ್ತಿರುವ ಭೀಮಸೇನನನ್ನು ಆಗ ಯಾರು ನೋಡಿದರೋ ಅವರು ಭಯ

ದಿಂದ ತಲ್ಲಣಗೊಂಡು ಕುಸಿದರು. ಯಾರು ತಲ್ಲಣಗೊಳ್ಳಲಿಲ್ಲವೋ ಅವರ ಕೈಗಳಿಂದ ಶಸ್ತ್ರಗಳು ಕೆಳಗೆ ಬಿದ್ದವು. ಅವರ ಹೆದರಿಕೆಯ ಕಾರಣದಿಂದಾಗಿ ವಿಕಾರವಾದ ಧ್ವನಿಯಿಂದ ಕಿರಿಚಿಕೊಂಡರು. ಕಣ್ಣು ಮುಚ್ಚಿ (ಅರೆಗಣ್ಣಿನಿಂದ) ಸುತ್ತಲೂ ನೋಡಿದರು. ದುಃಶಾಸನನ ರಕ್ತವನ್ನು ಕುಡಿಯುತ್ತಿರುವ ಆ ಭೀಮನನ್ನು ಸುತ್ತಲೂ ನೋಡುತ್ತಿದ್ದ ಎಲ್ಲರೂ ಭಯದಿಂದ ಕೂಡಿದವರಾಗಿ "ಇವನು ಮನುಷ್ಯನಲ್ಲ" ಎಂದು ಹೇಳುತ್ತಾ ಓಡಿಹೋದರು.

(ಸರ್ವೇ ऽ ಪಲಾಯಂತ ಭಯಾಭಿಪನ್ನಾ ।
ನ ವೈ ಮನುಷ್ಯೋ ऽ ಯ ಮಿತಿ ಬ್ರುವಾಣಾಃ ॥ 83–35)

ಉಗ್ರವಾದ ಧ್ವನಿಯುಳ್ಳ ಭೀಮನು ಗರ್ವಿಷ್ಠನಾದ ದುಃಶಾಸನನನ್ನು ಕೊಂದು, ಅಲ್ಲಿಯೇ ಮತ್ತೆ ರಕ್ತದಿಂದ ಬೊಗಸೆಯನ್ನು ತುಂಬಿಸಿ, ಲೋಕವೀರರು ಕೇಳುವ ಹಾಗೆ ಈ ಮಾತನ್ನು ಹೇಳಿದನು:–

ಏಷ ತೇ ರುಧಿರಂ ಕಂಠಾತ್ ಪಿಬಾಮಿ ಪುರುಷಾಧಮ ।
ಬ್ರೂಹೀದಾನೀಂ ತು ಸಂಹೃಷ್ಟಃ ಪುನರ್ಗೌರಿತಿ ಗೌರಿತಿ ॥ (83–43)

(ಎಲೈ ಪುರುಷಾಧಮನೆ, ಈ ನಿನ್ನ ಕಂಠದಿಂದ ಬರುತ್ತಿರುವ ರಕ್ತವನ್ನು ಕುಡಿಯುತ್ತೇನೆ. ಈಗ ಸಂತೋಷಗೊಂಡು ಮತ್ತೆ ಗೌಃ ಗೌಃ ಎಂದು ಹೇಳು.)

ಭೀಮನು ಎಸಗಿದ ಘೋರಕೃತ್ಯವನ್ನು ನೋಡಿ, ಕರ್ಣನು ಬಹಳ ಭಯಗೊಂಡಿದ್ದಾನೆ. ಆಗ ಅವನ ಸಾರಥಿ ಶಲ್ಯನು ಧೈರ್ಯವನ್ನು ತುಂಬುತ್ತಾನೆ. "ಎಲೈ, ರಾಧೇಯ, ಈ ರೀತಿ ವ್ಯಥೆ ಪಡಬೇಡ. ಇದು ನಿನಗೆ ತರವಲ್ಲ. ಭೀಮಸೇನನ ಭಯದಿಂದ ಪೀಡಿತರಾದ ಈ ರಾಜರು ಓಡಿಹೋಗುತ್ತಿದ್ದಾರೆ. ದುರ್ಯೋಧನನು ತನ್ನ ತಮ್ಮ ಸತ್ತ ವ್ಯಸನದಿಂದ ಸೊರಗಿ ಏನೂ ತೋಚದವನಾಗಿದ್ದಾನೆ. ಬಲಿಷ್ಠನಾದ ಭೀಮನಿಂದ ದುಃಶಾಸನನ ರಕ್ತವು ಕುಡಿಯಲ್ಪಡಲಾಗಿ ಕೃಪ ಮೊದಲಾದವರ ಮನಸ್ಸು ಕುಸಿದಿದೆ. ಶೋಕದ ಹೊಡೆತವನ್ನು ತಿಂದಿದೆ.

(ದುಃಶಾಸನಸ್ಯ ರುಧಿರೇ ಪೀಯಮಾನೇ ಮಹಾತ್ಮನಾ ।
ವ್ಯಾಪನ್ನ ಚೇತಸಶ್ಚೈವ ಶೋಕೋಪಹತಚೇತಸಃ ॥ XXX
ಕೃಪಪ್ರಭೃತಯಃ XXX ಕರ್ಣಪರ್ವ 84–11, 12)

ಭೀಮನು ಸಭಾಪರ್ವದಲ್ಲಿ ಮಾಡಿದ ಪ್ರತಿಜ್ಞೆಯನ್ನು ರಣರಂಗದಲ್ಲಿ ಪೂರ್ಣಗೊಳಿಸಿದನು. ಮುಂದೆ ತಾನು ನಿರ್ದೋಷಿಯೆಂದು ಹೇಳಿಕೊಳ್ಳಲು, ಭೀಮನು ಯುಧಿಷ್ಠಿರ, ಅರ್ಜುನ, ನಕುಲ, ಸಹದೇವ ಮತ್ತು ಕೃಷ್ಣ ಇವರೊಡನೆ ಗಾಂಧಾರಿಯ ಬಳಿಗೆ ಬಂದಾಗ ಗಾಂಧಾರಿಯು ಹೇಳುತ್ತಾಳೆ:–

ಅಪಿಬಃ ಶೋಣಿತಂ ಸಂಖ್ಯೇ ದುಃಶಾಸನ ಶರೀರಜಂ ।
ಸದ್ಭಿರ್ವಿಗರ್ಹಿತಂ ಘೋರಮನಾರ್ಯ ಜನ ಸೇವಿತಂ ॥
ಕ್ರೂರಂ ಕರ್ಮ ಕೃಥಾಃ xx । ಸ್ತ್ರೀಪರ್ವ, ಅಧ್ಯಾಯ 15-13, 14

(ಯುದ್ಧದಲ್ಲಿ ದುಃಶಾಸನನ ಶರೀರದಿಂದ ಬಂದ ರಕ್ತವನ್ನು ನೀನು ಕುಡಿದೆ. ಘೋರವಾದ, ಸತ್ಪುರುಷರಿಂದ ನಿಂದಿಸಲ್ಪಡುವಂಥ ಮತ್ತು ಅನಾರ್ಯ ಜನರು ಆಚರಿಸುವಂಥ ಕ್ರೂರವಾದ ಕೆಲಸವನ್ನು ಮಾಡಿದ್ದೀಯೆ).

ಇದಕ್ಕೆ ಉತ್ತರವಾಗಿ ಭೀಮನು ಹೇಳುತ್ತಾನೆ:–

ರುಧಿರಂ ನ ವ್ಯತಿಕ್ರಾಮದ್ದಂತೋಷ್ಠಂ ಮೇ ऽ ಮ್ಬ ಮಾ ಶುಚಃ ।
ವೈವಸ್ವತಸ್ತು ತದ್ವೇದ ಹಸ್ತೌ ಮೇ ರುಧಿರೋಕ್ಷಿತೌ ॥
ಕೇಶಪಕ್ಷಪರಾಮರ್ಶೇ ದ್ರೌಪದ್ಯಾ ದ್ಯೂತಕಾರಿತೇ ।
ಕ್ರೋಧಾದ್ಯದಬ್ರವಂ ಚಾಹಂ ತಚ್ಚ ಮೇ ಹೃದಿ ವರ್ತತೇ ॥
ಕ್ಷತ್ರಧರ್ಮಾಚ್ಚ್ಯುತೋ ರಾಜ್ಞಿ ಭವೇಯಂ ಶಾಶ್ವತೀಃ ಸಮಾಃ ।
ಪ್ರತಿಜ್ಞಾಂ ತಾಮನಿಸ್ತೀರ್ಯ ತತಸ್ತತ್ಕೃತವಾನಹಂ ॥
ನಮಾಮರ್ಹಸಿ ಗಾಂಧಾರಿ ದೋಷೇಣ ಪರಿಶಂಕಿತುಂ ।
ಅನಿಗೃಹ್ಯ ಪುರಾ ಪುತ್ರಾನಸ್ಮಾಸ್ವನಪಕಾರಿಷು ॥

(ಅದೇ 16, 18, 19, 20)

(ತಾಯಿಯೆ, ರಕ್ತವು ನನ್ನ ಹಲ್ಲುತುಟಿಗಳಿಂದೊಳಗೆ ಹೋಗಿಲ್ಲ. ನೀನು ಶೋಕಪಡಬೇಡ. ಇದನ್ನು ವೈವಸ್ವತನು–ಯಮ ? ಅಥವಾ ಕರ್ಣ ?) ತಿಳಿದಿದ್ದಾನೆ. ನನ್ನ ಕೈಗಳು ರಕ್ತದಿಂದ ತೊಯಿದಿವೆ. ಜೂಜಾಟವಾದಾಗ ದುಃಶಾಸನನು ದ್ರೌಪದಿಯ ಕೂದಲನ್ನು ಹಿಡಿದ ಸಂದರ್ಭದಲ್ಲಿ ಕೋಪದಿಂದ ಏನು ಹೇಳಿದೆನೋ ಅದು (ಅದರ ನೆನಪು) ನನ್ನ ಮನಸ್ಸಿನಲ್ಲಿ ಉಳಿದಿದೆ. ಆ ಪ್ರತಿಜ್ಞೆಯನ್ನು ಪೂರೈಸದೆ ಇದ್ದಿದ್ದರೆ. ಅನೇಕ ವರ್ಷಗಳ ಕಾಲ ಕ್ಷಾತ್ರಧರ್ಮದಿಂದ ಚ್ಯುತನಾಗುತ್ತಿದ್ದೆ. ಆದ್ದರಿಂದಲೇ ಅದನ್ನು ನಾನು ಮಾಡಿದೆ. ಹಿಂದೆ ನಿನ್ನ ಮಕ್ಕಳನ್ನು ತಿದ್ದಿ ತಡೆಯದಿದ್ದ ನೀನು ನನ್ನ ಮೇಲೆ ತಪ್ಪನ್ನು ಹೊರಿಸುವುದು ಸರಿಯಲ್ಲ).

ಭೀಮನು ಗಾಂಧಾರಿಯನ್ನು ಭೇಟಿ ಮಾಡುವುದಕ್ಕಿಂತ ಮುಂಚೆ ರಣರಂಗದಲ್ಲಿ ಅವನು ಆಡಿದ ಮಾತುಗಳು ಮತ್ತು ಅವನ ನಡತೆ, ಅವನು ದುಃಶಾಸನನ ರಕ್ತವನ್ನು ಕುಡಿದನೆಂಬುದನ್ನು ಸಮರ್ಥಿಸುತ್ತವೆ. ಆದರೆ ಗಾಂಧಾರಿಯ ಮುಂದೆ ಅವನು ಆಡಿದ ಮಾತಿನಿಂದ ಅವನು ರಕ್ತ ಕುಡಿದಂತೆ ನಟನೆ ಮಾಡಿದನೆ ಹೊರತು ನಿಜವಾಗಿ ರಕ್ತವನ್ನು ಕುಡಿಯಲಿಲ್ಲವೆಂಬ ಅರ್ಥವು ತೋರುತ್ತದೆ. ಈಗ ಸಮಸ್ಯೆ ಏನೆಂದರೆ, ಭೀಮನು ನಿಜವಾಗಿ ರಕ್ತವನ್ನು ಕುಡಿದನೆ ? ಭೀಮನು ರಣರಂಗದಲ್ಲಿ ಎಸಗಿದ ಕೃತ್ಯಕ್ಕೂ

ಗಾಂಧಾರಿಗೆ ಕೊಟ್ಟ ಉತ್ತರಕ್ಕೂ ನಡುವೆ ಬರುವ ವಿರೋಧವನ್ನು ಹೇಗೆ ಪರಿಹರಿಸ ಬೇಕು ? ರಕ್ತದ ರುಚಿಯು ಹೇಗಿತ್ತೆಂಬುದನ್ನು ಭೀಮನ ಬಾಯಿಂದಲೇ ವ್ಯಾಸರು ವಿವರವಾಗಿ ತಿಳಿಸಿದ್ದಾರೆ. ರಕ್ತವು ಹಲ್ಲುತುಟಿಗಳನ್ನು ಮೀರಿ ಒಳಹೋಗದೇ ಇದ್ದಿದ್ದರೆ, (ಭೀಮನ ಮಾತಿನಂತೆ) ಅದರ ರುಚಿಯಾದರೂ ಅವನಿಗೆ ಗೊತ್ತಾದುದು ಹೇಗೆ ? ಗಾಂಧಾರಿಯಂತೂ ಭೀಮನ ಮಾತನ್ನು ಸ್ವಲ್ಪವೂ ನಂಬಲಿಲ್ಲ. ಗಾಂಧಾರಿಯ ಬಳಿ ಭೀಮನು ನಿಜವನ್ನೇ ಹೇಳಿದ್ದರೆ, ರಕ್ತಪಾನ, ಅದರ ರುಚಿ, ರಕ್ತಪಾನ ದೃಶ್ಯದಿಂದ ಜನಗಳ ಮೇಲೆ ಉಂಟಾದ ಪರಿಣಾಮಗಳು ಇವು ಸುಳ್ಳಾಗುತ್ತವೆ. ಗಾಂಧಾರಿಯು ತನಗೆ ಎಲ್ಲಿ ಶಾಪಕೊಡುವಳೋ ಎಂಬ ಭೀತಿಯಿಂದ (ಅಪರಾಧಿ ಮನೋಭಾವದಿಂದಾಗಿ) ಆತ್ಮರಕ್ಷಣೆಗಾಗಿ ಭೀಮನು ಸುಳ್ಳನ್ನು ಹೇಳಿರಬಹುದೇ ?

ಗಾಂಧಾರಿಯು ತನ್ನ ಸತ್ತುಹೋದ ಮಕ್ಕಳ ಕಳೇಬರಗಳನ್ನು ನೋಡಲು ರಣ ರಂಗಕ್ಕೆ ಬರುತ್ತಾಳೆ. ಆಗ ಅವಳ ಜೊತೆ ಕೃಷ್ಣನೂ ಇರುತ್ತಾನೆ. ಸತ್ತುಬಿದ್ದಿರುವ ದುಃಶಾಸನನನ್ನು ನೋಡಿ ಅವಳು ಹೇಳುತ್ತಾಳೆ.

ಏಷ ದುಃಶಾಸನಃ ಶೇತೇ ನಿಕ್ಷಿಪ್ಯ ವಿಪುಲೌ ಭುಜೌ । XXX
ಅತ್ಯರ್ಥಮಕರೋದ್ರೌದ್ರಂ ಭೀಮಸೇನೋಽತ್ಯಮರ್ಷಣಃ ।
ದುಃಶಾಸನಸ್ಯ ಯತ್ಕ್ರುದ್ಧೋಽಪಿಬಚ್ಛೋಣಿತಮಾಹವೇ ॥

(ಸ್ತ್ರೀ ಪರ್ವ 18-27, 28)

(ವಿಪುಲವಾದ ತನ್ನ ಎರಡು ತೋಳುಗಳನ್ನು ತಿರಸ್ಕರಿಸಿ–ಕಳೆದುಕೊಂಡು–ಈ ದುಃಶಾಸನನು, ರಣಭೂಮಿಯಲ್ಲಿ ಬಿದ್ದಿದ್ದಾನೆ. ತೀರ ಕೋಪಿಷ್ಠನಾದ ಭೀಮಸೇನನು ಅತ್ಯಂತ ಭಯಾನಕವಾದುದನ್ನು ಮಾಡಿದನು. ಅದೇನೆಂದರೆ ಯುದ್ಧದಲ್ಲಿ ದುಃಶಾಸನನ ರಕ್ತವನ್ನು ಕುಡಿದನು.

ಗಾಂಧಾರಿಯನ್ನು ಸಾಂತ್ವನಗೊಳಿಸಲು ಆಕೆಯ ಬಳಿಗೆ ಬಂದ ಪಾಂಡವರೊಡನೆ ಕೃಷ್ಣನೂ ಇದ್ದನು. ಅನಂತರ ರಣರಂಗಕ್ಕೆ ಗಾಂಧಾರಿಯು ತೆರಳಿದಾಗಲೂ ಆಕೆಯ ಜೊತೆಯಲ್ಲಿ ಕೃಷ್ಣನು ಇದ್ದನು. ಈ ಎರಡು ಸಂದರ್ಭಗಳಲ್ಲೂ ಗಾಂಧಾರಿಯು ತನ್ನ ಮಗನಾದ ದುಃಶಾಸನನ ರಕ್ತವನ್ನು ಕುಡಿದ ಆಪಾದನೆಯನ್ನು ಭೀಮನ ಮೇಲೆ ಹೊರಿಸುತ್ತಾಳೆ. ಕೃಷ್ಣನು ಈ ಎರಡು ಸಂದರ್ಭಗಳಲ್ಲೂ ಮೌನವನ್ನು ತಾಳುತ್ತಾನೆ. ಇದು ಅರ್ಥಗರ್ಭಿತವಲ್ಲವೆ ? ರಣರಂಗದಲ್ಲಿ ಪಾರ್ಥನ (ಅರ್ಜುನನ) ಸಾರಥಿಯಾಗಿ, ನಡೆದ ಎಲ್ಲ ವಿಷಯಗಳನ್ನೂ ಅವನು ಬಲ್ಲವನಲ್ಲವೆ ? ಭೀಮನು ರಕ್ತವನ್ನು ಕುಡಿದನೋ ಅಥವಾ ಕುಡಿದಂತೆ ನಟನೆಮಾಡಿದನೋ ಎಂಬೀ ವಿಚಾರದಲ್ಲಿ ಸತ್ಯವೇನೆಂಬುದು ಕೃಷ್ಣನಿಗೆ ತಿಳಿದಿತ್ತು. ಭೀಮನು ಗಾಂಧಾರಿಯ ಬಳಿ ಹೇಳಿದ ಮಾತು ನಿಜವಾಗಿದ್ದರೆ ಕೃಷ್ಣನು ಭೀಮನನ್ನು ಏಕೆ ಸಮರ್ಥಿಸಲಿಲ್ಲ ? ಕೃಷ್ಣನು ಭೀಮನ ಮಾತನ್ನು ಸಮರ್ಥಿಸಿದ್ದರೆ ಗಾಂಧಾರಿಯ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಗುತ್ತಿರಲಿಲ್ಲವೆ?

ಕೃಷ್ಣನ ನಿಲುವು ಭೀಮನು ಭೀಕರ ರಕ್ತಪಾನ ಮಾಡಿದನೆಂಬುದನ್ನು ಸಮರ್ಥಿಸುತ್ತದೆ ಯೆಂಬುದರಲ್ಲಿ ಸಂಶಯವಿಲ್ಲ. ಯುದ್ಧದಲ್ಲಿ ಶತ್ರುವನ್ನು ಕೊಲ್ಲುವುದು ಭೀಕರವಲ್ಲ; ಆದರೆ ಶತ್ರುವಿನ ರಕ್ತವನ್ನು ಕುಡಿಯುವುದು ಭೀಕರವಾದುದು.

ಯುದ್ಧದಲ್ಲಿ ಪಾಂಡವರ ಗೆಲುವಿನ ಸುದ್ದಿಯನ್ನು ಕೇಳದ ಧೃತರಾಷ್ಟ್ರನು ಚಿಂತೆಗೆ ಒಳಗಾಗಿ ಸಂಜಯನಿಗೆ ಆ ಹಿಂದೆ ಆಗಿಹೋದ ಅನೇಕ ಘಟನೆಗಳನ್ನು ತಿಳಿಸುತ್ತಾ ಹೇಳುತ್ತಾನೆ:-

ಯದಾ ಶ್ರೌಷಂ ಭೀಮಸೇನೇನ ಪೀತಂ
ರಕ್ತಂ ಭ್ರಾತುರ್ಯುಧಿ ದುಃಶಾಸನಸ್ಯ ।
ನಿವಾರಿತಂ ನಾನ್ಯತಮೇನ ಭೀಮಂ
ತದಾ ನಾಶಂಸೇ ವಿಜಯಾಯ ಸಂಜಯ ॥

(ಆದಿಪರ್ವ, ಅಧ್ಯಾಯ 1-204)

(ಯದ್ಧದಲ್ಲಿ ಭೀಮಸೇನನಿಂದ, ಒಡಹುಟ್ಟಿದ ದುಃಶಾಸನನ ರಕ್ತವು ಕುಡಿಯಲ್ಪಟ್ಟಿತು ಮತ್ತು ಯಾರೂ ಭೀಮನನ್ನು ತಡೆಯಲಿಲ್ಲ ಎಂಬುದನ್ನು ಯಾವಾಗ ಕೇಳಿದೆನೋ, ಆಗಲೇ ನಾನು ವಿಜಯಕ್ಕೆ ಆಸೆಪಡಲಿಲ್ಲ.)

ಆದ್ದರಿಂದ ವ್ಯಾಸ, ಸಂಜಯ, ಧೃತರಾಷ್ಟ್ರ, ಗಾಂಧಾರಿ ಮತ್ತು ಶಲ್ಯ ಇವರ ಮಾತಿನಿಂದ ಭೀಮನು ದುಃಶಾಸನನ ರಕ್ತವನ್ನು ಕುಡಿದನೆಂದೇ ಸಿದ್ಧವಾಗುತ್ತದೆ. ಅಲ್ಲದೆ ಭೀಮನು ಗಾಂಧಾರಿಯ ಬಳಿ ಸುಳ್ಳು ಹೇಳಿದನೆಂದೇ ಆಗುತ್ತದೆ.

(ಆಧಾರ ಗ್ರಂಥ-ಗೋರಖ್‌ಪುರ್ ಗೀತಾಪ್ರೆಸ್ಸಿನಿಂದ ಅಚ್ಚಾಗಿರುವ ಮಹಾಭಾರತದ ಆವೃತ್ತಿ)

—o—

ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನಾನಾ ಬಗೆಯ ನೆರವನ್ನು ನೀಡಿದ ನನ್ನ ಮಾನ್ಯ ಮಿತ್ರ ಪ್ರೊ॥ ಗರ್ಗೇಶ್ವರಿ ವೆಂಕಟಸುಬ್ಬಯ್ಯ, ಬೆಂಗಳೂರು, (ನಿವೃತ್ತ ಎಲ್. ಐ. ಸಿ. ಅಸಿಸ್ಟೆಂಟ್ ಡಿವಿಜನಲ್ ಮ್ಯಾನೇಜರ್) ಅವರಿಗೆ ನನ್ನ ಹಾರ್ದಿಕ ಕೃತಜ್ಞತೆ.

ಚಂಪೂ ಪ್ರಬಂಧಂ - ಕೆಲವು ಟಿಪ್ಪಣಿಗಳು

—ಡಾ|| ಸಿ. ನಾಗಭೂಷಣ

ಚಂಪೂ ಎಂಬ ಕಾವ್ಯದ ಪ್ರಕಾರ ಯಾವುದೇ ಒಂದು ಪ್ರಾಂತೀಯ ಭಾಷೆಯ ಸಾಹಿತ್ಯಕ್ಕೆ ಸೀಮಿತವಾದುದಲ್ಲ. ಸಂಸ್ಕೃತ, ಕನ್ನಡ, ತೆಲುಗು ಮುಂತಾದ ಬೇರೆ ಬೇರೆ ಭಾಷಾ ಪ್ರಕಾರಗಳಲ್ಲಿಯೂ ಕಾಣಬಹುದು. 'ಚಂಪೂ' ಪದದ ಲಕ್ಷಣ, ಸ್ವರೂಪದ ಬಗೆಗೆ ಮೊದಲು ಸಂಸ್ಕೃತ ಭಾಷೆಯ ಲಾಕ್ಷಣಿಕರ ಕಾವ್ಯಗಳಲ್ಲಿ, ಅನಂತರ ಕನ್ನಡ ಶಾಸ್ತ್ರಗ್ರಂಥಗಳಲ್ಲಿ ಉಲ್ಲೇಖ ಸಿಗುತ್ತದೆ. ಕ್ರಿ. ಶ. 7ನೇ ಶತಮಾನದಲ್ಲಿ ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಮೊವಲಿಗೆ ಚಂಪೂವನ್ನು ಕುರಿತು 'ಗದ್ಯ ಪದ್ಯ ಮಯೀ ಕಾಚಿಚ್ಚಮ್ಪೂರಿತ್ಯಭಿದೀಯತೇ' ಎಂದು ಹೇಳಿದ್ದಾನೆ. ಅನಂತರ ಬಂದ ಸಂಸ್ಕೃತ ಲಾಕ್ಷಣಿಕರು ಚಂಪೂವಿನ ಲಕ್ಷಣವನ್ನು ಕುರಿತು ಹೇಳುವಾಗ ದಂಡಿಯ ಹೇಳಿಕೆಯನ್ನೇ ಅಲ್ಪಸ್ವಲ್ಪ ವ್ಯತ್ಯಾಸಮಾಡಿ ನಿರೂಪಿಸಿದ್ದಾರೆ.

ಗದ್ಯ ಮತ್ತು ಪದ್ಯಗಳ ಸಮ್ಮಿಶ್ರಣದಿಂದ ಕೂಡಿದ ಕಾವ್ಯಗಳನ್ನು ಇಮ್ಮಡಿ ನಾಗವರ್ಮನಿಗಿಂತ ಪೂರ್ವದಲ್ಲಿ 'ಚಂಪೂ' ಹೆಸರಿನಿಂದ ಲಾಕ್ಷಣಿಕರಾಗಲೀ, ಕನ್ನಡದಲ್ಲಿ ಕೃತಿರಚನೆ ಮಾಡಿದ ಕವಿಗಳಾರೂ ಕರೆದಿಲ್ಲ.

ದಂಡಿಯ ಕಾವ್ಯಾದರ್ಶವನ್ನು ಅನುಸರಿಸಿ ಕವಿರಾಜಮಾರ್ಗಕಾರನು ಕೃತಿಯನ್ನು ರಚಿಸಿದ್ದರೂ, ಗದ್ಯ ಮತ್ತು ಪದ್ಯ ಮಿಶ್ರವಾಗಿ ವಿಶೇಷ ಅಂಶಗಳಿಂದ ಕೂಡಿದ ಕಾವ್ಯವನ್ನು ದಂಡಿಯಂತೆ 'ಚಂಪೂ' ಎಂದು ಕರೆಯದೆ 'ಗದ್ಯಕಥೆ' ಎಂದು ಕರೆದಿರುವುದು ಕೆಳಗಣ ಪದ್ಯದಿಂದ ವಿದಿತವಾಗುತ್ತದೆ.

ಮಿಗೆ ಕನ್ನಡಗಬ್ಬಂಗಳೊ
ಳಗಣಿತ ಗುಣ ಗದ್ಯಪದ್ಯ ಸಮ್ಮಿಶ್ರಿತಮಂ
ನಿಗದಿಸುವರ್ ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ (1-33)

ಈ ಪದ್ಯದ ಬಗೆಗೆ ಎಂ.ವಿ.ಸೀ. ಅವರು ಟಿಪ್ಪಣಿ ಬರೆಯುತ್ತಾ, ಈಗ ನಾವು ಯಾವುದನ್ನು ಚಂಪೂಕಾವ್ಯ ಎಂದು ನಿರ್ದೇಶಿಸುತ್ತೇವೆಯೋ ಅದೇ ಈ ಗದ್ಯಕಥೆಯಾಗಿರಬಹುದು. ಸಂಸ್ಕೃತದಲ್ಲಿ ಕೂಡಾ ಚಂಪೂ ಎಂಬ ಮಾತು ದಂಡಿಗಿಂತ ಈಚೆಗೆ ಬಳಕೆಗೆ ಬಂದಿರಬೇಕು ಎಂದಿದ್ದಾರೆ. [1] ಎಲ್. ಬಸವರಾಜು ಅವರು ಕವಿರಾಜಮಾರ್ಗ

1. ಎಂ.ವಿ.ಸೀ. ಕವಿರಾಜಮಾರ್ಗ. ಬೆಂಗಳೂರು 1968. ಟಿಪ್ಪಣಿಗಳು ಪು. 128

ಕಾರನು ಕಾವ್ಯಶರೀರವನ್ನು ಗದ್ಯ-ಪದ್ಯವೆಂದು ಎರಡು ತೆರನಾಗಿ ವಿಭಾಗಿಸಿ ಗದ್ಯವನ್ನು ತಿಳಿಸಿ ಆ ಪ್ರಕಾರಕ್ಕೆ ಲಕ್ಷ್ಯವಾಗಬಲ್ಲ ಸಂಸ್ಕೃತ ಕಾವ್ಯಗಳೆಂದರೆ ಹರ್ಷಚರಿತೆ, ಕಾದಂಬರಿ ಮುಂತಾದವು ಪ್ರಸಿದ್ಧವೆಂದು ಹೇಳಿ ಗದ್ಯಪದ್ಯ ಮಿಶ್ರ ಪ್ರಕಾರ (ಚಂಪೂ) ವನ್ನು ಕನ್ನಡಿಗರು ಗದ್ಯವೆಂದೇ ವ್ಯವಹರಿಸುತ್ತಿದ್ದರೆಂಬ ಅಪೂರ್ವಾಂಶವೊಂದನ್ನು ಬಯಲಿಗೆಳೆದು ಅದರ ಪ್ರಾಚೀನತೆಯನ್ನು ಸೂಚಿಸಿ ಅದರ ಕನ್ನಡ ಮೂಲವನ್ನು ಧ್ವನಿಸಿರುವನು.... ಕವಿರಾಜಮಾರ್ಗದ ಕಾಲಕ್ಕೆ ಹಿಂದೆ ಕನ್ನಡದಲ್ಲಿ ಗದ್ಯಗ್ರಂಥಗಳಿರಲಿಲ್ಲ ಮತ್ತು ಕನ್ನಡಿಗರು ಚಂಪೂವನ್ನೇ ಗದ್ಯವೆಂದು ವ್ಯವಹರಿಸುತ್ತಿದ್ದರು.[2] ಚಂಪೂವಿಗಿಂತ ಗದ್ಯಕಥೆ ಎಂಬ ಹೆಸರನ್ನು ಕನ್ನಡದಲ್ಲಿ ಕವಿರಾಜಮಾರ್ಗಕ್ಕಿಂತ ಪೂರ್ವದ ಗದ್ಯ ಮತ್ತು ಪದ್ಯ ಸಮ್ಮಿಶ್ರಿತ ಸಾಹಿತ್ಯವನ್ನು ಉಲ್ಲೇಖಿಸಿ ಕರೆಯುತ್ತಿದ್ದರು. ಎಂದು ಹೇಳಬಹುದಾಗಿದೆ. ಮುಂದೆ ಪಂಪಾದಿಗಳು ಗದ್ಯಪದ್ಯ ಮಿಶ್ರಿತ ರೂಪದಲ್ಲಿ ಕಾವ್ಯ ರಚಿಸುವಾಗ 'ಪ್ರಬಂಧಂ' ಎಂದು ಬಳಸಿದ್ದಾರೆ.

.... ಪಂಪನೆ ಪೇೞ್ಗೆಮೆಂದು ಪಂಡಿತರೆ ತಗುಳ್ದು ಬಿಚ್ಚಟಿಸೆ
ಪೇೞಲೊಡರ್ಚಿದೆನೀ ಪ್ರಬಂಧಮಂ [3]

ಮುನ್ನಿನ ಕಬ್ಬಮಸೆಲ್ಲಮಿಕ್ಕಿ ಮೆಟ್ಟಿದುವು ಸಮಸ್ತಭಾರತಮುಮಾದಿ ಪುರಾಣ ಮಹಾ ಪ್ರಬಂಧಮುಂ [4]

'........ ಕುಂದದೆ ಸೆಲಸಿರ್ಕೆಯೀ ಮಹೀತಳಕ್ಕೆ ಮದೀಯ ಕೃತಿ ಪ್ರಬಂಧದಿಂ, [5] ಹರಿಹರ ಕವಿಯು ತನ್ನ ಕಾವ್ಯವನ್ನಂತೂ 'ಗಿರಿಜಾಕಲ್ಯಾಣ ಮಹಾಪ್ರಬಂಧ' ಎಂದೇ ಹೆಸರಿಸಿದ್ದಾನೆ. ಪ್ರತಿ ಆಶ್ವಾಸವ ಕೊನೆಯಲ್ಲಿ 'ಶ್ರೀ ಗಿರಿಜಾಕಲ್ಯಾಣ ಮಹಾ ಪ್ರಬಂಧದೊಳ್' ಎಂಬ ವಾಕ್ಯವೇ ಆವೃತಗೊಂಡಿದೆ.

'ನಿದರ್ಶನಕ್ಕೆ ಸತ್ಕವಿಗಳಾಲಿಸೆ ಪೇೞ್ವೆನೀ ಪ್ರಬಂಧಮಂ'
'ಸೊಗಯಿಪಂದಮನೀ ಸುಕರ ಪ್ರಬಂಧಮಂ' [6]

---

2. ಎಲ್. ಬಸವರಾಜು. ಶೃಂಗಾರ ನಿದರ್ಶನ. ಮೈಸೂರು 1971. ಪೀಠಿಕೆ ಪು. 4–5
3. ಪಂಪಭಾರತ (ಸಂ॥ ಎನ್. ಅನಂತರಂಗಾಚಾರ್) ಕನ್ನಡ ಸಾಹಿತ್ಯ ಪರಿಷತ್ ಆಶ್ವಾಸ ೧, ಪ.ಸಂ. ೧೧
4. ಅದೇ ಆಶ್ವಾಸ ೧೪. ಪ.ಸಂ. ೫೯
5. ಅದೇ ಆಶ್ವಾಸ ೧೪. ಪ.ಸಂ. ೬೪
6. ಹರಿಹರ ಕವಿಯ ಗಿರಿಜಾಕಲ್ಯಾಣ ಮಹಾ ಪ್ರಬಂಧಂ (ಗದ್ಯಾನುವಾದ. ಎಂ.ಜಿ. ನಂಜುಂಡಾರಾಧ್ಯ)
ಕನ್ನಡಸಾಹಿತ್ಯ ಪರಿಷತ್. 1976. ಆಶ್ವಾಸ 1. ಪ.ಸಂ. 11

ದೇವಕವಿಯ ಕುಸುನೂವಳಿ ಕೃತಿಯ ಆಶ್ವಾಸಾಂತ್ಯದಲ್ಲಿ ಕುಸುಮಾವಳಿ ಮಹಾ ಪ್ರಬಂಧ ಎಂದೇ ನಿರೂಪಿತವಾಗಿದೆ. ರುದ್ರಭಟ್ಟನ ಜಗನ್ನಾಥ ವಿಜಯದ ಕೃತಿಯ ಆಶ್ವಾಸಾಂತ್ಯದ ಗದ್ಯಭಾಗದಲ್ಲಿ 'ಜಗನ್ನಾಥವಿಜಯ ಮಹಾಪ್ರಬಂಧಂ' ಎಂದೇ ಹೆಸರಿಸಿದ್ದಾನೆ. ನೇಮಿಚಂದ್ರ ಕವಿಯು ತನ್ನ ಕೃತಿಗೆ 'ಲೀಲಾವತೀ ಪ್ರಬಂಧಂ' ಎಂದೇ ಹೆಸರಿಸಿದ್ದಾನೆ.

ಈ ಹಿನ್ನೆಲೆಯಲ್ಲಿ ಪ್ರಾಚೀನ ಕನ್ನಡಸಾಹಿತ್ಯ ರೂಪವನ್ನು ಅಂದರೆ ಹತ್ತನೇ ಶತಮಾನದ ಕನ್ನಡ ಸಾಹಿತ್ಯ ಪ್ರಕಾರವನ್ನು 'ಚಂಪೂ' ಎಂದು ಕರೆಯದೆ 'ಪ್ರಬಂಧ' ಎಂದು ಕರೆಯಬೇಕೆಂಬ ಪ್ರಮೇಯವನ್ನು ಎಂ. ಎಂ. ಕಲಬುರ್ಗಿಯವರು ಲೇಖನ ವೊಂದರಲ್ಲಿ ಸೂಚಿಸಿದ್ದಾರೆ.[7] ಅದರ ಸಾರ ಇಂತಿದೆ:- ಕನ್ನಡದಲ್ಲಿ ಆರಂಭದಲ್ಲಿ ಕಾವ್ಯಗಳನ್ನು ರಚಿಸಿದ ಕವಿಗಳು ತಮ್ಮ ಕೃತಿಗಳನ್ನು ಎಲ್ಲಿಯೂ ಚಂಪೂ ಎಂದು ಕರೆದಿಲ್ಲ. ಹೀಗಿರುವಾಗ ಚಂಪೂ ಎಂದು ಕರೆಯಲು ನಮಗೆ ಏನು ಅಧಿಕಾರ ? ಚಂಪೂ ವನ್ನು ಕುರಿತು ಕನ್ನಡದಲ್ಲಿ 'ಮೊದಲು ಬೆರಸಬರೆ ಗದ್ಯಪದ್ಯಮುವೆರಡುಂ ಕೃತಿ ಚಂಪು ವೆಂಬ ಪೆಸರಂ ಪಡೆಗುಂ' ಎಂದು ನಾಗವರ್ಮನು ಹೇಳಿದ್ದು ದಂಡಿಯ ಅನುವಾದವೇ ಹೊರತು ಪಂಪಾದಿಗಳ ಸಾಹಿತ್ಯವನ್ನು ಕುರಿತು ಆಡಿದ ಮಾತಲ್ಲ. ಹೀಗಿರುವಾಗ ಆಧುನಿಕರಾದ ನಾವು ಪಂಪಾದಿಗಳ ಸಾಹಿತ್ಯದಲ್ಲಿ ಗದ್ಯ ಮತ್ತು ಪದ್ಯಗಳ ಮಿಶ್ರಣ ಇರುವುದನ್ನು ಗಮನಿಸಿ ಅವರ ಬರವಣಿಗೆಯನ್ನು ಚಂಪೂ ಎಂದು ಪ್ರಚಾರ ಮಾಡಿ ದ್ದೇವೆ. ಆದರೆ ಇದರ ನಿಜವಾದ ಹೆಸರು 'ಪ್ರಬಂಧ' ಇರಬಹುದಾಗಿದೆ. ಏಕೆಂದರೆ 'ಪೇಳಲೊಡರ್ಚಿದೆನೀ ಪ್ರಬಂಧಮಂ' ಎಂದು ಮುಂತಾಗಿ ಹೇಳುತ್ತ ಸ್ವತಃ ಪಂಪ ತನ್ನ ಕೃತಿಯನ್ನು 'ಪ್ರಬಂಧ' ಎಂದು ಕರೆದಿದ್ದಾನೆಯೇ ಹೊರತು 'ಚಂಪೂ' ಎಂದು ಮುಂತಾಗಿ ಅಲ್ಲ. ತೆಲುಗು ನಾಡಿನಲ್ಲಿ ಈ ಬಗೆಯ ಸಾಹಿತ್ಯವನ್ನು ಚಂಪೂವೆನ್ನದೆ ಪ್ರಬಂಧ ಎಂದೇ ಕರೆಯುತ್ತಾರೆ. ನಮ್ಮಲ್ಲಿ ಚಂಪೂಯುಗವೆನ್ನುವಂತೆ ಅವರು ಪ್ರಬಂಧ ಯುಗವೆಂದು ನಾಮಕರಣ ಮಾಡಿದ್ದಾರೆ. ಪಂಪನ ಪೂರ್ವಜರು ತೆಲುಗು ನಾಡಿನವರು. ಅವರು ತಮ್ಮ ಕಾವ್ಯರಚನಾ ದಿನಗಳನ್ನು ಕಳೆದುದು ತೆಲುಗುನಾಡಿನಲ್ಲಿ. ಆದುದರಿಂದ ಕನ್ನಡದ ಈ ಸಾಹಿತ್ಯಪ್ರಕಾರವನ್ನು ಪ್ರಾಚೀನರು 'ಪ್ರಬಂಧ' ಎಂದೇ ಕರೆಯುತ್ತಿದ್ದರು ಎಂದೆನಿಸುತ್ತದೆ.

ಈ ಪ್ರಮೇಯದ ಮಥಿತಾರ್ಥ ಇಷ್ಟೆ- ಗದ್ಯ ಮತ್ತು ಪದ್ಯ ಸಮ್ಮಿಶ್ರಿತವಾದ ಕಾವ್ಯವನ್ನು ಸಂಸ್ಕೃತದಲ್ಲಿ ಮಾತ್ರ ಚಂಪು ಎಂದು ಕರೆದಿದ್ದು ಕನ್ನಡದಲ್ಲಿ ಪ್ರಬಂಧ ಎಂದು ಕೆಲವು ಕವಿಗಳು ಕರೆದಿರುವುದು. 'ಪ್ರ' ಎಂಬ ಪೂರ್ವ ಪ್ರತ್ಯಯವು ಬಂಧ

---

7. ಸಂಶೋಧನಾ ವ್ಯಾಸಂಗ (ಸಂ॥ ಸಂಗಮೇಶ ಸವದತ್ತಿ ಮಠ) ಸಂ. ಮೇ-ಜೂನ್ 1990, ಪು. 2

ಎಂಬ ಪದಕ್ಕೆ ಸೇರಿದೆ. ಅಂದರೆ ಈ ಪದವು ಒಳ್ಳೆಯ ಜೋಡಣೆಯನ್ನು, ಸುವ್ಯವಸ್ಥಿತವಾದ ರಚನೆಯನ್ನು ಸೂಚಿಸುತ್ತದೆ. 'ಪ್ರಬಂಧ' ಎಂಬ ಪದವು ಆಧುನಿಕ ಕಾಲದಲ್ಲಿ Essay ಎಂಬ ಪದಕ್ಕೆ ಸಂವಾದಿಯಾಗಿ ಬಳಸಲ್ಪಟ್ಟರೂ ಪೂರ್ವದಲ್ಲಿ ಮಹಾಕಾವ್ಯ ಎಂಬುದನ್ನು ಪ್ರಬಂಧದ ಹೆಸರಿನಲ್ಲಿ ಪ್ರಾಚೀನ ಕವಿಗಳು ಕರೆದಿದ್ದಾರೆ. ಪ್ರಾಚೀನ ಕಾವ್ಯಗಳು ಉಲ್ಲೇಖಿಸುವ 'ಪ್ರಬಂಧ' ಪದಕ್ಕೆ ಆ ಕಾವ್ಯಗಳ ಲಕ್ಷಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವ ಜನಪ್ರಿಯ ಅರ್ಥ ಎಂದರೆ ಅಷ್ಟಾದಶವರ್ಣನೆಗಳಿಂದ ಕೂಡಿದ, ಹಲವಾರು ಅಲಂಕಾರಗಳನ್ನೊಳಗೊಂಡ, ಸಂಸ್ಕೃತ ಛಂದೋರೂಪಗಳನ್ನು ವಿರಳವಾಗಿಯೂ ಒಳಗೊಂಡ ಮಾರ್ಗಶೈಲಿಯನ್ನು– ಜೊತೆಗೆ ಅಪರೂಪಕ್ಕೊಮ್ಮೆ ದೇಸಿಯ ಶೈಲಿಯನ್ನು ಒಳಗೊಂಡ ಪದ್ಯಕಾವ್ಯ. ಇದೇ ಅರ್ಥ ಸಂಸ್ಕೃತ ಕಾವ್ಯಗಳನ್ನು ಕುರಿತು ಹೇಳುವ ಚಂಪೂಪದಕ್ಕೂ ಅನ್ವಯಿಸುತ್ತದೆ.

ಪ್ರಾಚೀನ ಸಾಹಿತ್ಯ ಪ್ರಕಾರವನ್ನು ಪ್ರಬಂಧ ಎಂದು ಕರೆಯಬೇಕೆಂದು ಹೇಳಿರುವ ಎಂ. ಎಂ. ಕಲಬುರ್ಗಿಯವರ ಪ್ರಮೇಯವನ್ನು ಮೇಲ್ನೋಟಕ್ಕೆ ಒಪ್ಪಬಹುದಾದರೂ ಕೆಲವೊಂದು ಆಧಾರಗಳು 'ಚಂಪೂ' ಮತ್ತು 'ಪ್ರಬಂಧ' ಪದಗಳೆರಡೂ ಅಭಿನ್ನ ಎಂಬ ಹೇಳಿಕೆಯನ್ನು ಕೊಡುತ್ತವೆ.

'ಪ್ರಬಂಧ' ಪದದ ಉಲ್ಲೇಖ ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ಮಾತ್ರವಲ್ಲದೆ ಇದೇ ಸುಮಾರಿಗೆ ಗದ್ಯ ಮತ್ತು ಪದ್ಯ ಸಮ್ಮಿಶ್ರಿತ ಕಾವ್ಯ ಪ್ರಕಾರದಲ್ಲಿ ಕಾವ್ಯಗಳನ್ನು ರಚಿಸಿದ ಸಂಸ್ಕೃತ ಕವಿಗಳೂ ಸಹ ಬರೀ 'ಚಂಪೂ' ಎಂದು ಹೆಸರಿಸದೆ 'ಚಂಪೂ ಪ್ರಬಂಧಂ' ಎಂದು ಹೆಸರಿಸಿರುವುದು ವಿಚಾರಣೀಯವಾಗಿದೆ.

ಭೋಜರಾಜನು (ಕ್ರಿ. ಶ. 1005-54) ಚಂಪೂ ರಾಮಾಯಣದಲ್ಲಿ

ಗದ್ಯಾನುಬಂಧ ರಸಮಿಶ್ರಿತ ಪದ್ಯಸೂಕ್ತಿ
ಹೃದ್ಯಾ ಹಿ ವಾದ್ಯಕಲಯಾ ಕಲಿತೇವ ಗೀತಿಃ
ತಸ್ಮಾದ್ದಧಾತು ಕವಿಮಾರ್ಗಜುಷಾಂ ಸುಖಾಯ
ಚಂಪೂ ಪ್ರಬಂಧ ರಚನಾಂ ರಸನಾ ಮದೀಯಾ [8]

ಎಂದು ಹೇಳಿಕೊಂಡಿದ್ದಾನೆ.

ಅಂದರೆ ಗದ್ಯಬಂಧದ ರಸದೊಡನೆ ಮಿಶ್ರಿತವಾದ ಪದ್ಯಸೂಕ್ತಿಯು ವಾದ್ಯದೊಡನೆ ಬೆರೆತ ಗಾನದಂತೆಯೇ ಹೃದ್ಯವಾಗುತ್ತದೆ. ಆದುದರಿಂದ ನನ್ನ ನಾಲಗೆಯು ಚಂಪೂ ಪ್ರಬಂಧದ ರಚನೆಯಿಂದ ಕವಿಮಾರ್ಗದ ಪಯಣಿಗರಿಗೆ ಸುಖವನ್ನುಂಟುಮಾಡಲಿ.

---

8. ಉದ್ಧೃತ – ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ (ಸಂ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ) ಸಂ. 3
ಮೈಸೂರು ವಿಶ್ವ ವಿದ್ಯಾಲಯ 1976 ಪು. 307

ವೆಂಕಟರಾಘವನ **ಹಯವದನ ವಿಜಯ** ಚಂಪೂವಿನಲ್ಲಿಯೂ ಪ್ರಬಂಧ ಪದದ ಉಲ್ಲೇಖ ಇದೆ.

ಸದ್‌ಗದ್ಯ ಪದ್ಯಮಯ ಏವ ಹೃದಿ ಪ್ರಬಂಧೋ
ರತ್ನಾಂಚಿತಃ ಕನಕಹಾರ ಇವಾತಿ ವೇಲವ್
ಮೋದಂ ಕರೋತಿ ವಿದುಷಾಂ ತದಹಂ ಪ್ರಬಂಧ
ಮೇವಂ ವಿಧಂ ವಿರಚಯನ್ಮುದಂ ಕರೋಮಿ [9]

ಅಣ್ಣಮಾರ್ಯನ ತತ್ತ್ವಗುಣಾದರ್ಶಚಂಪುವಿನಲ್ಲಿಯ

'........ ಬಂಧ ಛ್ಛಾಯಾನುಬದ್ಧಂ ರಚಯತಿ ಕವಿರಾಡೇಷ ಚಂಪೂ ಪ್ರಬಂಧಂ' ಎಂಬ ವಾಕ್ಯದಲ್ಲಿಯೂ ಪ್ರಬಂಧದ ಉಲ್ಲೇಖ ಇರುವುದನ್ನು ಗಮನಿಸಬಹುದು.

ಅಪ್ಪಯ್ಯದೀಕ್ಷಿತನ 'ಗೌರೀಮಯೂರ ಮಹಾತ್ಮ್ಯ'ದಲ್ಲಿ
ಗುಣಗಣಮಣಿ ಮಾಲಾಲಂಕೃತಂ ಗದ್ಯ ಪದ್ಯೈಃ
ಧರಿತ ಹೃದಿ ಬುಧೇನ್ದ್ರಾಃ ಸಾಧು ಚಂಪೂ ಪ್ರಬನ್ಧಮ್ ಎಂದು [10] ಪ್ರಬಂಧ ಪದವನ್ನು ಉಲ್ಲೇಖಿಸಿದ್ದಾನೆ. ಸಂಸ್ಕೃತದಲ್ಲಿ ಹದಿನಾಲ್ಕನೆಯ ಶತಮಾನದಲ್ಲಿ ಕಾವ್ಯ ರಚಿಸಿದ ಸಮರ ಪುಂಗವ ದೀಕ್ಷಿತನು ತನ್ನ ಕೃತಿಯನ್ನು 'ತೀರ್ಥಯಾತ್ರಾ ಪ್ರಬಂಧ ಚಂಪೂ' ಎಂದೇ ಕರೆದಿದ್ದಾನೆ. [11]

'ಪದ್ಯೇಷು ಬಾಹುಲ್ಯಮಿಹ ಪ್ರಬಂಧ ಮಿತಾನಿ ಗದ್ಯಾನಿತು'

'ಚಂಪೂ ಪ್ರಬಂಧಂ' ಪದವನ್ನು ಸಂಸ್ಕೃತದಲ್ಲಿ ಕಾವ್ಯರಚನೆ ಮಾಡಿದ ಕವಿಗಳೇ ಬಳಸಿದ್ದಾರೆ ಎಂಬುದನ್ನು ವಿಶೇಷವಾಗಿ ನಾವು ಗಮನಿಸಬೇಕು.

ವಿಶ್ವೇಶ್ವರ ಕವಿಯು ತನ್ನ 'ಕೃತಿ ಚಮತ್ಕಾರ ಚಂದ್ರಿಕೆ'ಯಲ್ಲಿ ಚಂಪೂವಿನ ಲಕ್ಷಣದ ಬಗೆಗೆ 'ಚಮ್ಪೂಪ್ರಬಂಧಸ್ತತ್ರಸ್ಯಾತ್ ಕಾನ್ತಾಷ್ಟಾದಶ ವರ್ಣನಃ | ಸಪ್ರಬಂಧ ಇತಿ ಶ್ಲಾಘ್ಯೋ ಭೋಜರಾಮಾಯಣಾದಿಕಃ' [12] ಎಂದು ಹೇಳಿರುವಲ್ಲಿ 'ಚಂಪೂ ಪ್ರಬಂಧ'ದ ಉಲ್ಲೇಖ ಇರುವುದನ್ನು ಗಮನಿಸಬಹುದಾಗಿದೆ.

ಚಂಪೂವಿನ ಸ್ವರೂಪ ಲಕ್ಷಣವನ್ನು ಕುರಿತು ಸಂಸ್ಕೃತ ಕವಿಗಳ ಮತ್ತು ಲಾಕ್ಷಣಿಕರ ಮೇಲಿನ ಹೇಳಿಕೆಗಳಲ್ಲಿ, ಎಲ್ಲಿಯೂ ಕೇವಲ ಚಂಪೂವಿನ ಉಲ್ಲೇಖ ಇಲ್ಲ. ಅಥವಾ ಕೇವಲ ಪ್ರಬಂಧದ ಉಲ್ಲೇಖ ಇಲ್ಲ. ಮತ್ತು ಇವೆರಡು ಬೇರೆ ಬೇರೆ ಎಂದು ತಿಳಿದು

---

9. ಅದೇ ಪು. 308
10. ಅದೇ ಪು. 309
11. ಅದೇ ಪು. 304
12. ಅದೇ ಪು. 301

ಬರುವುದಿಲ್ಲ. ಚಂಪೂ ಪದದ ಜೊತೆಗೆ ಪ್ರಬಂಧ ಪದವನ್ನು ಸಮೀಕರಿಸಿ 'ಚಂಪೂ ಪ್ರಬಂಧಮ್' ಎಂದು ನಿರೂಪಿಸಲ್ಪಟ್ಟಿರುವುದನ್ನು ಕಾಣಬಹುದಾಗಿದೆ. ಹೀಗಾಗಿ ಗದ್ಯ ಮತ್ತು ಪದ್ಯ ಮಿಶ್ರಿತವಾದ ಕಾವ್ಯಪ್ರಕಾರವನ್ನು 'ಚಂಪೂ' ಹೆಸರಿನಿಂದ ಕನ್ನಡ ಕವಿಗಳು ಹೆಸರಿಸದೆ ಕೆಲವು ಕಡೆ ಪ್ರಬಂಧ ಎಂದು ಹೆಸರಿಸಿದ್ದರೂ ಅದು ಚಂಪೂಕಾವ್ಯ ಪ್ರಕಾರವಾಗುತ್ತದೆ. ಹೀಗಾಗಿ ಚಂಪೂಪ್ರಕಾರ ಎಂಬುದು ಸಂಸ್ಕೃತ ಭಾಷೆಯಲ್ಲಿ ರಚಿತವಾದ ಗದ್ಯ ಮತ್ತು ಪದ್ಯ ಮಿಶ್ರಿತ ಕಾವ್ಯಗಳಿಗೆ ಮಾತ್ರ ಸಲ್ಲುತ್ತದೆ ಎಂಬ ಮತ್ತು ಕನ್ನಡದಲ್ಲಿ ಈ ಪ್ರಕಾರವನ್ನು ಪ್ರಬಂಧ ಎಂದು ಕರೆಯಬೇಕಾಗುತ್ತದೆ ಎಂಬ ಪ್ರಮೇಯವನ್ನು ಮರುಪರಿಶೀಲನೆಗೊಳಪಡಿಸುವ ಆವಶ್ಯಕತೆ ಇದೆ.

ಪ್ರಬಂಧಂ ಎಂಬುದು ಚಂಪೂ ಪದದ ಜೊತೆ ಜೊತೆಯಲ್ಲಿಯೇ ಸಂಸ್ಕೃತ ಕಾವ್ಯಗಳಲ್ಲಿ ಉಲ್ಲೇಖಿಸಲ್ಪಟ್ಟಿರುವುದನ್ನು ಹಿಂದಾಗಲೇ ಗಮನಿಸಲಾಗಿದೆ. ಚಂಪೂ ಅಥವಾ ಪ್ರಬಂಧ ಎಂದರೆ ಅಥವಾ ಚಂಪೂಪ್ರಬಂಧಮ್ ಎಂದರೆ ಗದ್ಯ ಪದ್ಯ ಸಮ್ಮಿಶ್ರಾತ್ಮಕವಾದುದು. ಪಂಪಭಾರತದಲ್ಲಿ ಪಂಪನು ತಾನು ಯಾವ ರೀತಿ ಕಾವ್ಯ ರಚನೆಗೆ ತೊಡಗಿದನು ಎಂಬುದನ್ನು ಒಂದು ವೃತ್ತದಲ್ಲಿ ಹೇಳಿಕೊಂಡಿದ್ದಾನೆ.

> ಕತೆ ಪಿರಿದಾದೊಡಂ ಕತೆಯ ಮೆಯ್ಗ್ಗಡಲೀಯದೆ ಮುಂ ಸಮಸ್ತ ಭಾ
> ರತಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ ವರ್ಣಕಂ
> ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಮೆಂದು ಪಂ
> ಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ [13]

ಕಥೆಯ ವಸ್ತು ಹಿರಿದಾಗಿದ್ದರೂ ಅದರ ವಸ್ತು ವಿನ್ಯಾಸವು ನಷ್ಟವಾಗದಂತೆ ಸಮಗ್ರ ಭಾರತದ ಕಥೆಯನ್ನು ಅಪೂರ್ವವಾಗಿ ಹೇಳಿದ ಕವಿಗಳು ಕಳೆದ ಕಾಲದಲ್ಲಿ ಇದುವರೆಗೂ ಯಾರೂ ಇಲ್ಲ. ಕಥೆ ಮತ್ತು ವರ್ಣಕಗಳೆರಡೂ ಸರಿಯಾಗಿ ಹೊಂದಿಕೊಳ್ಳುವಂತೆ ಆಗಬೇಕಾದರೆ ಪಂಪನು ಮಾತ್ರ ಶಕ್ತನೆಂದು ಪಂಡಿತರು ಹೇಳಿದ್ದರಿಂದ ಈ ಪ್ರಬಂಧವನ್ನು ಹೇಳ ತೊಡಗಿದೆನೆಂದು ಪಂಪನ ಹೇಳಿಕೆ. ಪಂಪಭಾರತ ಕೃತಿಯಲ್ಲಿ ಒಂದು ಅಂಶವನ್ನು ನಾವು ಗಮನಿಸಬೇಕು. ಕೃತಿಯಲ್ಲಿ ಕಥೆಯೂ ಇದೆ. ವರ್ಣನೆಯೂ ಇದೆ ವ್ಯಾಸಭಾರತವನ್ನೇ ಆಧಾರವಾಗಿಟ್ಟುಕೊಂಡಿದ್ದರೂ ಕವಿಯು ಸ್ವಕಲ್ಪಿತ ಸಂಗತಿಗಳನ್ನು ಅಳವಡಿಸಿಕೊಂಡಿದ್ದಾನೆ. ಸಮಕಾಲೀನ ಐತಿಹಾಸಿಕ ವ್ಯಕ್ತಿಯನ್ನು ಪೌರಾಣಿಕ ವ್ಯಕ್ತಿ ಅರ್ಜುನನೊಂದಿಗೆ ಸಮೀಕರಿಸಿ ಅನೇಕ ಅಂಶಗಳಲ್ಲಿ ಕಥೆಯನ್ನೇ ಮಾರ್ಪಡಿಸಿದ್ದಾನೆ. ಈ ದೃಷ್ಟಿಯಿಂದ ನೋಡಿದಾಗ 'ಪ್ರಬಂಧ ಕಲ್ಪನಾ ಕಥಾ' ಎಂಬ ಅಂಶ ಈ ರೀತಿಗೆ ತಕ್ಕುದೇನೋ ಎಂದೆನಿಸುತ್ತದೆ. ಪಂಪ ಇಲ್ಲಿ ಪ್ರಬಂಧ ಶಬ್ದವನ್ನು

13. ಪಂಪಭಾರತ (ಸಂ॥ ಎನ್. ಅನಂತರಂಗಾಚಾರ್) ಕನ್ನಡ ಸಾಹಿತ್ಯ ಪರಿಷತ್. ಆ.1.ಪ.ಸಂ.11

ಕವಿಕೃತಿಯೆಂಬ ಸಾಧಾರಣವಾದ ಅರ್ಥದಲ್ಲಿ ಬಳಸದೆ ಒಂದು ವಿಶಿಷ್ಟ ಜಾತಿಯ ಕಾವ್ಯ ಎಂಬ ಅರ್ಥದಲ್ಲಿ ಬಳಸಿರಬಹುದೆಂಬ ಊಹೆಗೆ ಅವಕಾಶ ಇದೆ. [14] ವರ್ಣಕ ಮತ್ತು ಕಥೆ ಎರಡೂ ಪರಸ್ಪರ ಹೊಂದಿಕೊಂಡಂತಿರುವುದು ಕವಿಯ ಪ್ರಕಾರ ಪ್ರಬಂಧವಿರಬಹುದು ಎಂದೆನಿಸುತ್ತದೆ. ಪಂಪಕವಿಯು ವರ್ಣಕ ಮತ್ತು ಕಥೆಗಳೆರಡನ್ನೂ ಸರಿಯಾಗಿ ಹೊಂದುವಂತೆ ಜೋಡಿಸಬಲ್ಲ ಸಮರ್ಥನಾಗಿದ್ದುದರಿಂದ, ಪಂಡಿತರು ಸಮಸ್ತ ಭಾರತವನ್ನು ರಚಿಸಲು ಹುರಿದುಂಬಿಸಿದಾಗ 'ಪೇೞಲೊಡರ್ಚಿದೆನೀ ಪ್ರಬಂಧಮಂ' ಎಂದಿದ್ದಾನೆ. ಪಂಪನು ಕಾವ್ಯ ರಚಿಸುವ ಸಂದರ್ಭಕ್ಕೆ ಚಂಪೂ, ವಚನ ಇತ್ಯಾದಿ ಕಾವ್ಯ ಪ್ರಕಾರಗಳನ್ನು ಹೆಸರಿಸುವ ಪದ್ಧತಿಗಿಂತ ವಸ್ತುಕ, ವರ್ಣಕ, ಪ್ರಬಂಧ, ಪುರಾಣ. ಚತ್ತಾಣ, ಬೆದಂಡೆ, ಇತಿಹಾಸ ಈ ವಿಭಜನಾಕ್ರಮವೇ ಬಳಕೆಯಲ್ಲಿದ್ದಿರಬಹುದು. ಕವಿರಾಜಮಾರ್ಗದಲ್ಲಿ ಉಲ್ಲೇಖವಾಗಿರುವ ಚತ್ತಾಣ, ಬೆದಂಡೆ ಮೊದಲಾದ ಕಾವ್ಯ ಜಾತಿಗಳು ಪಂಪನ ಕಾಲದಲ್ಲಿಯೂ ಮುಂದುವರಿದಿದ್ದವೇನೋ ಎಂದೆನಿಸುತ್ತದೆ. ಛಂದೋವೈವಿಧ್ಯತೆಗನುಗುಣವಾಗಿ ಹೆಸರಿಡುವ ಚಂಪು, ವಚನ, ರಗಳೆ, ಷಟ್ಪದಿ, ತ್ರಿಪದಿ ಇತ್ಯಾದಿ ಕಾವ್ಯ ಪ್ರಕಾರಗಳು ಆಮೇಲೆ ಬಳಕೆಗೆ ಬಂದಿರ ಬೇಕು ಎಂದೆನಿಸುತ್ತದೆ. ಈ ಅನಿಸಿಕೆ ವಿಚಾರಣೀಯವಾಗಿದೆ.

ಒಟ್ಟಾರೆ ಈ ಮೇಲಿನ ಸಂಗತಿಗಳಿಂದ ವಿದಿತವಾಗುವ ಅಂಶವೆಂದರೆ ಗದ್ಯ ಮತ್ತು ಪದ್ಯ ಉಭಯಗಳೆರಡರಲ್ಲಿಯೂ ರಚಿತವಾದ ಕಾವ್ಯಪ್ರಕಾರವನ್ನು ಸಂಸ್ಕೃತದಲ್ಲಿ 'ಚಂಪೂ' ಎಂದು ಕರೆಯಬೇಕು. ಕನ್ನಡದಲ್ಲಿ ಈ ಕಾವ್ಯ ಪ್ರಕಾರವನ್ನು 'ಪ್ರಬಂಧ' ಎಂದು ಕರೆಯಬೇಕು ಎಂಬುದಕ್ಕಿಂತ ಉಭಯ ಭಾಷೆಗಳಲ್ಲಿಯೂ ಈ ಪ್ರಕಾರವನ್ನು 'ಚಂಪೂ ಪ್ರಬಂಧಂ' ಎಂದು ಕರೆಯಬಹುದೇನೋ ಎಂದೆನಿಸುತ್ತದೆ. ಆದಾಗ್ಯೂ ಇದನ್ನು ಸಮರ್ಥಿಸಲು ಇನ್ನೂ ಹೆಚ್ಚಿನ ಆಧಾರಗಳು ದೊರೆಯುವವರೆಗೂ ಖಚಿತವಾಗಿ ಏನನ್ನೂ ಹೇಳುವಂತಿಲ್ಲ.

ಗದ್ಯ ಮತ್ತು ಪದ್ಯ ಮಿಶ್ರಿತವಾದ ಕಾವ್ಯವನ್ನು 'ಚಂಪೂ ಪ್ರಬಂಧಂ' ಎಂದು ಕರೆಯುವುದರ ಜೊತೆಗೆ 'ಸಸರ್ಪರೀ' ಎಂಬ ಹೆಸರನ್ನು ಪೂರಕವಾಗಿ ಬಳಸಬಹುದು ಎಂದು ವಿದ್ವಾಂಸರೊಬ್ಬರು ಇತ್ತೀಚೆಗೆ ನಿಯತಕಾಲಿಕೆಯ ಲೇಖನವೊಂದರಲ್ಲಿ ಪ್ರತಿಪಾದಿಸಿದ್ದಾರೆ. 'ಸಸರ್ಪರೀ' ಎಂಬ ಮಾತಿಗೆ ವೇದಭಾಷ್ಯಕಾರರಾದ ಸಾಯಣಾಚಾರ್ಯರು ತಮ್ಮ ಭಾಷ್ಯದಲ್ಲಿ 'ಸಸರ್ಪರೀ ಸರ್ವತ್ರ ಗದ್ಯಪದ್ಯಾತ್ಮಕತ್ವೇನ ಸರ್ಪಣಾಶೀಲಾ ವಾಗ್ದೇವತಾ' ಎಂಬ ವ್ಯಾಖ್ಯಾನವನ್ನು ನೀಡಿದ್ದಾರೆ. ಎಂದರೆ ಎಲ್ಲೆಡೆ

14. ಕೆ. ವೆಂಕಟರಾಮಪ್ಪ, ಶ್ರೀ ಕೃಷ್ಣದೇವರಾಯ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ- ಪು. 4

ಯಲ್ಲೂ ಗದ್ಯಪದ್ಯ ಮಿಶ್ರಿತವಾಗಿ ಸರ್ಪದ ಚಲನೆಯಂತೆ ಏರಿಳಿತಗೊಂಡು ವಿಶಿಷ್ಟ ರೀತಿಯಲ್ಲಿ ಸಾಗುವಂತಹಳಾದ ವಾಗ್ದೇವತೆ. [15]

ಸಸರ್ಪರೀ ಎಂಬ ಪದಕ್ಕೆ ಇರುವ ಅರ್ಥವನ್ನು ಗಮನಿಸಿದರೆ ಈ ಅರ್ಥವು ಚಂಪುವನ್ನು ಕುರಿತು ಇರುವ ಸಮ್ಮಿಶ್ರಿತವಾದದ್ದು ಎಂಬ ಅರ್ಥವನ್ನೇ ಹೋಲುತ್ತದೆ. ಗದ್ಯಪದ್ಯ ಸಮ್ಮಿಶ್ರಿತವಾದ ಕಾವ್ಯಪ್ರಕಾರವನ್ನು 'ಚಂಪೂ' ಎಂದು ಕರೆಯುವುದಕ್ಕೆ ಮೊದಲು 'ಸಸರ್ಪರೀ' ಎಂದು ಸಂಸ್ಕೃತದಲ್ಲಿ ಕರೆದಿರಬಹುದೇ ಎಂದೆನಿಸುತ್ತದೆ. ಏಕೆಂದರೆ ಚಂಪೂವಿನ ಪ್ರಾಚೀನತೆಯನ್ನು ಋಗ್ವೇದದಲ್ಲಿ ಹುಡುಕಲಿಕ್ಕೆ ವಿದ್ವಾಂಸರು ಪ್ರಯತ್ನಿಸಿದ್ದು, ಆಖ್ಯಾನ ಸೂಕ್ತಗಳೆಂದು ಕರೆಯಲಾದ ಋಗ್ವೇದದಲ್ಲಿಯ ಹದಿನೈದು ಸಂವಾದಗಳು ಚಂಪೂರೂಪಕ್ಕೆ ಮೂಲವಾದವುಗಳು ಎಂಬ ಹೇಳಿಕೆಯನ್ನು ಚಂಪೂ ಸಂಸ್ಕೃತಜನ್ಯ ಎಂಬ ವಾದವನ್ನು ಮಂಡಿಸುವಾಗ ಪ್ರಾಥಮಿಕ ಆಧಾರವಾಗಿ ಬಳಸಲಾಗಿದೆ. ಅವುಗಳಲ್ಲಿಯ ಗದ್ಯಭಾಗಗಳು ಕೈಬಿಟ್ಟುಹೋಗಿವೆ. ಆದರೆ ಪದ್ಯಗಳಿಗೆ ಅವು ಕೊಂಡಿಯಾಗಿ ಇದ್ದಿರಲೇ ಬೇಕು. ಇಲ್ಲವಾದರೆ ಸಂವಾದಗಳು ಅರ್ಥವಾಗುವಂತಿಲ್ಲ. ಹಾಗೆಯೇ ಅಥರ್ವಣ ಮತ್ತು ಯಜುರ್ವೇದಗಳಲ್ಲಿಯೂ ಗದ್ಯಪದ್ಯಗಳ ಬೆರಕೆ ಇದೆ. ಹೀಗಾಗಿ ಉತ್ತರಕಾಲೀನ ಸಂಸ್ಕೃತ ಕಾವ್ಯ ಮತ್ತು ನಾಟಕಗಳಿಗೆ ತಲಕಾವೇರಿಯೆಂದು ಹೇಳಲಾದ ಋಗ್ವೇದದ ಆಖ್ಯಾನಗಳೇ ಚಂಪೂವಿಗೂ ಮೂಲವಾಗಿದೆ ಎಂಬುದನ್ನು ಮನಗಂಡರೆ ಋಗ್ವೇದದಲ್ಲಿ ಬರುವ ಸಸರ್ಪರೀ ಎಂಬ ಪದದ ಅರ್ಥವು 'ಚಂಪೂ' ಪದಕ್ಕೆ ಹೇಳಲಾದ ಅರ್ಥವನ್ನು ಹೋಲುವುದರಿಂದ 'ಸಸರ್ಪರೀ' ಎಂಬ ಪದವು ಚಂಪೂ ಪದಕ್ಕೆ ಸಮಾನಾರ್ಥಕವಾಗಿ ಬಳಸಬಹುದೇ ಎಂಬ ಪ್ರಮೇಯವು ಉದ್ಭವಿಸಿದ್ದು ಈ ವಿಷಯದ ಬಗೆಗೆ ಬಲ್ಲವರು ಉತ್ತರಿಸಿಯಾರೇ ಎಂದೆನಿಸುತ್ತದೆ.

—o—

15. ಸತ್ಯಶುದ್ಧ ಕಾಯಕ (ಸಂ|| ಬಿ. ರಾಜಶೇಖರಪ್ಪ) 1994. ಸಂ. 4 ಸಂ. 1-4 ಪು. 137

ಟೀಕೆ ಟಿಪ್ಪಣಿಗಳು

---

೧. ಸಾಹಿತ್ಯ-ಕುತೂಹಲ — ಇನ್ನೊಂದು ಪ್ರತಿಕ್ರಿಯೆ

ಪನಸ ಮತ್ತು ನಿಚುಲ- ಇವು ಸಮಾನಾರ್ಥಕ ಪದಗಳಲ್ಲವೆಂದು ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ಹೇಳಬೇಕಾಗಿರುವಷ್ಟನ್ನೂ ಸಾಧಾರವಾಗಿ ಹೇಳಿದ್ದಾರೆ.[1] ಇಂತಹ ವಿಷಯಗಳಲ್ಲಿ ಅನ್ಯಕೋಶಗಳೂ ಪೂರ್ವಕವಿಪ್ರಯೋಗಗಳೂ ನಮಗೆ ಆಧಾರ. ಮೇಲಿನ ಅಭಿಪ್ರಾಯವನ್ನು ವಿರೋಧಿಸುವ ಒಂದೇ ಒಂದು ನಿದರ್ಶನವೂ ನಮಗೆ ಇವುಗಳಲ್ಲಿ ಕಂಡು ಬರುವುದಿಲ್ಲ. ಆದ್ದರಿಂದ ಪನಸ ಮತ್ತು ನಿಚುಲಗಳು ಬೇರೆಬೇರೆ ಎಂದು ತಿಳಿಯುವುದರಲ್ಲಿ ಯಾವ ಅಭ್ಯಂತರವೂ ಇರಬೇಕಾದದ್ದಿಲ್ಲ; ಸಾಧುವೂ ಹೌದು.

"ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ।"

(ವಿಕ್ರಮಾರ್ಜುನ ವಿಜಯ ೪-೩೦)

ಎಂಬ ಪದ್ಯದಲ್ಲಿ ಆರ್ = ನಿಚುಲ ಎಂಬುದನ್ನು ಅನ್ವಯಿಸುವುದರ ಔಚಿತ್ಯದ ಕುರಿತು ಒಂದು ಅಭಿಪ್ರಾಯ.

ಮೇಲ್ನೋಟಕ್ಕೆ ಈಗಿರುವ ಪ್ರಸಿದ್ಧ ಅರ್ಥ ಸರಿಯಾಗಿಯೇ ಕಾಣುತ್ತದೆ. 'ತೆಂಕಣ ಗಾಳಿ ಸೋಂಕಿದಾಗಲೂ, ಒಳ್ನುಡಿ ಕೇಳ್ದಾಗಲೂ....' ಎಂದು ಹೇಳುತ್ತಾ ಕೊನೆಗೆ ಅದೇ ಧಾಟಿಯಲ್ಲಿ 'ಯಾರು ಅಡ್ಡಿಪಡಿಸಿದರೂ ನನ್ನ ಮನವು ಬನವಾಸಿಯನ್ನು ನೆನೆಯುತ್ತದೆ' ಎಂದು ಅಭಿಪ್ರಾಯವಾಗುತ್ತದೆ. ಎಂದರೆ ಬನವಾಸಿಯನ್ನು ನೆನೆಯಲು ಇದೂ ಒಂದು ಕಾರಣವೆಂಬಂತೆ ಹೇಳಿದೆ. ಆದ್ದರಿಂದಲೇ ಇದು ಮುಂದಿನ ಪದ್ಯದಲ್ಲಿ ಹೇಳುವ 'ಮಱೆಯಲ್ಕಿನ್ನೆಂ ಮನಂ ಬರ್ಕುಮೇ' (ಅದೇ ೪-೩೧) ಎಂಬಲ್ಲಿನ ಸಹಜತೆ ಇಲ್ಲಿಲ್ಲ. ವಾಸ್ತವವಾಗಿ 'ತೆಂಕಣ ಗಾಳಿ ಸೋಂಕಿದೊಡಂ....' ಎಂಬುದರ ಉತ್ತರ ಭಾಗವೇ ಈ ಎರಡನೇ ಪದ್ಯವೆಂದು ಭಾವಿಸಲು ಅವಕಾಶವಿದೆ. ಆದ್ದರಿಂದಲೇ "ಆರಂಕುಸಮಿಟ್ಟೊಡಂ...." ಎಂಬಲ್ಲಿ ಪ್ರಚಲಿತ ಅರ್ಥಕ್ಕಿಂತ ಬೇರೆಯಾದ ಅರ್ಥವಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಆರ್ = ನಿಚುಲವೆಂದು ನಮಗೆ ಖಚಿತವಾಗಿ ತಿಳಿಯುವುದು ಎರಡನೆ ಮಂಗರಸನ 'ಅಭಿನವಾಭಿಧಾನ'ದಿಂದ. ಅಷ್ಟೇ ಹೊರತು ಅದಕ್ಕಿಂತ ಹೆಚ್ಚೇನೂ ಅದರಿಂದ ತಿಳಿಯುವುದಿಲ್ಲ. ನಿಚುಲವು ಪೊದೆಗಳಾಗಿ ಬೆಳೆಯುವ

---

1. ಕರ್ನಾಟಕ ಲೋಚನ, ಡಿಸೆಂಬರ್ 1993ರ ಸಂಚಿಕೆ – ಪುಟಗಳು 72-76

ಸಸ್ಯಜಾತಿಯೆಂದು ಸಂಸ್ಕೃತದಲ್ಲಿನ ಪದಪ್ರಯೋಗಗಳಿಂದ ತಿಳಿಯುತ್ತದೆ. ಕನ್ನಡದಲ್ಲಿ ಯಾದರೂ ಆರ್ ಪದಪ್ರಯೋಗಗಳು (ನಿಚುಲ ಎಂಬರ್ಥದಲ್ಲಿ) ಕಡಿಮೆಯೇ. ಒಂದು ಪ್ರಯೋಗವು ನೇಮಿಚಂದ್ರನ 'ಲೀಲಾವತಿ' ಕಾವ್ಯದಲ್ಲಿದೆಯಾಗಿ ಅದನ್ನೇ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ ಉದಾಹರಿಸಿದ್ದಾರೆ. ಇನ್ನೊಂದು ಪ್ರಯೋಗ ಬಂಧುವರ್ಮನ 'ಹರಿವಂಶಾಭ್ಯುದಯ' ದಲ್ಲಿದೆ–

.... ಬಿತ್ತುವ ಕೆಯ್ಗಳಂತಾರು........ (೨–೩೮ ಗದ್ಯ)

ಇದರಿಂದ ಅದು ಕೆಯ್ಗಳಂತೆ (ಬತ್ತದ ಪೈರಿನಂತೆ) ಒತ್ತೊತ್ತಾಗಿಯೂ ಪೈರಿನಷ್ಟೆತ್ತರಕ್ಕೆ ಬೆಳೆಯುವುದೆಂದು ತಿಳಿಯಬಹುದು.

ಅಮರಕೋಶದಲ್ಲಿ ನಿಚುಲಕ್ಕೆ ನಿಚುಲ, ಅಂಬುಜ, ಇಜ್ಜಲವೆಂದು ಮೂರು ಪದ ಗಳನ್ನು ಹೇಳಿದೆಯಷ್ಟೇ ? ಪುರುಷೋತ್ತಮದೇವನ ತ್ರಿಕಾಂಡಶೇಷದಲ್ಲಿ ಅದಕ್ಕೆ 'ನಿಚುಲೋ ರಕ್ತಮಂಜರಃ' ಎಂದು ಇನ್ನೊಂದು ಪದವನ್ನೂ ಹೇಳಿದೆ. ರಕ್ತಮಂಜರ ವೆಂದರೆ 'ಕೆಂಪು ಬಣ್ಣದ ಹೂ ಗೊಂಚಲುಗಳುಳ್ಳದ್ದು' ಎಂದರ್ಥ. [1]

ಹೀಗೆ ಒತ್ತೊತ್ತಾಗಿ ಬೆಳೆಯುವ ನಿಚುಲವು ಗೊಂಚಲು ಗೊಂಚಲಾಗಿ ಕೆಂಪು ಹೂಗಳನ್ನು ಬಿಟ್ಟಾಗ ಮನೋಹರವಾಗಿ ಕಾಣುವುದರಲ್ಲಿ ಸಂಶಯವಿಲ್ಲ. ಅದನ್ನು ಮನ ದಲ್ಲಿರಿಸಿಕೊಂಡೇ ಪಂಪನು ಹೇಳಿರಬೇಕು–

'ಆರಂಕುರಮಿಟ್ಟೊಡಂ ನೆನೆವುದೆನ್ನ ಮನಂ....' ಆರ್ ಎಂದರೆ ನಿಚುಲ ವೆಂದಾದರೆ ಅದಕ್ಕೂ ಅಂಕುಸಕ್ಕೂ ಏನು ಸಂಬಂಧ ? ಈ ದೃಷ್ಟಿಯಲ್ಲಿ ಇಲ್ಲಿ ಪಾಠ ತಪ್ಪಿ ರುವ ಸಾಧ್ಯತೆಯೂ ಇದೆ. ಸರಿಯಾದ ಪಾಠ ಯಾವುದಿರಬಹುದು ? ಆ ಕುರಿತು ಯಾವುದೇ ಪಾಠಾಂತರಗಳಿರುವಂತೆ ಕಂಡುಬರುವುದಿಲ್ಲ. ಆದರೂ ಒಂದೆರಡು ಊಹೆ ಗಳನ್ನು ಮಾಡಬಹುದು.

'ಆಱಂಕುರಮಿಟ್ಟೊಡಂ ನೆನೆವುದೆನ್ನ ಮನಂ....' ಎಂಬುದು ಒಂದು ಊಹೆ. ಅಂಕುರವೆಂದರೆ ಮೊಳಕೆ ಎಂದು ಪ್ರಸಿದ್ಧ ಅರ್ಥ. ಆದರೆ ಎಳಚಿಗುರು ಎಂಬರ್ಥದಲ್ಲೂ ಕವಿಪ್ರಯೋಗವಿದೆ. ಮೊಳಕೆ ಎಂಬರ್ಥದಲ್ಲಾಗಲೀ, ಎಳಚಿಗುರು ಎಂಬರ್ಥದಲ್ಲಾ ಗಲೀ 'ಅಂಕುರ' ವು 'ಆರಂಕುರಮಿಟ್ಟೊಡಂ....' ಎಂಬಲ್ಲಿ ಸಾರ್ಥಕ್ಯವನ್ನು ಪಡೆಯು ವುದಿಲ್ಲ. ಆದ್ದರಿಂದ ಈ ಪಾಠದ ಸಾಧ್ಯತೆಯನ್ನು ತಳ್ಳಿಹಾಕಬಹುದು.

ಊಹಿಸಬಹುದಾದ ಇನ್ನೊಂದು ಪಾಠ–**ಆರುಂ ಕಿಸುವಿಟ್ಟೊಡಂ....** ಕಿಸುವಿಟ್ಟೊಡಂ ಎಂದರೆ ಕಿಸು + ಬಿಟ್ಟೊಡಂ = ಕೆಂಪುಬಣ್ಣವನ್ನು ಸೂಸಿದಾಗ ಎಂದರ್ಥವಾಗುತ್ತದೆ. (ಬಿಡು = to emit). ಆರ್ ಅಥವಾ ಆರು ಕೆಂಪುಬಣ್ಣದ

---

1. ರಕ್ತಪರ್ಣಾ ಮಂಜರೀ ಅಸ್ತ್ಯಸ್ಯ–ತ್ರಿಕಾಂಡಶೇಷ ಸಾರಾರ್ಥ ಚಂದ್ರಿಕೆ ಟೀಕೆ. (ವೆಂಕಟೇಶ್ವರ ಪ್ರೆಸ್ ಮುದ್ರಣ, 1918, ಪುಟ–38)

ಹೂಗಳನ್ನು ಹೊಂದಿರುತ್ತದೆ ಎಂಬುದನ್ನು ಈಗಾಗಲೇ ನೋಡಿದ್ದೇನೆ. ಆದ್ದರಿಂದ 'ಆರು' ಹೂಗಳನ್ನು ಬಿಟ್ಟಾಗಲೂ ಬನವಾಸಿಯನ್ನು ನನ್ನ ಮನ ನೆನೆಯುತ್ತದೆ ಎಂದು ಭಾವ ಹೊರಡುತ್ತದೆ.

ಈ ಪಾಠವನ್ನು ಸ್ವೀಕರಿಸುವಲ್ಲಿ ಎರಡು ಔಚಿತ್ಯಗಳಿವೆ–ಒಂದನೆಯದಾಗಿ ಕವಿಯು ಈ ಪದ್ಯದಲ್ಲಿ ಅಚ್ಚಗನ್ನಡ ಪದಗಳನ್ನೇ (ಮಧು ಮಹೋತ್ಸವ ಎಂಬುದನ್ನು ಹೊರತುಪಡಿಸಿ) ಬಳಸಿರುವುದನ್ನು ಕಾಣಬಹುದು. ಅದಕ್ಕೆ ಈ ಪಾಠವು ಹೊಂದಿಕೊಳ್ಳುತ್ತದೆ.

ಎರಡನೆಯದಾಗಿ, ಬನವಾಸಿಯನ್ನು ನೆನೆಯುನಂತೆ ಮಾಡುವ, ತನ್ನ ಪಂಚೇಂದ್ರಿಯ ಮತ್ತು ಮನಸ್ಸುಗಳಿಗೆ ಉಂಟಾಗುವ ಸುಖಾನುಭವವನ್ನು ಪಂಪನು ಇಲ್ಲಿ ವರ್ಣಿಸಿದ್ದಾನೆ. (ಚರ್ಮವನ್ನು) ಸೋಂಕುವ ತೆಂಕಣ ಗಾಳಿಯಿಂದಲೂ, (ನಾಲಗೆಯಿಂದ) ಒಳ್ನುಡಿಯನ್ನು ಕೇಳ್ದಾಗಲೂ, ಇಂಪಾದ ಗಾಯನ ಕಿವಿಯನ್ನು ಹೊಕ್ಕರೂ, (ಮೂಗಿಗೆ ಪರಿಮಳ ಬೀರುವ) ಮಲ್ಲಿಗೆ ಅರಳಿದಾಗಲೂ, (ಮನಸ್ಸು) ಸುಖವಾಗಿ ನಿದ್ರಿಸಿದಾಗಲೂ ಆರು (ನಿಚುಲವು) ಹೂಬಿಟ್ಟು (ಕಣ್ಣಿಗೆ ಮನೋಹರವಾಗಿ) ಕಂಗೊಳಿಸುವಾಗಲೂ ನನ್ನ ಮನವು ಬನವಾಸಿಯನ್ನು ನೆನೆಯುತ್ತದೆ ಎಂಬುದು ಇಲ್ಲಿನ ತಾತ್ಪರ್ಯ. ವಸಂತ ಮಾಸ ಬಂದಾಗ ವಿಶೇಷವಾಗಿ ಈ ಅನುಭವಗಳುಂಟಾಗುತ್ತವೆ ಎಂದು ಭಾವಿಸಬಹುದು.

ಇಲ್ಲಿ ಬನವಾಸಿಯನ್ನು ನೆನೆಯಲು ಕಾರಣವಾಗುವ ಅನೇಕ ಕ್ರಿಯೆಗಳನ್ನು ವರ್ಣಿಸಿರುವುದರಿಂದ ಸಮುಚ್ಚಯಾ[1]ಲಂಕಾರವಿದೆ.

ಈಗಾಗಲೇ ಹೇಳಿದಂತೆ ಈ ಪದ್ಯಭಾಗಕ್ಕೆ, ನಾನು ತಿಳಿದಿರುವಂತೆ, ಯಾವುದೇ ಪಾಠಾಂತರಗಳಿಲ್ಲ. ಆದರೆ ಕೃತಿಯು ಬಹು ಪ್ರಾಚೀನವಾಗಿರುವುದರಿಂದಲೂ, ಕೆಲವೇ ಹಸ್ತ ಪ್ರತಿಗಳು ದೊರಕಿರುವುದರಿಂದಲೂ, ಈಗಿರುವ ಪಾಠವೇ ಸರಿಯೆಂದು ಹೇಳಲಾಗದಷ್ಟೆ? ಅಂತೆಯೇ ವಿದ್ವಾಂಸರ ಪರ್ಯಾಲೋಚನೆಗೆ ಅವಕಾಶವಿರುವ, ಸಂದರ್ಭಕ್ಕೆ ಒಪ್ಪುವ, ಒಂದು ಸಂಭಾವ್ಯ ಪಾಠವನ್ನು ಓದುಗರ ಮುಂದಿಡಲಾಗಿದೆ.

–೨–

ಶುಶ್ರೂಷಸ್ವ ಗುರೂನ್ಕುರು ಪ್ರಿಯಸಖೀ ವೃತ್ತಿಂ ಸಪತ್ನೀಜನೇ ।
ಭರ್ತುರ್ವಿಪ್ರಕೃತಾಪಿ ರೋಷಣತಯಾ ಮಾಸ್ಮ ಪ್ರತೀಪಂ ಗಮಃ ॥

1. ಕನ್ನಡ ಕೈಪಿಡಿ, ಸಂಪುಟ ೧ (1988) ಪುಟ. 303

ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇಷ್ವನುತ್ಸೇಕಿನೀ
ಯಾನ್ತ್ಯೇವಂ ಗೃಹಿಣೀಪದಂ ಯುವತಯೋ ವಾಮಾಃ ಕುಲಸ್ಯಾಧಯಃ
(ಅಭಿಜ್ಞಾನ ಶಾಕುನ್ತಲ, ೪–೧೮)

ಈ ಪ್ರಸಿದ್ಧ ಪದ್ಯದ ಅರ್ಥ ಸುಕರವಾಗಿದೆ. ಕೊನೆಯ ಪಾದದ ಪ್ರಚಲಿತ ಅರ್ಥವನ್ನೇ ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯನವರೂ ಎತ್ತಿಹಿಡಿದಿದ್ದಾರೆ.[1] ಬೇರೊಂದು ಬಗೆಯಲ್ಲಿ ಅರ್ಥೈಸಬಹುದೆಂದೂ ಅದೇ ಉಚಿತವೆಂಬಂತೆಯೂ ಶ್ರೀ ಪಿ. ವಿ. ಜೋಷಿಯವರೂ ಪ್ರತಿಪಾದಿಸಿರುತ್ತಾರೆ.[2] ಆ ನಿಟ್ಟಿನಲ್ಲಿಯೇ ಇದೊಂದು ವಿವರಣೆ.

ಈಗಿರುವ ಅರ್ಥವು ಹೆಚ್ಚಿನ ವಿದ್ವಾಂಸರು ವಿವರಿಸಿರುವಂತೆ–ವಾಮಾಃ ಕುಲಸ್ಯಾಧಯಃ (ಭವನ್ತಿ) (ಹಾಗಿಲ್ಲದವರು ಕುಲಕ್ಕೆ ಕೊರಗನ್ನು ಉಂಟುಮಾಡುತ್ತಾರೆ)–ಹಿಂದಿನ ಮೂರು ಪಾದಗಳಿಗೆ ಪೂರಕ ವಾಕ್ಯವಾಗಿ ಪರಿಣಮಿಸುತ್ತದೆ. ಇಲ್ಲಿ 'ಭವನ್ತಿ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಅಧ್ಯಾಹಾರ ಮಾಡಿಕೊಳ್ಳದೆಯೂ ಅರ್ಥೈಸಬಹುದಾಗಿದೆ. 'ಏವಂ ವಾಮಾಃ ಕುಲಸ್ಯಾಧಯಃ ಯುವತಯಃ ಗೃಹಿಣೀಪದಂ ಯಾಂತಿ' ಎಂದು ಅನ್ವಯ ಮಾಡಿಕೊಂಡು, 'ವಾಮಾಃ' ಮತ್ತು 'ಕುಲಸ್ಯಾಧಯಃ'ಗಳನ್ನು 'ಯುವತಯಃ' ಎಂಬುದಕ್ಕೆ ವಿಶೇಷಣಗಳನ್ನಾಗಿ ಭಾವಿಸಿದರೆ ಬೇರೆಯೇ ಅರ್ಥ ಬರುತ್ತದೆ. 'ಈ ರೀತಿಯಾಗಿ ವಿನಮ್ರರಾದ ಮತ್ತು ಕುಲಕ್ಕೆ ನೆಲೆಯಂತಿರುವ ಯುವತಿಯರು ಗೃಹಿಣೀ ಪದವಿಯನ್ನು ಹೊಂದುತ್ತಾರೆ.' ಇಲ್ಲಿ ಎರಡು ವಿಶೇಷಣಗಳು ತುಂಬಾ ಮುಖ್ಯವಾದುವುಗಳು. ಎಂದರೆ ಗೃಹಿಣಿಯರು ಕುಲವನ್ನು ಬೆಳಗಿಸುವವರೂ ಬೆಳೆಸುವವರೂ ಆಗಿರಬೇಕೆಂದು, ಕಾಳಿದಾಸನು ಕ್ರಮವಾಗಿ ಆ ಎರಡು ವಿಶೇಷಣಗಳ ಮೂಲಕ ಸೂಚಿಸಿದ್ದಾನೆ. ವಾಮಾಃ ಎಂದರೆ ವಕ್ರಾಣಿ ಎಂದರ್ಥ. (ಮುಂದೆ ಹೇಳಿರುವ ರಾಘವ ಭಟ್ಟನ ವ್ಯಾಖ್ಯಾನವನ್ನು ನೋಡಿ.) ವಕ್ರತೆ ಎಂದರೆ ನಮ್ರತೆ[3] ಯೆಂಬ ಭಾವ. ಮೊದಲ ಮೂರು ಪಾದಗಳಲ್ಲಿ ಹೇಳಿದ್ದನ್ನು ಈ ಒಂದು ಪದದಲ್ಲಿ ಸಂಗ್ರಹಿಸಿದೆ ಎಂದರೂ ಸಲ್ಲುತ್ತದೆ. ಕುಲಸ್ಯಾಧಯಃ ಎಂದು ಹೇಳುವುದರಿಂದ, ಸತ್ಸಂತಾನದ ಮೂಲಕ ಕುಲಕ್ಕೆ ನೆಲೆಯಾಗುವವಳೆಂದು ಸೂಚ್ಯವಾಗಿ ಹೇಳಿದೆ.

---

1. ಕರ್ನಾಟಕ ಲೋಚನ, ಡಿಸೆಂಬರ್ 1993, ಪು. 77
2. ಕರ್ನಾಟಕ ಲೋಚನ, ಜೂನ್ 1992, ಪು. 42
3. ಯುಗಪತ್ಪ್ರಾಪ್ತ ಗುಣಯೋಶ್ಚಾಪ ಭಾರ್ಗವರಾಮಯೋಃ ।
   ಋಜುತಾ ವಕ್ರತಾಂ ಪ್ರಾಪ ವಕ್ರತಾಪಿ ತಥಾರ್ಜವಮ್ ॥
   (ಚಂಪೂರಾಮಾಯಣ, 1–114)

ರಾಮಚಂದ್ರ ಬುಧೇಂದ್ರನು ಇದನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳುತ್ತಾನೆ:– 'ಋಜುತಾ ಆರ್ಜವಂ ವಕ್ರತಾಂ ನಮ್ರತ್ವಮಾಪ । ತಥಾ ವಕ್ರತಾ ಕೌಟಿಲ್ಯಮಾರ್ಜವಂ ಪ್ರಾಪ....'

'ಕುಲಸ್ಯಾಧಯ' ವನ್ನು 'ಕುಲಕ್ಕೆ ವಾಸಸ್ಥಾನ' ಎಂಬರ್ಥದಲ್ಲಿಯೂ ನೋಡಬಹುದೆಂದು ಕೆಲ ವ್ಯಾಖ್ಯಾಕಾರರಾದರೂ ಗಮನಿಸಿದ್ದರೆಂದು ರಾಘವ ಭಟ್ಟನ ವ್ಯಾಖ್ಯಾನದಿಂದ ತಿಳಿಯುತ್ತದೆ. ಪ್ರಚಲಿತ ಪ್ರಸಿದ್ಧವಾದ ಅರ್ಥವನ್ನೇ ಅವನು ಪ್ರಧಾನವಾಗಿ ಹೇಳಿ, ಆ ಅರ್ಥದಲ್ಲಿ ಅದು ರೂಪಕಾಲಂಕಾರವೂ ಇನ್ನೊಂದರ್ಥಲ್ಲಿ ಅರ್ಥಾಂತರನ್ಯಾಸವೂ ಆಗುವುದೆಂದು ಹೇಳುತ್ತಾನೆ –' 'ರೂಪಕಮರ್ಥಾಂತರನ್ಯಾಸೋ ವಾ। ಕುಲಸ್ಯಾಧಯಃ ಕುಲಾಧಿಷ್ಠಾನಾನಿ। ವಾಮಾಃ ವಕ್ರಾಣೀತ್ಯರ್ಥಃ। 'ಆಧಿರ್ಮಾನಸ ಪೀಡಾಯಾಂ ಪ್ರತ್ಯಾಶಾಯಾಂ ಚ ಬಂಧನೇ। ವ್ಯಸನೇ ಚಾಪ್ಯಧಿಷ್ಠಾನೇ' ಇತಿ ವಿಶ್ವಃ।'

ಇದೇ ಸಂದರ್ಭದಲ್ಲಿ ಇದನ್ನಾಧರಿಸಿದ ಪಂಪನ ಪದ್ಯವನ್ನೂ ಗಮನಿಸತಕ್ಕದ್ದಾಗಿದೆ-

ಮನಮುಱಿದಂಜಿ ಬೆಚ್ಚಿ ಬೆಸಕೆಯ್ ನಿಜವಲ್ಲಭನೇನನೆಂದೊಡಂ
ಕಿನಿಸದಿರೊಂದಿದಗ್ರಮಹಿಷೀ ಪದದಲ್ಲಿ ಪದಸ್ಥೆಯಾಗು ನಂ
ದನರನಗಣ್ಯ ಪುಣ್ಯಧನರಂ ಪಡೆಯೆಂದಮರ್ದಪ್ಪಿಕೊಂಡು ತತ್
ತನುಜೆಯುಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ

(ಆದಿಪುರಾಣ, ೪–೫೬)

ಇಲ್ಲಿ 'ನಂದನರನಗಣ್ಯ ಪುಣ್ಯಧನರಂ ಪಡೆ'ಯೆಂಬುದು 'ಕುಲಸ್ಯಾಧಯಃ'ಕ್ಕೆ ವ್ಯಾಖ್ಯಾನದಂತಿದೆಯಲ್ಲವೇ ?

ಹೀಗೆ ಆ ಪದ್ಯವನ್ನು ಎರಡು ರೀತಿಯಾಗಿಯೂ ಸಮಾನವಾಗಿ ಸಮರ್ಥವಾಗಿ ವಿವರಿಸಬಹುದು. ಆದರೆ ಮೊದಲನೇ ಅರ್ಥವೇ ಮೇಲ್ನೋಟಕ್ಕೆ ಕೂಡಲೇ ಗೋಚರಿಸುವುದಾಗಿಯೂ, ಅದು ಸಮಂಜಸವಾಗಿಯೇ ಇರುವುದರಿಂದಲೂ ಪಂಡಿತವರ್ಗಕ್ಕೆ ಅದೇ ಹೆಚ್ಚು ಯುಕ್ತಿಯುಕ್ತವಾಗಿ ಕಂಡಿರಬಹುದು.

೩

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತಿಮಹತಾಂ ಮಹೀಯಸಾಮ್
ಮಮಾಪಿ ಚ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ ॥ (೭-೩೫)

'ಪುನರ್ಭವ'ಕ್ಕೆ 'ಪರಿಭ್ರಮ' ಎಂಬ ಪಾಠಾಂತರವಿರಬಹುದೆಂಬ ಶ್ರೀ ಪಿ. ವಿ. ಜೋಶಿಯವರ ವಾದವನ್ನು[1] ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯನವರು ಸಮರ್ಥವಾಗಿ ಅಲ್ಲಗಳೆದಿದ್ದಾರೆ.[2] ಆದರೂ 'ಪುನರ್ಭವ ನಾಶವಾದ ಮಾತ್ರಕ್ಕೆ ಮೋಕ್ಷವೇ

1. ಕರ್ನಾಟಕ ಲೋಚನ, ಜೂನ್ 1993, ಪು. 44
2. " ಡಿಸೆಂಬರ್ 1993, ಪು. 78

ಆದೀತೆಂಬ ಭರವಸೆ ಎಲ್ಲಿದೆ ?' ಎಂದು ಶ್ರೀ ಜೋಶಿಯವರು ಅನುಮಾನ ವ್ಯಕ್ತಪಡಿಸಿದ್ದಾರೆ.[3] ಅದಕ್ಕೆ ಈ ಪ್ರತಿಕ್ರಿಯೆ. –

ಪುನರ್ಭವ ಇಲ್ಲ ಎಂದ ಮೇಲೆ ಮೋಕ್ಷವೆಂದೇ ಅರ್ಥ ತಾನೇ ? ಅದಕ್ಕೆ ಶ್ರೀ ಮದ್ಭಾಗವತದಲ್ಲಿನ ಒಂದು ಶ್ಲೋಕವನ್ನು ನೋಡಬಹುದು–

ತುಲಯೊಮ ಲವೇನಾಪಿ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಙ್ಗಿಸಙ್ಗಸ್ಯ ಮರ್ತ್ಯಾನಾಂ ಕಿಮುತಾऽऽಶಿಷಃ ॥

(ಭಗವಂತನಲ್ಲಿ ಆಸಕ್ತಿಯುಳ್ಳವರ ಸಂಗ ಮನುಷ್ಯರಿಗೆ ಸ್ವಲ್ಪ ಮಾತ್ರ ಪ್ರಾಪ್ತವಾದರೂ ಅದರೊಡನೆ ಸ್ವರ್ಗವನ್ನಾಗಲೀ ಮೋಕ್ಷವನ್ನಾಗಲೀ ಸ್ವಲ್ಪ ಮಟ್ಟಿಗೂ ಹೋಲಿಸಲು ನಾವು ಶಕ್ತರಾಗುವುದಿಲ್ಲ. ಹಾಗೆಂದ ಮೇಲೆ ಇತರವಾದ ಅಭಿಲಾಷೆಗಳ ಮಾತೇನು ?)[4]

ಈ ಪದ್ಯದಲ್ಲಿ ಬರುವ 'ಅಪುನರ್ಭವ'ಕ್ಕೆ ವ್ಯಾಖ್ಯಾಕಾರರು ಮೋಕ್ಷ ಎಂದೇ ಅರ್ಥೈಸಿದ್ದಾರೆ. ಉದಾಹರಣೆಗೆ–

.... ನ ಚ ಅಪವರ್ಗಮ್ ....

—ಶ್ರೀಧರ ಸ್ವಾಮಿ (ಭಾವಾರ್ಥದೀಪಿಕೆ)

.... ಸ್ವರ್ಗಂ ಅಪುನರ್ಭವಂ ಮೋಕ್ಷಂ ಚಾಪಿ ....

—ವೀರ ರಾಘವ (ಭಾಗವತ ಚಂದ್ರ ಚಂದ್ರಿಕೆ)

.... ಸ್ವರ್ಗಂ ದುಃಖಾಸಂಭಿನ್ನಪ್ರದೇಶಂ ನಾಕಲಕ್ಷಣಂ ಅಪುನರ್ಭವಂ ಕೈವಲ್ಯಂ ಸಮ್ಯಕ್ ಸ್ವರೂಪಾಭಿವ್ಯಕ್ತಿ ಜನನಾಭಾವಲಕ್ಷಣಂ........

—ವಿಜಯಧ್ವಜ ತೀರ್ಥ (ಪದರತ್ನಾವಲೀ)

ಈ ಹಿನ್ನೆಲೆಯಲ್ಲಿ 'ಪುನರ್ಭವಂ ಕ್ಷಪಯತು' ಎಂದರೆ ಪುನರ್ಜನ್ಮ ಇಲ್ಲದಾಗಲಿ ಅಥವಾ ಮೋಕ್ಷ ಸಿಗಲಿ ಎಂದೇ ಅರ್ಥ. ಭರತ ವಾಕ್ಯದ ಮೂಲಕ ವ್ಯಕ್ತವಾಗುವ ನಾಟಕಕಾರನ ಆಶಯವೂ ಅದೇಯೇ. ●

—ಅಜಾರು ನಾಗರಾಜರಾಯ, ಕಟೀಲು

---

3. ಕರ್ನಾಟಕ ಲೋಚನ ಜೂನ್ 1994, ಪು. 48
4. ಡಾ॥ ಎಸ್. ಎಸ್. ಅನಂತರಂಗಾಚಾರ್ಯರ ಅನುವಾದ ಸೂಕ್ತಿಮಾಲಾ, ಪು. 189

2. ಎರಡು ಟಿಪ್ಪಣಿಗಳು

೧. ಪಂಜರಿಕಾ ಶಬ್ದ ವಿಚಾರ ಮತ್ತು ಭಜಗೋವಿಂದ ಪದ್ಯದ ಪಾಠಾಂತರ

'ಪಂಜರಿಕಾ' ಶಬ್ದ ಕನ್ನಡ ನಿಘಂಟುಗಳಲ್ಲಿ ಕಂಡು ಬಂದಿಲ್ಲ. ಸಂಸ್ಕೃತದ ಹಲವಾರು ನಿಘಂಟುಗಳಲ್ಲೂ ಇಲ್ಲ.

ಆದಿಶಂಕರರ ಮೋಹಮುದ್ಗರವೆಂಬ ಜನಪ್ರಿಯ ಸ್ತೋತ್ರವು ಭಜಗೋವಿಂದಂ ಎಂಬ ಹೆಸರಿನಿಂದಲೂ ದ್ವಾದಶಮಂಜರಿಕಾ ಚತುರ್ದಶ ಮಂಜರಿಕಾ ಎಂಬ ಹೆಸರಿನಿಂದಲೂ ದ್ವಾದಶ ಪಂಜರಿಕಾ ಚತುರ್ದಶ ಪಂಜರಿಕಾ ಎಂಬ ಹೆಸರಿನಿಂದಲೂ ಪ್ರಕಟಗೊಂಡಿವೆ. ಚತುರ್ದಶ ಪಂಜರಿಕಾಗೆ ಚರ್ಪಟ ಪಂಜರಿಕಾ ಎಂಬ ಹೆಸರೂ ಇದೆ.

ಈ ಬಗ್ಗೆ ಡಾ|| ಪ್ರಭುಶಂಕರ ಮತ್ತು ಪ್ರೊ|| ಎನ್. ಬಾಲಸುಬ್ರಹ್ಮಣ್ಯ ಅವರು ಸಂಪಾದಿಸಿರುವ ಕನ್ನಡ ಸಂಸ್ಕೃತಿ ಇಲಾಖೆಯಿಂದ 1992ರಲ್ಲಿ ಪ್ರಕಟವಾದ ಶ್ರೀ ಶಂಕರಾಚಾರ್ಯರು ಎಂಬ ಗ್ರಂಥದಲ್ಲಿ ಡಾ|| ಕೆ. ಕೃಷ್ಣಮೂರ್ತಿಗಳು ಬರೆದ ಸ್ತೋತ್ರಗಳು ಎಂಬ ಲೇಖನದಲ್ಲಿ ಪಂಜರಿಕಾ ಬಗ್ಗೆ ಅವರು ಹೇಳಿದ ಮಾತುಗಳು ಹೀಗಿವೆ :

(ಪುಟ 139)

"ಛಂದಸ್ಸಿನ ದೃಷ್ಟಿಯಿಂದ ಕೌತುಕಕಾರಿಯಾಗಿರುವ (ಶ್ರೀ ಶಂಕರಾಚಾರ್ಯರ ಇನ್ನೊಂದು ಸ್ತೋತ್ರವೇ **ಚರ್ಪಟ-ಪಂಜರಿಕಾ** ಎಂಬ ಹೆಸರಿನಿಂದ ಅಚ್ಚಾಗುತ್ತಿರುವುದನ್ನು ಕಾಣಬಹುದು. (ಈಗಾಗಲೇ ಈ ಹೆಸರಿನಿಂದ ಮೈಸೂರು ಶ್ರೀರಾಮಕೃಷ್ಣಾಶ್ರಮದವರು ಸ್ತವಕುಸುಮಾಂಜಲಿಯಲ್ಲಿ ಇದನ್ನು ಪ್ರಕಟಿಸಿದ್ದಾರೆ).

'**ಚರ್ಪಟ**' ಎಂದರೆ ಚಪ್ಪಾಳೆ ಹೊಡೆಯುವ ಕೈ

ಇಲ್ಲಿ **ಪಂಜರಿಕಾ** ಎಂದರೇನು ? ಹಿಂದೆ ಪ್ರಾಕೃತದಲ್ಲಿ ಪದ್ಧತಿ-ಪದ್ಧತಿಕಾ-ಪಜ್ಝಟಿ-ಪಜ್ಝಟಿಕಾ-ಪಡ್ಡಳಿ ಎಂದು ಮುಂತಾಗಿ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಲಯಾನುಸಾರ ನಾಲ್ಕು ಸಾಲಲ್ಲೂ ಇರುವ ಪದ್ಯಜಾತಿಯನ್ನು ಕರೆಯುತ್ತಿದ್ದರು. 'ಪಂಜರಿಕಾ' ಎಂಬುದು ಪಜ್ಝಟಿಕಾ ಎಂಬ ಮೂಲರೂಪದ ಅಪಭ್ರಂಶವಿರಬಹುದೋ ಏನೋ ! ವಿದ್ವಾಂಸರು ಪರಿಶೀಲಿಸಬೇಕು (ಎಂದು ಅನುಮಾನ ಮುಂದಿಟ್ಟಿದ್ದಾರೆ). ಇದರಲ್ಲಿ ಎರಡು ಸಾಲುಗಳ ಅಂತ್ಯವೂ ಪ್ರಾಸಯಮಕಗಳಿಂದ ಬಂಧುರವಾಗಿರುವುದು ವಿಶೇಷ. ಇದು ತಾಳಬದ್ಧವಾಗಿ ಹಾಡಲು ತುಂಬಾ ಅನುಕೂಲವೂ ಹೌದು." (ಎಂದು ತಿಳಿಸಿದ್ದಾರೆ).

ಚರ್ಪಟ ಪಂಜರಿಕಾ ಎಂದರೆ 'ರುಚಿಕಟ್ಟಾದ ಖಾದ್ಯ' ಎಂದೂ ಅರ್ಥವಿರುವುದು ಎಂದು ಅಧ್ಯಾತ್ಮ ಭಾಂಡಾರ ಮಠ ಹಿಂಚಗೇರಿಯಿಂದ ಪ್ರಕಟವಾದ ಆದ್ಯಶಂಕರಾಚಾರ್ಯ ವಿರಚಿತ ಪ್ರಬೋಧ ಗೀತಗಳು (1973) ಭಾಗ 1ರಲ್ಲಿ ಪುಟ 3ರಲ್ಲಿ ಮೋಹ ಮುದ್ಗರದ ಬಗ್ಗೆ ಬರೆಯುತ್ತಾ ಸಂಪಾದಕರಾದ ಶ್ರೀ ಸದ್ಗುರು ಗಣಪತರಾವ್ ಮಹಾರಾಜರು ಕನ್ನೂರ ತಿಳಿಸಿದ್ದಾರೆ. ಈ ಅರ್ಥ ಯಾವ ಕೋಶದಲ್ಲಿದೆ ?

ಸಂಶೋಧಕರಾದ ಭೀಮರಾವ್ ಚಿಟಗುಪ್ಪಿ ಅವರು ತಮ್ಮ 'ಸಂಶೋಧನ ಪಂಚದಶಿ' ಗ್ರಂಥದಲ್ಲಿ 'ಶಾಂತಿನಾಥ ಪಡ್ಡಳಿ' (ಪು 110–) ಲೇಖನದಲ್ಲಿ ಈ ಕೆಳಕಂಡ ಸಂಗತಿಗಳನ್ನು ಪಂಜರಿಕಾ ಬಗ್ಗೆ ಹೇಳಿದ್ದಾರೆ.

"ಪಡ್ಡಳಿ ಪ್ರತಿಪಾದದಲ್ಲಿ ನಾಲ್ಕು ಚತುರ್ಮಾತ್ರಾ ಗಣಗಳಿರುವ ಚತುಷ್ಪದಿ. ಅಪಭ್ರಂಶ ಕವಿಗಳ ಪ್ರೀತಿಯ ಛಂದಸ್ಸು. ಕ್ವಚಿತ್ತಾಗಿ ಸಂಸ್ಕೃತದಲ್ಲಿಯೂ ಬಳಸಲ್ಪಟ್ಟಿದೆ. ಆದ್ಯ ಶ್ರೀ ಶಂಕರಾಚಾರ್ಯರ ಸುಪ್ರಸಿದ್ಧ ಭಜಗೋವಿಂದಂ ಕೃತಿ ಇಂಥದ್ದು.

ಪಡ್ಡಳಿಯು ಪದ್ದಳಿ, ಪದ್ಧತಿ-ಪಜ್ಝಟಿಕಾ, ಪಂಜರಿಕಾ ಎಂದು ಸಹ ಪ್ರಸಿದ್ಧವಿದೆ............ ಎಂದು ಹೇಳುತ್ತಾ ಮುಂದುವರಿದು,

ಶಾಂತಿನಾಥನ ಜಿನಸ್ತುತಿ ಪಡ್ಡಳಿಯ ಎರಡನೇಯುಗ್ಮದ ಪ್ರಥಮ ಪಾದದಲ್ಲಿ ಎರಡು ಮಾತ್ರೆಗಳ ಕೊರತೆ ಇದೆ" ಎಂದು ಹೇಳಿ ಅದರ ಸಮರ್ಥನೆಗಾಗಿ ಈ ಮುಂದಿನ ಮಾತುಗಳನ್ನು (ಪು 111) ಹೇಳಿದ್ದಾರೆ."

ದೇಶಭಾಷಾ ರಚನೆಗಳಲ್ಲಿ ಗಣ ಮಾತ್ರೆಗಳ ನ್ಯೂನಾಧಿಕ್ಯ ಸಾಮಾನ್ಯ ಎಂದಿದ್ದಾರೆ ಸುಪ್ರಸಿದ್ಧ ಛಂದಃಶಾಸ್ತ್ರ ವಿದ್ವಾನ್ ವೇಲಣಕರ. ಸಂಸ್ಕೃತದಲ್ಲಿ ಕೂಡ ಆದ್ಯ ಶಂಕರಾಚಾರ್ಯರ ಉಪರ್ಯುಕ್ತ ಭಜಗೋವಿಂದಂ ಕೃತಿಯಲ್ಲಿ ಒಂದೆಡೆ ಎರಡು ಮಾತ್ರೆಗಳ ಕೊರತೆ ಇದೆ.

ಪ್ರಾಪ್ತೇ । ಸನ್ನಿಹಿ । ತೇಮರ । ಣೇ xx

ಪಂಪ ಪೊನ್ನರ ರಚನೆಗಳಲ್ಲಿ ಹೆಚ್ಚು ಮಾತ್ರೆಗಳಿರುವ ಒಂದೆರಡು ಸಂದರ್ಭಗಳಿವೆ. ಶಾಂತಿನಾಥನ ರಚನೆಯಲ್ಲಿ ಕಂಡುಬರುವ ಮಾತ್ರೆಗಳ ನ್ಯೂನತೆಗೆ ಈ ರೀತಿ ಪರಂಪರೆಯ ಬೆಂಬಲವಿರುವುದರಿಂದ ಅದಾದರೂ ಆಕ್ಷೇಪಾರ್ಹವಾಗದು. ಪಡ್ಡಳಿಯಂಥ ತಾಲಾನುಗಬಂಧಗಳಲ್ಲಿ ತಾಲವೇ ಮುಖ್ಯ. ಗಾನ ಸಮಯದಲ್ಲಿ ಅರ್ಥಸ್ಫೂರ್ತಿ ಕೆಡದಂತೆ ಅಕ್ಷರಗಳನ್ನು ಎಳೆದು ಸಂಕುಚಿಸಿ ಅಷ್ಟು ಕಾಲ ಮೌನದಿಂದಿದ್ದು ಮಾತ್ರೆಗಳ ನ್ಯೂನಾಧಿಕ್ಯವನ್ನು ತುಂಬಿಕೊಂಡು ಧಾಟಿ ತಾಲಗಳಿಗೆ ತೂಗಿಸಿಕೊಳ್ಳಬೇಕಾಗುವುದು".

ಇಲ್ಲಿ ಗಮನಿಸಬೇಕಾದ ಅಂಶಗಳು ಎರಡಿವೆ:–

ಮೊದಲನೆಯದಾಗಿ ಡಾ॥ ಕೆ. ಕೃಷ್ಣಮೂರ್ತಿಗಳು ಪಂಜರಿಕಾ ಶಬ್ದರೂಪದ ಮೂಲದ ಬಗ್ಗೆ ಅನುಮಾನ ಮುಂದಿಟ್ಟಿದ್ದಾರೆ. ಚಿಟಗುಪ್ಪಿಯವರಿಗೆ ಅನುಮಾನವೇ

ಇಲ್ಲ. ಕನ್ನಡದ ನಿಘಂಟುಗಳಲ್ಲಿ ಈ ಶಬ್ದ ಇಲ್ಲ. ಒಂದೆರಡು ಸಂಸ್ಕೃತ ನಿಘಂಟು ಗಳಲ್ಲೂ ಈ ಶಬ್ದ ಇಲ್ಲ. ಇದು ಇತರ ಯಾವ ಕೃತಿಗಳಲ್ಲೂ ಕಂಡುಬರುತ್ತದೆಯೇ ? ಏಕೆಂದರೆ ಚಿಟಗುಪ್ಪಿ ಅವರು 'ಕ್ವಚಿತ್ತಾಗಿ ಕಂಡುಬರುತ್ತೆ' ಎಂದಿದ್ದಾರೆ.

ಇನ್ನು ಚಿಟಗುಪ್ಪಿ ಅವರು ಭಜಗೋವಿಂದಂ ಪದ್ಯದ ಸಾಲಿನಲ್ಲಿ ಎರಡು ಮಾತ್ರೆ ಕೊರತೆ ತೋರಿಸಿದ್ದಾರೆ. ಅವರು ಕೊಟ್ಟಿರುವ ಪಾಠ ಅಪಪಾಠ. ಏಕೆಂದರೆ ಬಹುತೇಕ ಪ್ರಸಿದ್ಧ ಪ್ರಕಟನೆಗಳಲ್ಲಿ ಸಿಗುವ ಪಾಠ ಹೀಗಿದೆ.

— —   — —   UU—   — —

ಸಂಪ್ರಾ । ಪ್ತೇ ಸ । ನ್ನಿಹಿತೇ । ಕಾಲೇ ।

ಕಾಲೇ ಬದಲು ಮರಣೇ ಎಂಬ ಪಾಠಾಂತರವೂ ಇದೆ. ಆ ಪದವಿದ್ದರೂ ಮಾತ್ರಾ ವ್ಯತ್ಯಾಸವಾಗದು. ಆದ್ದರಿಂದ ಪಂಜರಿಕಾ ಛಂದಕ್ಕೆ ಅನುಗುಣವಾಗಿ ನಾಲ್ಕು ಮಾತ್ರೆಗಳ ನಾಲ್ಕುಗಣ ಇಲ್ಲಿದೆ. ಮಾತ್ರಾ ನ್ಯೂನತೆ ಇಲ್ಲ. ಚಿಟಗುಪ್ಪಿ ಅವರಿಗೆ ಸಿಕ್ಕ ಪಾಠ ಶುದ್ಧವಿಲ್ಲದಿದ್ದರಿಂದ ಅವರು ಆ ಬಗ್ಗೆ ಚರ್ಚಿಸಿದ್ದಾರೆ ಅಷ್ಟೆ. ಆದ್ದರಿಂದ ಪ್ರಾಪ್ತೇ । ಸನ್ನಿಹಿ । ತೇಮರ । ಣೇ XX ಎಂಬ ಪಾಠ ಸರಿಯಲ್ಲ.

೨. ಬನಹಟ್ಟಿ ಸ್ಥಳನಾಮ ವಿಚಾರ

ಡಾ॥ ಸಂಗಮೇಶ ಬಿರಾದಾರ ಅವರು 'ಜಯವಂತ' ಎಂಬ ಸಂಭಾವನಾ ಗ್ರಂಥ ವನ್ನು ದಿ॥ ಡಾ॥ ಜೆ. ಎಸ್. ಕುಳ್ಳಿಯವರ ಸ್ಮಾರಕ ಗ್ರಂಥವನ್ನಾಗಿ ಪ್ರಕಟಿಸಿದ್ದಾರೆ. (1987) ಬಿಜಾಪುರದ ಜಮುಖಂಡಿಯ ಗೆಳೆಯರ ಬಳಗ ತುಂಗಳ ಇವರು ಪ್ರಕ ಟಿಸಿದ್ದಾರೆ.

ಈ ಗ್ರಂಥದಲ್ಲಿ ಡಾ॥ ಜಯವಂತಕುಳ್ಳಿ-ಜೀವನ ಮತ್ತು ಸಾಧನೆ ಎಂಬ ಲೇಖನ ದಲ್ಲಿ ಡಾ॥ ಸಂಗಮೇಶ ಬಿರಾದಾರ ಅವರು '**ಬನ್ನಟ್ಟಿ-ಬನಹಟ್ಟಿ**' ಸ್ಥಳವನ್ನು ಕುರಿತು ಆ ಹೆಸರು ಬಂದ ಬಗೆಗೆ ಈ ಕೆಳಕಂಡ ಮಾತುಗಳನ್ನು ಹೇಳಿದ್ದಾರೆ.

(ಪು 2).... "ಇಂದು ಬನ್ನಟ್ಟಿ-ಬನಹಟ್ಟಿ ಜಮುಖಂಡಿ ತಾಲೂಕಿನಲ್ಲಿಯ ಒಂದು ಔದ್ಯೋಗಿಕನಗರ... ನೇಕಾರಿಕೆಯು ಇಲ್ಲಿ ಇಂದು ನಿನ್ನೆಯ ಉದ್ಯೋಗವಲ್ಲ. ಬಹುತರವಾಗಿ ಹಟ್ಟಿಯಿಂದಲೆ ಹುಟ್ಟಿ ಬಂದುದಾಗಿದೆ. ಇಂದು ಈ ನಗರವನ್ನು-ಬನ ಹಟ್ಟಿ ಎಂದು ಕರೆಯುತ್ತಿರುವುದರಿಂದ **ಮೂಲತಃ ಹಟ್ಟಿಯಾಗಿದ್ದು ಹಸಿರು ಮುರಿಯುವ ಬನವು ಸುತ್ತಲೂ ಇದ್ದುದರಿಂದ ಈ ಬನದಲ್ಲಿರುವ ಹಟ್ಟಿ-ಬನ ಹಟ್ಟಿಯಾಯಿತೆಂದು ಸಾಮಾನ್ಯವಾಗಿ ಹೇಳುವುದುಂಟು.**

(2) "ಬಿಲ್ವವೃಕ್ಷದಂತೆ ಬನ್ನಿಯ ಗಿಡವೂ ಪೂಜಾಯೋಗ್ಯವಾದುದು ; ಪವಿತ್ರ ವಾದುದು. ಶ್ರೀ ಕಾಡಸಿದ್ಧರು ಸಿದ್ಧಗಿರಿಯಿಂದ ಬಂದು ಕೆಲಸಮಯ ಬನ್ನಟ್ಟಿಯನ್ನು

ತಮ್ಮ ತಪೋ ಭೂಮಿಯನ್ನಾಗಿಸಿಕೊಂಡಿದ್ದರೆಂದು ಹೇಳಿಕೆ. ಈ ಸಮಯದಲ್ಲಿ ಅವರು ಬನ್ನಿಯ ಮರವನ್ನೇ ಆಶ್ರಯಿಸಿದ್ದರೆಂದೂ ಅದರಿಂದ ಬನ್ನಿಯ ಹಟ್ಟಿ-ಬನ್ನಟ್ಟಿಯಾಗಿರ ಬೇಕೆಂದೂ ಕೆಲವರ ತರ್ಕ.

(3) ಬಹುತರವಾಗಿ ಇಲ್ಲಿಯ ಪುರಾತನ ಮನೆತನ, ನಡೆದುಕೊಂಡು ಬಂದ ಉದ್ಯೋಗ ಇವುಗಳನ್ನು ನೋಡಿದರೆ ಮೇಲಿನ ಕಾರಣಗಳಿಂದ ವ್ಯತಿರಿಕ್ತವಾದ ಬೇರೆಯ ಕಾರಣವೇ ಇರಬೇಕೆಂದು ತೋರುತ್ತದೆ. ನೇಕಾರಿಕೆಯಲ್ಲಿ ಇಲ್ಲಿ ವಿಶೇಷವಾಗಿ ನಡೆಯುವುದು ಸೀರೆಯ ಉದ್ಯೋಗ. ಇದಕ್ಕೆ ವಿವಿಧ ರೀತಿಯ ಬಣ್ಣಗಳ ಆವಶ್ಯಕತೆಯಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಬಣ್ಣವನ್ನು ತಯಾರಿಸುವುದು ಒಂದಾದರೆ ನೂಲಿಗೆ ಬಣ್ಣ ಮಾಡುವುದು ಇನ್ನೊಂದು. ಗಿಡಮೂಲಿಕೆಗಳಿಂದ ಬಣ್ಣವನ್ನು ತಯಾರಿಸುವ ವಿದ್ಯೆ ನಮ್ಮ ಜನರಲ್ಲಿ ಇತ್ತು. ಗುಡ್ಡಗಾಡು ಪ್ರದೇಶವಾದ ಇಲ್ಲಿ ಈ ಕಾರ್ಯವು ನಡೆಯುತ್ತಿದ್ದಿತೆಂದು ತರ್ಕಿಸಿದರೆ ಅಸಮಂಜಸವೇನಲ್ಲ. ಇನ್ನು ಬಣ್ಣ ಹಾಕುವ ಕಾಯಕವಂತೂ ಇಲ್ಲಿ ಈಗಲೂ ನಡೆದೇ ನಡೆಯುತ್ತದೆ. ಬಣ್ಣಗಾರ-ಬಣಗಾರ ಎಂಬ ಅಡ್ಡ ಹೆಸರಿನ ಬಣ್ಣ ಮಾಡುವ, ಬಣ್ಣ ಹಾಕುವ ವೃತ್ತಿಯ ಮನೆತನಗಳು ಇಲ್ಲಿ ಇರುವುದು ಎಲ್ಲರಿಗೂ ತಿಳಿದ ವಿಷಯ. ಒಂದು ಚೀಲ ಬಣ್ಣ ತಯಾರಿಸಲು ಸುಮಾರು ಒಂದು ತಿಂಗಳು ಹಿಡಿಯುತ್ತಿತ್ತು ....ಇದೂ ಅಲ್ಲದೆ ಹಳ್ಳಿಗಳಲ್ಲಿ ಗುಳ್ಳವನನ್ನು ಆಡಲು ಹೋದಾಗ ಹೆಣ್ಣುಮಕ್ಕಳು ಕಡೂರು ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ (ಬನವಟ್ಟಿ) ಬಳ್ಳಾರಿಯ ಸೊಂಡೂರು ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ವಿಜಾಪುರದ ಜಿಲ್ಲೆಯಲ್ಲಿ ಇಂಡಿ ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ಸಿಂಧಗಿ ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ಹುನಗುಂದ ತಾಲ್ಲೂಕಿನಲ್ಲಿ (ಬನಹಟ್ಟಿ (ಬನ್ನಿಹಟ್ಟಿ) ಹೆಸರಿನ ಪ್ರದೇಶಗಳಿವೆ. ಇನ್ನೂ ಅನೇಕ ಕಡೆ ರೂಪಾಂತರ ಹೊಂದಿದ ಹೆಸರುಗಳು ಬನ್ನೂರು, ಬನಗಾಂವ, ಬನ್ನಿಬಾಗಿ, ಬನ್ನಿಕಲ್ಲು, ಬನ್ನಿಗೊಳ, ಬನ್ನಿಹಳ್ಳಿ, ಬನ್ನಿಕೊಪ್ಪ ಮೊದಲಾದ 'ಬನ್ನಿ' ಪದವನ್ನೊಳಗೊಂಡ ಹೆಸರುಗಳೂ ಬನ ಬಣ್ಣ, ಪದಗಳುಳ್ಳ ಹೆಸರಿನ ಪ್ರದೇಶಗಳು ಅಂತೆಯೇ ಹಟ್ಟಿ ಅಂತ್ಯಪದವನ್ನೊಳಗೊಂಡ ಅನೇಕ ಪ್ರದೇಶಗಳೂ ಕರ್ನಾಟಕದಲ್ಲಿ ಕಂಡುಬರುವುದು "ಕರ್ನಾಟಕ ಗ್ರಾಮಸೂಚಿ"ಯಿಂದ ತಿಳಿದು ಬರುತ್ತದೆ.

ಆದ್ದರಿಂದ ಬನ್ನಿ, ಹಟ್ಟಿ ಈ ಎರಡು ಪದಗಳನ್ನು ಒಳಗೊಂಡ ಪ್ರದೇಶಗಳಲ್ಲಿಯ ಸಾಂಸ್ಕೃತಿಕ ಇತಿಹಾಸದ ಅಧ್ಯಯನದ ಮೇಲೆ ಬನವಟ್ಟಿ ಬನ್ನಟ್ಟಿ ಹೆಸರುಗಳ ಹಿನ್ನೆಲೆಯನ್ನು ಅರ್ಥೈಸಬೇಕಾಗುತ್ತದೆ. ಈ ದೃಷ್ಟಿಯಿಂದ ಬಿರಾದಾರರು ತಿಳಿಸಿರುವ ಸ್ಥಳನಾಮದ ಹಿನ್ನೆಲೆಯ ಕಾರಣಗಳನ್ನು ಸಂಶೋಧಕರು ಗಮನಿಸಬೇಕಾದ ಅಗತ್ಯವಿದೆ. ಇದರಿಂದ ಹೊಸ ಸಂಗತಿಗಳು ಹೊರಬೀಳಬಹುದಾಗಿದೆ. 'ಬನ್ನಿ' ಗಿಡಗಳ ಹಿನ್ನೆಲೆ ಅಥವಾ ಹಟ್ಟಿ ಜನಾಂಗದವರು ವಾಸ ಮಾಡುತ್ತಿದ್ದ ಒಂದು ಗುಂಪು-ಬನ್ನಟ್ಟಿ ಬಣ್ಣ

ತಂದವಲ್ಲತ್ತಿಗೆ ಇನ್ನೊಂದು ಗುಂಪು-ಆದ ನಮ್ಮ ಹೆಣ್ಣಿಗೊಪ್ಪುದಿಲ್ಲತ್ತಿಗೆ ಎಂದು ಹಾಡುವುದನ್ನು ಕೇಳುತ್ತೇವೆ.

ಇದರಿಂದ ಬಣ್ಣಗಾರರ ಹಟ್ಟಿ-ಬಣ್‌ಹಟ್ಟಿ-ಬಣ್ಣಟ್ಟಿ ಎಂದಾಗಿ ಸುಭಗತೆಯಿಂದ 'ಬನ್ನಟ್ಟಿ' ಎಂದಾಗಿರಬೇಕು. ಅದೇ ಸುಧಾರಣೆಗೊಂಡು 'ಬನಹಟ್ಟಿ' ಎಂದು ಇಂದು ಕರೆಯಿಸಿಕೊಳ್ಳುತ್ತಿರಬೇಕು.

ಬಿರಾದಾರರು ಇರುವ ಪ್ರತೀತಿಗಳನ್ನೂ ತಮ್ಮ ಊಹೆಯನ್ನೂ ಸಾಕಷ್ಟು ತಾರ್ಕಿಕವಾಗಿ ಮುಂದಿಟ್ಟದ್ದರೂ ಈ ಸ್ಥಳನಾಮದ ಇತಿಹಾಸವನ್ನು ಬೇರೆ ದೃಷ್ಟಿಯಿಂದ ಪರಿಶೀಲಿಸುವ ಅಗತ್ಯವಿದೆ ಎನ್ನಿಸುತ್ತದೆ.

ಮೊದಲನೆಯದಾಗಿ ಬನಹಟ್ಟಿ-ಬನ್ನಿಹಟ್ಟಿ ಎಂಬ ಹೆಸರಿನ ಸ್ಥಳಗಳು ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿವೆ. ಅಲ್ಲಲ್ಲಾ ಆ ಸ್ಥಳದ ಹೆಸರು ಬರಲು ಕಾರಣವೇನು ಎಂಬುದನ್ನು ಗಮನಿಸುವುದು ಅಗತ್ಯವಾಗಿದೆ.

ಉದಾಹರಣೆಗೆ ಕಲ್ಬುರ್ಗಿಜಿಲ್ಲೆಯ ಅಫಜಲಪುರದ ತಾಲ್ಲೂಕಿನಲ್ಲಿ (ಬನಹಟ್ಟಿ). ಚಿತ್ತಾಪುರತಾಲ್ಲೂಕಿನಲ್ಲಿ (ಬನಹಟ್ಟಿ), ಸುರಪುರತಾಲ್ಲೂಕಿನಲ್ಲಿ (ಬನಹಟ್ಟಿ), ಧಾರವಾಡ ಜಿಲ್ಲೆಯಲ್ಲಿ ನರಗುಂದ ತಾಲ್ಲೂಕಿನಲ್ಲಿ (ಬನಹಟ್ಟಿ) ಬ್ಯಾಡಗಿ ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ಶಿಗ್ಗಾಂವ ತಾಲ್ಲೂಕಿನಲ್ಲಿ (ಬನ್ನಿಕೊಪ್ಪ, ಬನ್ನಿಹಟ್ಟಿ, ಬನ್ನೂರು) ಶಿರಹಟ್ಟಿತಾಲ್ಲೂಕಿನಲ್ಲಿ (ಬನ್ನಿಕೊಪ್ಪ) ಹಿರೇಕೆರೂರು ತಾಲ್ಲೂಕಿನಲ್ಲಿ (ಬನ್ನಿಹಟ್ಟಿ) ನೆಲೆ ; ಈ ಕಾರಣಗಳಿಗಿಂತ ಭಿನ್ನ ಕಾರಣಗಳು ಏನಿವೆ ಎಂಬುದು ತಿಳಿದು ಬರಲು ಶಕ್ಯವಿದೆ. ಅಂತೆಯೇ ಸ್ಥಳಗಳಲ್ಲಿ ಸ್ಥಳೀಯ ವೈಶಿಷ್ಟ್ಯಗಳ ಪಾತ್ರ ಹಾಗೂ ನೈಸರ್ಗಿಕ ಕಾರಣಗಳಿಂದ ಎಲ್ಲ ಕಡೆಗೂ ಈ ಹೆಸರು ವ್ಯಾಪಿಸುವ ಕಾರಣ ತಿಳಿದು ಬರುತ್ತದೆ. ಇತ್ತ ಕಡೆ ಸ್ಥಳನಾಮ ವಿದ್ವಾಂಸರ ಗಮನ ಸೆಳೆಯುವುದೇ ಈ ಟಿಪ್ಪಣಿಯ ಉದ್ದೇಶವಾಗಿದೆ.

—ಜಿ. ಅಶ್ವತ್ಥನಾರಾಯಣ

—o—

ಗ್ರಂಥ ವಿಮರ್ಶೆ

ವೃತ್ತ ವಿಲಾಸ ವೈಭವ :

'ವೃತ್ತ ವಿಲಾಸ ವೈಭವ'ವು ಛಂದೋವೈಚಿತ್ರ್ಯ, ಕಾವ್ಯವಿಲಾಸ ಮತ್ತು ಆಧ್ಯಾತ್ಮಿಕತೆಗಳು ಮುಪ್ಪುರಿಗೊಂಡಿರುವ ಒಂದು ಅಪೂರ್ವ ಕೃತಿ. ಬಹುಶಃ ಇದೇ, ಕನ್ನಡದಲ್ಲಿ, ಈ ತೆರದ ಮೊದಲನೆಯ ಗ್ರಂಥ. ಈ ಗ್ರಂಥದಲ್ಲಿ ನಾಲ್ಕು ಭಾಗಗಳಿವೆ.

ಮೊದಲನೆಯ ಭಾಗ 'ನಡೆದು ಬಂದ ಛಂದಸ್ಸು.' ಇದರಲ್ಲಿ ಬೇರೆ ಬೇರೆ ಪ್ರಸಿದ್ಧ ವೃತ್ತಗಳಲ್ಲಿ ರಚಿತವಾದ 8 ಶಿವಸ್ತೋತ್ರಗಳಿವೆ–3 ಅಷ್ಟಕಗಳು, 5 ಪಂಚಕಗಳು. ಇವುಗಳಲ್ಲಿ ಮೊದಲನೆಯದಾದ ಲಿಂಗಾಷ್ಟಕದ ಪ್ರತಿಪದ್ಯ 'ನಾಂ ಮನಸಾ ಶಿವ ಲಿಂಗಂ' ಎಂದು ಮುಕ್ತಾಯಗೊಳ್ಳುತ್ತದೆ. ದೋಧಕ ವೃತ್ತದಲ್ಲಿರುವ ಈ ಸ್ತೋತ್ರ 'ಬ್ರಹ್ಮಮುರಾರಿ ಸುರಾರ್ಚಿತಲಿಂಗಂ' ಎಂದು ಪ್ರಾರಂಭವಾಗುವ ಸಂಸ್ಕೃತದ ಲಿಂಗಾಷ್ಟಕದ ಧಾಟಿಯಲ್ಲಿದೆ. ಎಲ್ಲ ಸ್ತೋತ್ರಗಳೂ ಸರಳವೂ ಲಲಿತವೂ ಆದ ಕನ್ನಡದಲ್ಲಿವೆ.

ಎರಡನೆಯ ಭಾಗ 'ನವೋತ್ಪಾದ್ಯ ಛಂದಸ್ಸು.' ಈಗ ಉಪಲಬ್ಧವಿರುವ ಛಂದಶ್ಶಾಸ್ತ್ರ ಗ್ರಂಥಗಳಲ್ಲಿ ಮೊದಲನೆಯದಾದ ಪಿಂಗಳ ಛಂದಸ್ಸೂತ್ರದಲ್ಲಿ ಪ್ರತಿಪಾದದಲ್ಲಿ 1 ರಿಂದ 26 ರವರೆಗೆ ಅಕ್ಷರಗಳುಳ್ಳ ಉಕ್ತಾ, ಅತ್ಯುಕ್ತಾ ಮೊದಲಾದ 26 ಅಕ್ಷರ ಛಂದಸ್ಸುಗಳು ಹೇಳಲ್ಪಟ್ಟಿವೆ. ಒಂದೊಂದು ಮೇಳಕರ್ತರಾಗದಿಂದಲೂ ಹೇಗೆ ಅನೇಕ ಜನ್ಯರಾಗಗಳು ಹುಟ್ಟುವುವೋ ಹಾಗೆ ಪ್ರತಿ ಛಂದಸ್ಸಿನಿಂದಲೂ ಲಘು ಗುರು ವಿನ್ಯಾಸ ಭೇದದಿಂದ ಅನೇಕ ವೃತ್ತಗಳುಂಟಾಗುತ್ತವೆ. ಕವಿಗಳು ತಮಗೆ ರಂಜಕವೆಂದು ತೋರಿದ ಪ್ರಸ್ತಾರವುಳ್ಳ ವೃತ್ತಗಳಲ್ಲಿ ಪದ್ಯರಚನೆ ಮಾಡಿದ್ದಾರೆ. ಇವುಗಳಲ್ಲಿ ಕೆಲವು ಜನಪ್ರಿಯತೆಗಳಿಸಿ ಪ್ರಸಿದ್ಧವಾಗಿವೆ.

ಕುಮಾರ ನಿಜಗುಣರು 17, 19, 21, 22 ಮತ್ತು 23 ಅಕ್ಷರಗಳ ಪಾದಗಳುಳ್ಳ 13 ಹೊಸ ವೃತ್ತಗಳಲ್ಲಿ ರಚಿಸಿರುವ ಪಂಚಕಗಳೂ, ಅಷ್ಟಕವೂ ಈ ಭಾಗದಲ್ಲಿವೆ. ವೃತ್ತಗಳ ಹೆಸರುಗಳೂ ಅರ್ಥಗರ್ಭಿತವಾಗಿವೆ. ಉದಾಹರಣೆಗೆ, ಕನಕಪೇಹಿ, ನಾದನಾಟ್ಯ, ಖಗರಾಜಗತಿ. ಇವು ರಾಗಗಳ ಹೆಸರನ್ನು ನೆನಪಿಗೆ ತರುತ್ತವೆ. (ಗ್ರಂಥ

ಲೇ: ಕುಮಾರನಿಜಗುಣ, ಪ್ರ: ನಿಜಗುಣ ನಿಲಯ, ಚಿಲುಕವಾಡಿ, ಕೊಳ್ಳೆಗಾಲ ತಾಲ್ಲೂಕು ೫೭೧೪೪೦. ಪುಟಗಳು xxi + 89, ಬೆಲೆ ರೂ-30

ಕರ್ತರು ಇವುಗಳಲ್ಲಿ ಕೆಲವನ್ನು ಹಾಡಿ ತೋರಿಸಿರುವುದಾಗಿ ಗ್ರಂಥದ ಆದಿ ಭಾಗದಲ್ಲಿರುವ 'ಉಪಕಾರ ಸ್ಮರಣೆ'ಯಲ್ಲಿ ಹೇಳಿದ್ದಾರೆ.) ಒಂದು ವೃತ್ತದ ಹೆಸರು 'ಏಳುಮಲೆ ಮಾದೇವ.' ಈ ಹೊಸವೃತ್ತಗಳಲ್ಲಿ ಕೆಲವು ತಾಲಗತಿಗೆ ಹೊಂದುತ್ತವೆ. ಗ್ರಂಥ ಕರ್ತರು ಇವನ್ನು 'ಸತಾಲ ವೃತ್ತ'ಗಳೆಂದು ಕರೆದು 'ತೋಂ ತಕ ತೋಂ' ಇತ್ಯಾದಿ ಲಯ ವಿನ್ಯಾಸವನ್ನೂ ಸಹ ಪೀಠಿಕೆಯಲ್ಲಿ ಹೇಳಿದ್ದಾರೆ.

ಈ ಭಾಗದಲ್ಲಿರುವ ರಚನೆಗಳಲ್ಲಿ ಕೆಲವು ಸ್ತೋತ್ರಗಳು, ಗಿರಿಜಾ ಪಂಚಕ, ಪನ್ನಗವೇಣ್ಯಷ್ಟಕ ಮೊದಲಾದುವು ನೀತಿಬೋಧಕ ರಚನೆಗಳು. ಎಲ್ಲ ವೃತ್ತಗಳಿಗೂ ಅದೇ ವೃತ್ತದಲ್ಲಿ ರಚಿತವಾದ ಒಂದು ಪದ್ಯ ಪಾದದಲ್ಲಿ ಲಕ್ಷಣವನ್ನು ಕೊಟ್ಟಿದ್ದಾರೆ. ಛಂದಶ್ಶಾಸ್ತ್ರದಲ್ಲಿ 1 ರಿಂದ 26 ಅಕ್ಷರಗಳ ಛಂದಸ್ಸುಗಳಿಗೆ ಮಾತ್ರ ಹೆಸರುಗಳಿವೆ. 26 ಅಕ್ಷರದ ಛಂದಸ್ಸಿನ ಹೆಸರು 'ಉತ್ಕೃತಿ'. ಕುಮಾರ ನಿಜಗುಣರು 27 ಅಕ್ಷರದ ಛಂದಸ್ಸನ್ನು 'ಸತ್ಕೃತಿ' ಎಂದು ಕರೆದು, ಈ ಛಂದಸ್ಸಿನಲ್ಲಿ 108 ಶಿವಶರಣರ ಹೆಸರಿನಲ್ಲೂ ಒಂದೊಂದು ವೃತ್ತವನ್ನು ರಚಿಸಿದ್ದಾರೆ. ಪ್ರತಿವೃತ್ತಕ್ಕೆ ಮುಂಚೆ, ಅದೇ ವೃತ್ತಪಾದದಲ್ಲಿ ಲಕ್ಷಣವನ್ನು ಕೊಟ್ಟಿದ್ದಾರೆ. ಪ್ರತಿ ವೃತ್ತದಲ್ಲೂ ಕೊನೆಯ ಪಾದದಲ್ಲಿ ವೃತ್ತದ ಹೆಸರು ಬರುತ್ತದೆ. ಇದು 'ಶಿವಶರಣತಾರಾವರ್ಣಮಾಲಾ ವೃತ್ತಶತಕ'ವೆಂಬ ಮೂರನೆಯ ಭಾಗ. ಈ ಭಾಗದ ಕೊನೆಯಲ್ಲಿ 'ಮಹತ್ಕೃತಿ' ಎಂದು ಕರೆದಿರುವ 28 ಅಕ್ಷರದ ಛಂದಸ್ಸಿನ 'ನಿಜಗುಣ' ಎಂಬ ಹೆಸರಿನ ವೃತ್ತವಿದೆ.

'ಅತಿಧೃತಿಶತಂ' ಎಂಬ ಈ ಕೃತಿಯ ನಾಲ್ಕನೆಯ ಭಾಗದಲ್ಲಿ 19 ಅಕ್ಷರದ 'ಅತಿಧೃತಿ' ಛಂದಸ್ಸಿನ 108 ಹೊಸವೃತ್ತಗಳಿದ್ದು, ಪುರಾಣ ಕಥನ, ಭಕ್ತಿ ಇತ್ಯಾದಿ ಏಳು ಖಂಡಗಳಿವೆ. ಈ ವೃತ್ತಗಳಿಗೂ ಅದೇ ವೃತ್ತಪಾದದಲ್ಲಿ ಲಕ್ಷಣವನ್ನು ಕೊಟ್ಟಿದ್ದಾರೆ.

ಗ್ರಂಥದಲ್ಲಿನ ಎಲ್ಲ ವೃತ್ತಗಳಿಗೂ ಆಯಾ ಛಂದಸ್ಸಿನ ಪ್ರಸ್ತಾರಕ್ರಮದಂತೆ ವೃತ್ತಸಂಖ್ಯೆಯನ್ನೂ, ಆ ಛಂದಸ್ಸಿನ ಒಟ್ಟು ವೃತ್ತಗಳ ಸಂಖ್ಯೆಯನ್ನೂ ಕೊಟ್ಟಿದ್ದಾರೆ.

ಹೊಸಗನ್ನಡದಲ್ಲಿ ಅಕ್ಷರವೃತ್ತರಚನೆ ಸುಲಭವಲ್ಲ. ಆದರೂ ಈ ಕೃತಿಯಲ್ಲಿನ ಅನೇಕ ವೃತ್ತಗಳು ತಿಳಿಗನ್ನಡದಲ್ಲಿವೆ. ಉದಾಹರಣೆಗೆ–

ನೀಗುತ ಸಂತತ ಸರ್ವರ ಸಂಕಟ ಸಂತಸಗೊಳ್ಳುತಲುಂ
ಭೋಗಕೆ ಬಾಗದೆ ರೋಗದೊಳೇಗದೆ ರಾಗವ ಪಾಡುತಲುಂ
ಯೋಗದ ಸಿದ್ಧಿಯು ತನ್ನನು ತಾನರಿದಾಗಳೆಯೆನ್ನುತಲುಂ
ಬಾಗುತ ದೈವಕೆ ಯೌಗಿಕ ಜೀವನ ಸಾಗಿಸು ಹೇ ಮನುಜಾ

(ಗಿರಿಜಾ ಪಂಚಕ, ಪುಟ ೧೫)

ಮೂರನೆಯ ಮತ್ತು ನಾಲ್ಕನೆಯ ಭಾಗಗಳಲ್ಲಿನ ವೃತ್ತಗಳು ನಡುಗನ್ನಡದ ಚಂಪೂ ಶೈಲಿಯಲ್ಲಿವೆ. ಕೆಲವು ವೃತ್ತಗಳು ಸಂಸ್ಕೃತಪದಭೂಯಿಷ್ಠವಾಗಿವೆ. ಉದಾಹರಣೆಗೆ,

ಶ್ರೀಗುರು ಜಂಗಮಕಿಂಕರೀ ಸತ್ಯಧರ್ಮ ಸಾಕಾರರೂಪೇ ಸದಾಮಂಗಳ ಮಂತ್ರರತೇ
ಸಾಗರ ಸಾಮ್ಯಗಭೀರ ಶಾಂತೇ ನಿಜಾನುಸಂಧಾನ ನಿಷ್ಠಾಗರಿಷ್ಠೇ ಭಗವದ್ರಸಿಕೇ
ತ್ಯಾಗಮಯಾನ್ವಿತ ನಾದಬಿಂದುಸ್ವರೂಪ ಸಾಮ್ಯೇ ನಿಜಾನಂದ ಸಾರಾಮೃತ ಚಿತ್ಕಲಶೇ
ಭೋಗ ವಿರಾಗ ಸಮನ್ವಯಾಚಾರ ಶೀಲಸಂಪನ್ನ ಗಂಗಾಂಬಿಕೇ ವಂದಿಪೆ ನಾಂ ಸುಭಗೇ
(ಪುಟ ೩೮)

ಗ್ರಂಥದ ಮೊದಲಲ್ಲಿ, ಪ್ರಸಿದ್ಧ ಸಂಸ್ಕೃತ ಮತ್ತು ಕನ್ನಡ ವಿದ್ವಾಂಸರಾದ ಡಾ|| ಕೆ. ಕೃಷ್ಣಮೂರ್ತಿಯವರ ಪಾಂಡಿತ್ಯಪೂರ್ಣವಾದ ಮುನ್ನುಡಿಯಿದೆ. 'ಒಳನೋಟ' ವೆಂಬ ಹೆಸರಿನ ಪೀಠಿಕೆಯಲ್ಲಿ ಗ್ರಂಥಕರ್ತರು ಛಂದಸ್ಸಿನ ವಿಷಯವಾಗಿ ದೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ. ಛಂದೋಬದ್ಧ ಪದ್ಯರಚನೆಯ ಕಡೆಗೆ ಆಧುನಿಕ ಕವಿಗಳು ತೋರುತ್ತಿರುವ ಅನಾದರವನ್ನು ಹಿಂದಿನ ಕಾವ್ಯಗಳ ಬಗೆಗೆ ಅನೇಕ ಕಲಿತವರು ತೋರುವ ತಿರಸ್ಕಾರಭಾವವನ್ನು ಕಂಡು ನೊಂದಿರುವ ಕುಮಾರನಿಜಗುಣರು ಇನ್ನು ಕೆಲವೇ ವರ್ಷಗಳಲ್ಲಿ ಛಂದೋಬದ್ಧ ರಚನೆಗಳು ಮತ್ತೆ ವಿಜೃಂಭಿಸುತ್ತವೆ ಎಂಬ ದೃಢ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಪುಸ್ತಕ ಅಂದವಾಗಿ ಅಚ್ಚಾಗಿದೆ. ಮುದ್ರಣದ ತಪ್ಪುಗಳು ವಿರಳವಾದರೂ, ಅಲ್ಲಲ್ಲಿ ಕೆಲವು ಉಳಿದುಕೊಂಡಿವೆ. ೩೧ನೆಯ ಪುಟದಲ್ಲಿ, 'ಅಲ್ಲಮ' ವೃತ್ತದ ಕೊನೆಯ ಪಾದದಲ್ಲಿ 'ನಿರಘಂ' ಎಂಬ ಪದದ ಹಿಂದೆ 'ನಿರಾಳಂ' ಎಂಬ ಪದವಿರಬೇಕು. 'ಕನಕ ದೇಹಿ' (ಪುಟ ೧೬) ಮತ್ತು 'ತ್ರಿಶೂಲಿ' (ಪುಟ ೨೬) ಎಂಬ ವೃತ್ತಗಳ ಹೆಸರಿನ ಮುಂದೆ ಕೊಟ್ಟಿರುವ ಆ ಛಂದಸ್ಸಿನ ಒಟ್ಟು ವೃತ್ತಗಳ ಸಂಖ್ಯೆಗಳು ತಪ್ಪಾಗಿ ಅಚ್ಚಾಗಿವೆ.

ಸಾಮಾನ್ಯ ಓದುಗರಿಗೂ, ವಿದ್ವಾಂಸರಿಗೂ ಸಹ ಉಪಯುಕ್ತವಾದ ಇಂತಹ ಉತ್ತಮ ಕೃತಿಯನ್ನು ರಚಿಸಿ ಕುಮಾರ ನಿಜಗುಣರು ಕನ್ನಡಿಗರಿಗೆ ಅತ್ಯಂತ ಉಪಕಾರ ಮಾಡಿದ್ದಾರೆ. ಓದುಗರು ಇದರ ಪೂರ್ಣ ಉಪಯೋಗವನ್ನು ಪಡೆಯುವರೆಂದು ನಂಬಿದ್ದೇನೆ.

—ಗರ್ಗೇಶ್ವರಿ ವೆಂಕಟಸುಬ್ಬಯ್ಯ

ಶ್ರೀ ರಾಮಚರಿತ ಮಾನಸ–ಮಕರಂದ ವ್ಯಾಖ್ಯೆ (ಬಾಲಕಾಂಡ-ಸಂಪುಟ–೧)

ವಿದ್ಯಾ ಭೂಷಣ, ಡಾ|| ಎಂ. ಕೆ. ಭಾರತೀರಮಣಾಚಾರ್ಯರು ಬರೆದಿರುವ ಶ್ರೀ ರಾಮಚರಿತ ಮಾನಸದ ಮಕರಂದ ವ್ಯಾಖ್ಯೆ ಒಂದು ಅದ್ಭುತ ಮೇರು ಕೃತಿ. ಮಕರಂದ ವ್ಯಾಖ್ಯಾನದ ಪಂಕ್ತಿ ಪಂಕ್ತಿಯಲ್ಲಿ ಆಚಾರ್ಯರ ಮಾನಸ ಮಂದಾರದ ಭಕ್ತಿ

ಪ್ರ: ಶ್ರುತಿ ಪ್ರಕಾಶನ, 266/8, ೩ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು ೫೬೦ ೦೧೯, ಪುಟ–೫೬೦, ಬೆಲೆ ರೂ–125.00, 1994.

ಮಕರಂದ ಮಾಧುರ್ಯ ಸುಗಂಧವಿದೆ. ಡಾ|| ಭಾರತೀರಮಣಾಚಾರ್ಯರು, ಮಹಾ ವಿದ್ವಾಂಸರು, ಲೇಖಕರು ಮಾತ್ರ ಅಲ್ಲ, ತಮ್ಮ ಸಂಪೂರ್ಣ ಜೀವನವನ್ನೇ ದೇವರ ಸೇವೆಯಲ್ಲಿ ಮುಡುಪಾಗಿ ಇಟ್ಟಿರುವ ಮಹಾ ಭಕ್ತರು. ಮಹಾಭಕ್ತರಾದವರೇ ಇಂತಹ ಮಹಾ ವ್ಯಾಖ್ಯಾನ ಬರೆಯಬಲ್ಲರು. ಅನ್ಯರಿಂದ ಇಂತಹ ಅದ್ಭುತ ಕಾರ್ಯ ಸಾಧ್ಯವಿಲ್ಲ.

ತುಲಸೀದಾಸರ ಮಾನಸದ ಸಮಸ್ತ ವೈಶಿಷ್ಟ್ಯಗಳನ್ನು ಆಚಾರ್ಯರು ಮಕರಂದ ವ್ಯಾಖ್ಯೆಯಲ್ಲಿ ತೋರಿಸಿದ್ದಾರೆ.

ಬನಾರಸ್ ಋಣ

ಆಚಾರ್ಯರು ಬನಾರಸ್ ವಿಶ್ವವಿದ್ಯಾಲಯದಲ್ಲಿ ಓದಿ ಹಿಂದಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಆ ಕಾಶೀಪುರದ ಋಣ ಕಾಶೀಕವಿ ತುಲಸೀದಾಸರ ರಾಮಾಯಣಕ್ಕೆ 'ನ ಭೂತೋ ನ ಭವಿಷ್ಯತೀತಿ' ವ್ಯಾಖ್ಯಾನ ಬರೆದು ತೀರಿಸಿ ಕೊಂಡಿದ್ದಾರೆ. ಆಚಾರ್ಯರು ಸ್ವಯಂ ಕಾಶಿಯೆಂದರೆ ಪ್ರಕಾಶದ ನಗರ. ಆ ಪ್ರಕಾಶದ ಮಯೂಖಗಳಿಂದ ಜಾಜ್ಜ್ವಲ್ಯಮಾನವಾಗಿದೆ ಈ ಮೇರು ಕೃತಿ.

ಸನ್ಮಾನ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಹಿಂದೀ ವಿಭಾಗವನ್ನು ಸ್ಥಾಪಿಸಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ, ಅನೇಕ ಗ್ರಂಥಗಳನ್ನು ಬರೆದು ಹಲವಾರು ಸಂಸ್ಥೆಗಳಿಂದ ಸನ್ಮಾನವನ್ನು ಪಡೆದ ಡಾ|| ಭಾರತೀರಮಣಾಚಾರ್ಯರು ಪ್ರಸ್ತುತ 'ಮಕರಂದ' ಮಹಾಮೇರುಕೃತಿ ಬರೆದು ವಿಶ್ವದ ಸರ್ವೋಚ್ಚ ಸನ್ಮಾನಕ್ಕೆ ಅರ್ಹರಾದರು. ಇಂತಹ ಗ್ರಂಥಕ್ಕೆ ಜ್ಞಾನಪೀಠ ಪುರಸ್ಕಾರ ಸಿಗಬೇಕು. ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ಆಚಾರ್ಯರಿಗೆ ಸಿಗಬೇಕು. ಕನ್ನಡದ ಸರ್ವೋಚ್ಚ ಪುರಸ್ಕಾರ ಇದಕ್ಕೆ ಸಿಗಬೇಕು.

ತುಲಸೀ ಮಾನಸ

ತುಲಸೀದಾಸರ ಮಾನಸ-ಅಂದರೆ ಮನಸ್ಸು, ಆಚಾರ್ಯರ ಮಾನಸ ಎರಡಲ್ಲ- ಒಂದೇ. ಆದ್ದರಿಂದಲೇ ತುಲಸೀರಾಮಾಯಣದ ಸಮಸ್ತ ತತ್ವಗಳನ್ನು ಮಧುರಾತಿ ಮಧುರ ಶೈಲಿಯಲ್ಲಿ 'ಮಕರಂದ'ದಲ್ಲಿ ನಿರೂಪಿಸಿದ್ದಾರೆ ಆಚಾರ್ಯರು.

ಆನಂದಕಾನನ

ಮಹಾಪಂಡಿತ ಮಧುಸೂದನ ಸರಸ್ವತಿ ತುಲಸೀ ರಾಮಾಯಣ ಓದಿ ತುಲಸೀದಾಸರ ಬಗ್ಗೆ-

"ಆನಂದಕಾನನೇ ಹ್ಯಸ್ಮಿನ್ ತುಲಸೀ ಜಂಗಮಸ್ತರುಃ
ಕವಿತಾಮಂಜರೀ ಯಸ್ಯ ರಾಮಭ್ರಮರ ಭೂಷಿತಾ"

ಎಂದು ಹೇಳಿರುವ ಮಾತು ಆಚಾರ್ಯರ ಬಗ್ಗೆ ಅನ್ವಯಿಸುತ್ತದೆ. ಇದು ಮಂಜರಿ ಮಾತ್ರ ಅಲ್ಲ, ಆನಂದ ಕಾನನವೂ ಆಗಿದೆ.

ಪುಂಭಾವ ಸರಸ್ವತಿ

ಡಾ|| ಭಾರತೀರಮಣಾಚಾರ್ಯರು ಸಾರ್ಥಕನಾಮಧೇಯರು. ಬ್ರಹ್ಮದೇವರೇ ಅಲ್ಲ, ಪುಂಭಾವ ಸರಸ್ವತಿಯೂ ಆಗಿದ್ದಾರೆ. ಅನ್ಯಥಾ ರಾಮಾಯಣದ ಏತದ್ವತ್ ವ್ಯಾಖ್ಯಾನ ರಚನಾಕಾರ್ಯ ಸಾಧ್ಯವಾಗುತ್ತಿರಲಿಲ್ಲ.

ವಿಶ್ವಕೋಶ

ರಾಮಾಯಣ ಪ್ರಸಂಗಗಳ ವ್ಯಾಖ್ಯೆ ಬರೆಯುವಾಗ ವಿಶ್ವದ ವಿಭಿನ್ನ ಭಾಷೆಗಳಲ್ಲಿರುವ ರಾಮಕಾವ್ಯಗಳ ಪ್ರಸಂಗಗಳನ್ನು ಉದ್ಧರಿಸಿ ತುಲಸೀದಾಸರ ಔಚಿತ್ಯವನ್ನು ನಿರೂಪಿಸಿದ್ದಾರೆ–ಆಚಾರ್ಯರು. ಅಷ್ಟೇ ಅಲ್ಲ ವ್ಯಾಖ್ಯಾನಕ್ಕೆ ವೈಶ್ವಿಕ ಆಯಾಮ ಕೊಡಲು ಆಚಾರ್ಯರು ವೇದ, ಪುರಾಣ, ಕಾವ್ಯ ನಾಟಕಾದಿ ಗ್ರಂಥಗಳಿಂದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕಲೆ, ಜ್ಞಾನ ವಿಜ್ಞಾನ ದರ್ಶನ, ಇತಿಹಾಸ ಮತ್ತಿತರ ಶಾಖೆಗಳ ಮಕರಂದ ಬಿಂದು ಸಂದೋಹವಾಗಿರುವ ಈ ವ್ಯಾಖ್ಯಾನ ಒಂದು ಅತಿನೂತನ ವಿಶಿಷ್ಟ ವಿಶ್ವಕೋಶ.

ಮಾನಸ ವಿಶ್ವಕೋಶ

ರಾಮಚರಿತ ಮಾನಸ ಕೇವಲ ಭಕ್ತಿಕಾವ್ಯವೇ ಅಲ್ಲ, ಶಕ್ತಿಕಾವ್ಯವೂ ಆಗಿದೆ. ಕಾವ್ಯಸೌಷ್ಠವ ದೃಷ್ಟಿಯಿಂದ ನೋಡಿದರೂ ಇಂತಹ ಅದ್ಭುತ ಕಾವ್ಯ ಹಿಂದಿಯಲ್ಲಿ ಬೇರೊಂದು ಇಲ್ಲ. ಮಾನಸದಲ್ಲಿರುವ ಭಕ್ತಿ, ದರ್ಶನ, ಕಾವ್ಯಕಲೆ, ವ್ಯವಹಾರ ಇವುಗಳಲ್ಲಿ ಎಲ್ಲಾ ತತ್ವಗಳನ್ನೂ ಪ್ರಕಾಶಕ್ಕೆ ತಂದಿರುವ ಮಕರಂದ ವ್ಯಾಖ್ಯೆ ಮಾನಸದ ವಿಶ್ವಕೋಶವಾಗಿದೆ.

ಅತಿಮಂಜುಲ

ತುಲಸೀದಾಸರು ತಮ್ಮ ರಾಮಾಯಣದ ಬಗ್ಗೆ ತಾವೇ ಹೇಳಿಕೊಂಡಿದ್ದಾರೆ. ಇದು ನಾನಾ ಪುರಾಣ ನಿಗಮಾಗಮಾದಿಗಳ ತತ್ವಗಳಿಂದ ಸಮನ್ವಿತವಾಗಿದೆ. ಅನ್ಯ ಶಾಖೆಗಳ ತತ್ವಗಳು ಇವರಲ್ಲಿವೆ. ಆತ್ಮಸುಖಕ್ಕಾಗಿ ತುಲಸೀದಾಸರು ಈ ರಾಮಾಯಣವನ್ನು ಅತಿ ಸುಂದರವಾಗಿ ದೇಶಭಾಷೆಯಲ್ಲಿ ಬರೆದಿರುವರು.

ನಾನಾ ಪುರಾಣ ನಿಗಮಾಗಮ ಸಮ್ಮತಂ ಯ । ದ್ರಾಮಾಯಣೇ
ನಿಗದಿತಂ ಕ್ವಚಿದನ್ಯತೋಽಪಿ ॥ ಸ್ವಾಂತಃ ಸುಖಾಯ ತುಲಸೀ
ರಘುನಾಥ ನಾಥಾ । ಭಾಷಾ ನಿಬಂಧಮತಿ ಮಂಜುಲ ಮಾತನೋತಿ ॥

ಆಚಾರ್ಯರ ಮಕರಂದ ವ್ಯಾಖ್ಯಾನದಲ್ಲಿ ನಾನಾ ಪುರಾಣ ನಿಗಮಾಗಮ ಸಮ್ಮತ ತತ್ವಗಳಿವೆ. ತುಲಸೀ ರಾಮಾಯಣದ ಸಾರ ಸರ್ವಸ್ವವಿದೆ. ಅನ್ಯ ಜ್ಞಾನ ಶಾಖೆಗಳ ತತ್ವಗಳಿವೆ. ಎಲ್ಲವನ್ನೂ ಕೂಡಿಸಿ ಆಚಾರ್ಯರು ಅತಿಮಂಜುಲವಾಗಿ ಸಮರ್ಪಿಸಿದ್ದಾರೆ–ದೇವರಿಗೆ, ನರನಾರಾಯಣರಿಗೆ, ಭಕ್ತರಿಗೆ.

ಕನ್ನಡಕ್ಕೆ ಹೊಸ ಕಾಣಿಕೆ

ವ್ಯಾಖ್ಯೆಯ ವಿಭಿನ್ನ ತತ್ವಗಳನ್ನು ಅನುಸರಿಸಿ ವಿವಿಧ ಕಾವ್ಯ ರಹಸ್ಯಗಳನ್ನು, ಭಕ್ತಿ ವೈಶಿಷ್ಟ್ಯಗಳನ್ನು ಬೆಳಕಿಗೆ ತಂದಿರುವ ಇಂತಹ ವ್ಯಾಖ್ಯಾನ ಗ್ರಂಥವನ್ನು ನಾನು ಕನ್ನಡದಲ್ಲಿ ಇತ್ತೀಚೆಗೆ ನೋಡಲಿಲ್ಲ. ಇದು ಕನ್ನಡಕ್ಕೆ ಹೊಸಕಾಣಿಕೆ. ಹಿಂದೀ ಸಾಹಿತ್ಯದ ಸರ್ವಶ್ರೇಷ್ಠ ಗ್ರಂಥವೆನಿಸಿಕೊಂಡಿರುವ ರಾಮಚರಿತ ಮಾನಸದ ಸಾರ ಸರ್ವಸ್ವವನ್ನು ಮಕರಂದದ ಮೂಲಕ ಆಚಾರ್ಯರು ಕನ್ನಡಕ್ಕೆ ಕೊಟ್ಟಿರುವರು.

ಭಕ್ತಿಪ್ರಚಾರ

'ಮಕರಂದ' ದಿಂದ ಸಾಹಿತ್ಯ ಸೇವೆಯೇ ಅಲ್ಲ, ಲೋಕ ಸೇವೆಯೂ ಆಗಿದೆ. ಭಕ್ತಿ ಮಾನವ ಜಾತಿಯ ಅಭೂತಪೂರ್ವ ಶಕ್ತಿ ; ಅ ಲೋಕದ ಶಕ್ತಿ. ಇಂತಹ ಭಕ್ತಿಯ ಶಕ್ತಿ ಮಕರಂದದಿಂದ ನಮಗೆ ಸಿಗುತ್ತದೆ. ಮಹಾ ಭಕ್ತಾಗ್ರೇಸರರಾದ ಡಾ|| ಭಾರತೀ ರಮಣಾಚಾರ್ಯರ ಈ ಕೃತಿ ಪಾಠಕರ ಮಾನಸಗಳಲ್ಲಿ ಭಕ್ತಿ ಸುಧಾಸ್ರವವನ್ನು ಹುಟ್ಟಿಸಿ ನೂತನ ಜೀವಶಕ್ತಿಯನ್ನು ಕೊಡುತ್ತದೆ.

'ಮಕರಂದ'ದ ಒಂದೊಂದು ಶಬ್ದ ಆಚಾರ್ಯರ ಮನಸ್ಸಿನಿಂದ ಬಂದಿದೆ.

ಹಿಂದಿಯಲ್ಲಿ ಅನುವಾದವಾಗಬೇಕು

ಮಾನಸದ ಇಂತಹ ವ್ಯಾಖ್ಯೆ ಹಿಂದಿಯಲ್ಲಿಯೂ ಇಲ್ಲ. 'ಮಕರಂದ'ದ ಅನುವಾದ ಹಿಂದಿಯಲ್ಲಿ ಆದರೆ ತುಲಸೀದಾಸರ ಕಾವ್ಯಸೌಂದರ್ಯದ ಮತ್ತು ಭಕ್ತಿಯ ಅನೇಕಾನೇಕ ತತ್ವಗಳು ಎಲ್ಲರಿಗೂ ಗೊತ್ತಾಗುತ್ತವೆ. ಸಮಸ್ತ ಭಾರತೀಯ ಭಾಷೆಗಳಲ್ಲಿ, ಇಂಗ್ಲೀಷಿನಲ್ಲಿ ಇದರ ಅನುವಾದವಾಗಬೇಕು.

ಆಚಾರ್ಯರು ಯಾರು ?

ವ್ಯಾಖ್ಯೆ ಓದಿದ ಅನಂತರ ನಾನು ಯೋಚಿಸ ತೊಡಗಿದೆ:- ಯಾರು ನಮ್ಮ ಆಚಾರ್ಯರು ? ಇವರು ತುಲಸೀ ದಾಸರೇ ? ಮಧ್ವಾಚಾರ್ಯರೇ ? ಮಲ್ಲಿನಾಥ ಸೂರಿಯವರೇ ? ಇವರೆಲ್ಲರ ಅಂಶಗಳುಳ್ಳವರೆಂದು ತೀರ್ಮಾನಿಸಿಕೊಂಡೆ. ರವಿ ಕಾಣದ್ದನ್ನು ಕವಿ ಕಂಡ, ನಿಜ. ಕವಿಯೂ ಕಾಣದ್ದನ್ನು ವ್ಯಾಖ್ಯಾನಕಾರರು ಆಚಾರ್ಯರು ಕಂಡರು. ಇದು ಮಾನಸ ದರ್ಪಣ. ರೆವರೆಂಡ್ ಫಾದರ್ ಡಾಕ್ಟರ್ ಕಾಮಿಲ್‌ಬುಲ್ಕೆ ಅವರ 'ರಾಮಕಥೆ' ಗ್ರಂಥದ ತೂಕ ಮಕರಂದದಲ್ಲಿ ಇದೆ.

ವ್ಯಾಖ್ಯಾನದ ವಿಶೇಷಗಳು :

(1) ಸರಳ ಶೈಲಿ

ಮಕರಂದ ವ್ಯಾಖ್ಯಾನ ಮಂದಾರ ಮಕರಂದ ಮಾಧುರ್ಯ ಸಮನ್ವಿತ ಶೈಲಿ ಅತ್ಯಂತ ರೋಚಕವಾಗಿದೆ.

(2) ಉಪಶೀರ್ಷಿಕೆಗಳು

ಆಚಾರ್ಯರು ಪ್ರಸಂಗಾನುರೂಪ ಶೀರ್ಷಿಕೆಗಳನ್ನು ಕೊಟ್ಟಿರುವರು. ಯಥಾ ಕವಿವಂದನಾ ಪ್ರಕರಣ, ಉಮಾಮಹೇಶ್ವರ ಸಂವಾದ ಇತ್ಯಾದಿ.

ಸ್ಥಾನ ವಿವರಣ

ಕವಿನಾಶಾ, ಕರ್ಮನಾಶಾ ನದಿ ಬಿಹಾರದಲ್ಲಿದೆ. ಇದರ ಮತ್ತು ಇತರ ನದಿಗಳ ಮತ್ತು ಸ್ಥಳಗಳ ಪೂರ್ಣ ವಿವರಣೆಯನ್ನು ಆಚಾರ್ಯರು ನೀಡಿರುವರು.

ಸರಸ ಸುಂದರ ವ್ಯಾಖ್ಯಾನ

ಕೆಲವು ವ್ಯಾಖ್ಯಾನಗಳು ನಾರಿಕೇಳಪಾಕದಲ್ಲಿ ಇರುತ್ತವೆ. ಆ ವ್ಯಾಖ್ಯಾನಗಳಿಗೆ ಮತ್ತೆ ವ್ಯಾಖ್ಯಾನಗಳು ಬೇಕಾಗುತ್ತವೆ. ಆ ರೀತಿಯಲ್ಲಿ ಅಲ್ಲದೆ ಪ್ರಸ್ತುತ ಮಕರಂದ ವ್ಯಾಖ್ಯಾನ ಅತ್ಯಂತ ಸರಳವೂ ಸುಂದರವೂ ಆಗಿದೆ. ದ್ರಾಕ್ಷಾಪಾಕದಲ್ಲಿ ಇರುವ ಈ ವ್ಯಾಖ್ಯಾನ ಪಾಠಕರಿಗೆ ಆನಂದ ಮಕರಂದ ಬಿಂದು ಸಂದೋಹ ನೀಡುತ್ತದೆ.

ಭಕ್ತಿ ತತ್ವ

ಭಕ್ತಿ-ತತ್ವ ಈ ವ್ಯಾಖ್ಯಾನದ ಆತ್ಮವಾಗಿದೆ. ಪ್ರತಿಯೊಂದು ಛಂದಸ್ಸಿನ ವಿವೇಚನೆಯಲ್ಲಿಯೂ ಭಕ್ತಿ ತತ್ತ್ವಕ್ಕೆ ಪ್ರಧಾನಸ್ಥಾನ ನೀಡಿರುವುದರಿಂದ ಈ ವ್ಯಾಖ್ಯೆ ಭಕ್ತಿ ಭಂಡಾರವಾಗಿದೆ.

ಸಾಹಿತ್ಯಿಕ ದಾರ್ಶನಿಕ ತತ್ತ್ವಗಳು

ವರ್ಣಾನಾಂ ಅರ್ಥ ಸಂಘಾನಾಂ ರಸಾನಾಂ ಛಂದಸಾಮಪಿ
ಮಂಗಲಾನಾಂ ಚ ಕರ್ತಾರೌ ವಂದೇ ವಾಣೀ ವಿನಾಯಕೌ ॥

–ಇದು ಮಾನಸದ ಸರ್ವ ಪ್ರಥಮ ಶ್ಲೋಕ. ಇದರಲ್ಲಿ ವರ್ಣಗಳಿಗೂ, ಅರ್ಥಗಳಿಗೂ, ರಸಗಳಿಗೂ, ಛಂದಸ್ಸುಗಳಿಗೂ ಮಂಗಳವನ್ನುಂಟುಮಾಡುವ ವಾಣೀ ವಿನಾಯಕರಿಗೆ ಕವಿ ನಮಸ್ಕರಿಸುವರು. ಮಂಗಳಾಚರಣೆ ಬಗ್ಗೆ ಮಹಾಭಾಷ್ಯದಲ್ಲಿ ಹೇಳಿರುವ ಪಾತಂಜಲಿ ವಿಚಾರವನ್ನು ಭಾಷ್ಯಕಾರರು ಉಲ್ಲೇಖಿಸುತ್ತಾರೆ. ನಿರ್ವಿಘ್ನ ಕಾವ್ಯ ರಚನೆಗೆ ವಾಣೀವಿನಾಯಕರ ಅನುಗ್ರಹ ಪಡೆಯುವ ಕವಿ ಉದ್ದೇಶ್ಯವನ್ನು ಸ್ಪಷ್ಟಪಡಿಸಿದ್ದಾರೆ. ಅನುಷ್ಟುಪ್ ಛಂದಸ್ಸಿನಲ್ಲಿ ಕಾವ್ಯಾರಂಭ ಮಾಡಿರುವ ತುಲಸೀ

ದಾಸರು ವಾಲ್ಮೀಕಿಯ ಅವತಾರವೆಂದು ಘೋಷಿಸುತ್ತಾರೆ. ಛಂದಸ್ಸಿನ ಪ್ರತಿಪಾದದಲ್ಲಿ ಎಂಟು ವರ್ಣಗಳಿವೆ. ಎಂಟು ವರ್ಣಗಳಿಂದ ಅಷ್ಟಚಕ್ರವುಳ್ಳ ಅಯೋಧ್ಯೆಯನ್ನು ಕವಿ ವಂದಿಸಿರುವನೆಂಬ ರಹಸ್ಯವನ್ನು ಉದ್ಘಾಟಿಸುತ್ತಾರೆ. ಈ ಛಂದಸ್ಸಿನಲ್ಲಿ 32 ವರ್ಣಗಳಿವೆ. 32 ಲಕ್ಷಣಗಳಿಂದ ಕೂಡಿದ ರಾಮಚಂದ್ರ ಚರಿತ ವರ್ಣನೆ ಮುಂದೆ ಆಗುವುದೆಂದು ಈ 32 ವರ್ಣಗಳು ತಿಳಿಸುತ್ತಿವೆ ಎಂದು ಆಚಾರ್ಯರು ಹೇಳುತ್ತಾರೆ.

ವಕಾರ– 'ವರ್ಣಾನಾಂ' ಎಂದು ಆರಂಭವಾಗಿರುವ ಈ ಕವಿತೆಯ ವಕಾರವು ವಾಸುದೇವ ರೂಪೀ ಮೋಕ್ಷಪ್ರದ ಭಗವಂತನ ವಾಚಕವೆಂದು ತಿಳಿಸುತ್ತದೆ ಎಂದು ರಹಸ್ಯೋದ್ಘಾಟನ ಮಾಡುವರು. ಇದು ಮೋಕ್ಷಪ್ರದ ಶಾಸ್ತ್ರಸಮ ಕಾವ್ಯವೆಂದು ವಕಾರ ತಿಳಿಸುತ್ತದೆ.

ಈ ಶ್ಲೋಕದಲ್ಲಿ ವಾಣೀವಿನಾಯಕರನ್ನು ವಂದಿಸಿರುವರು. ಇವರ ಮಂತ್ರಗಳ ಬೀಜಾಕ್ಷರ ವಕಾರ, ಸಬೀಜ ಮಂತ್ರದಿಂದ ಇಷ್ಟಸಿದ್ಧಿ ಆಗುವುದೆಂದು ಆಚಾರ್ಯರು ತಿಳಿಸಿದ್ದಾರೆ. ಇದೇ ವಕಾರದಿಂದ ರಾಮಚರಿತ ಮಾನಸ ಕೊನೆಗೊಂಡಿದೆ.

ದಹ್ಯಂತಿ ನೋ ಮಾನವಾಃ–ಇದು ಪರಮ ಮಾಂಗಳಿಕ.

ಗಣರಹಸ್ಯ

ಆರಂಭದಲ್ಲಿ 'ವರ್ಣಾನಾಂ' ಎಂಬುದು ಮ–ಗಣ. ಮ–ಗಣಕ್ಕೆ ಅಭಿಮಾನಿ ದೇವತೆ ಭೂ-ಮಾತೆ. ಫಲ, ಐಶ್ವರ್ಯ. ಈ ಮ-ಗಣ ಪ್ರಯೋಗ ಈ ಗ್ರಂಥವು ಐಶ್ವರ್ಯಪ್ರದವೆಂದು ತಿಳಿಸುತ್ತದೆ. ಈ ರಹಸ್ಯವನ್ನು ಆಚಾರ್ಯರು ಉದ್ಘಾಟಿಸಿದ್ದಾರೆ. ಗ್ರಂಥದ ಕೊನೆಯಲ್ಲಿ ಮಾನವಾಃ ಶಬ್ದ–ರಗಣ. ಇಂಥ ಹಲವಾರು ರಹಸ್ಯಗಳನ್ನು ಆಚಾರ್ಯರು ತಿಳಿಸಿದ್ದಾರೆ.

ಈ ವಿಧವಾಗಿ ಪ್ರತಿಯೊಂದು ಪದ್ಯದಲ್ಲಿ ಇರುವ ದಾರ್ಶನಿಕ, ಧಾರ್ಮಿಕ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ರಹಸ್ಯಗಳನ್ನು ಸಮುದ್ಘಾಟಿಸಿ ರಾಮಚರಿತಮಾನಸದಲ್ಲಿ ಇರುವ ಭಕ್ತಿ ಮಕರಂದವನ್ನು ಡಾ|| ಭಾರತೀರಮಣಾಚಾರ್ಯರು ನಮಗೆ ಪ್ರಸಾದವಾಗಿ ಕೊಟ್ಟಿರುವರು. ಈ ವ್ಯಾಖ್ಯಾನ ಆಚಾರ್ಯರ ಅಕುಂಠಿತ ಭಕ್ತಿಗೆ ತಾರ್ಕಣ ನಿದರ್ಶನವಾಗಿರುತ್ತದೆ. ಇಂತಹ ಅದ್ಭುತ ವ್ಯಾಖ್ಯಾನ ಬರೆಯುವುದು ಭಕ್ತರಾಗಿರುವವರಿಂದಲೇ ಸಾಧ್ಯ. ಆಚಾರ್ಯರಿಗೆ ಶ್ರೀ ಆಂಜನೇಯಸ್ವಾಮಿ ಯಶಃ ಶ್ರೀ ಪ್ರಸಾದಿಸಲಿ. ಇಂತಹ ಅಪೂರ್ವ ಮೇರುಕೃತಿಯನ್ನು ಪ್ರಕಾಶಕ್ಕೆ ತರುವ ಶ್ರುತಿಪ್ರಕಾಶನದ ಕಾರ್ಯ ಶ್ಲಾಘನೀಯವಾಗಿದೆ.

—ಡಾ|| ಸರಗು ಕೃಷ್ಣಮೂರ್ತಿ

ಕನ್ನಡ ನಿಘಂಟುಶಾಸ್ತ್ರ ಪರಿಚಯ *

ಈ ಕೃತಿಯು ಪ್ರೊ|| ಶಿ. ಶಿ. ಬಸವನಾಳರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಲೇಖಕರು ಕೊಟ್ಟ ಉಪನ್ಯಾಸದ ಲಿಖಿತರೂಪ. ಕನ್ನಡದಲ್ಲಿ ಅನೇಕ ನಿಘಂಟುಗಳು ಪ್ರಕಟವಾಗಿದ್ದರೂ, ನಿಘಂಟುಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ ಬರುತ್ತಿರುವುದು ಇದೇ ಮೊದಲು.

"ಲೇಖಕನ ಅರಿಕೆ"ಯಲ್ಲಿ ಪ್ರೊ|| ವೆಂಕಟಸುಬ್ಬಯ್ಯನವರು, "ವಿಷಯದ ಕಿರುಪರಿಚಯವನ್ನು ಮಾಡಿಸಿ ನಮ್ಮ ಯುವ ವಿದ್ವಾಂಸರ ದೃಷ್ಟಿಯನ್ನು ಈ ಕಡೆಗೆ ಸೆಳೆಯಲು ಪ್ರಯತ್ನಪಟ್ಟಿದ್ದೇನೆ" ಎಂದು ಹೇಳಿದ್ದಾರೆ. ಆದರೆ ಯುವಕರಲ್ಲದ ವಿದ್ವಾಂಸರಲ್ಲೂ ನಿಘಂಟುಶಾಸ್ತ್ರ ಪರಿಚಯವಿರುವವರು ವಿರಳವಾದುದರಿಂದ ಈ ಗ್ರಂಥ ಎಲ್ಲ ವಿದ್ವಾಂಸರಿಗೂ ಉಪಕಾರಕವಾದುದು.

"ಅರಿಕೆ"ಯಲ್ಲಿ ಮುಂದೆ **ಶಬ್ದಶಕ್ತಿಪ್ರಕಾಶಿಕಾ** ಎಂಬ ಸಂಸ್ಕೃತ ಗ್ರಂಥದ ವ್ಯಾಖ್ಯಾನದಲ್ಲಿ ಉದಾಹರಿಸಿರುವ ಪ್ರಾಚೀನ ಶ್ಲೋಕವೊಂದನ್ನು ಕೊಟ್ಟು ಶಬ್ದಕ್ಕೆ ಅರ್ಥವನ್ನು ಹುಡುಕುವುದು ಹೇಗೆಂಬುದನ್ನು ವಿವರಿಸಿದ್ದಾರೆ.

ಸಂಸ್ಕೃತದ ವೈದಿಕನಿಘಂಟು, ನಿರುಕ್ತ ಮತ್ತು ಕೋಶಗ್ರಂಥಗಳ ವಿವರದೊಡನೆ ಗ್ರಂಥ ಆರಂಭವಾಗಿದೆ. ಮುಂದೆ ನಿಘಂಟುಶಾಸ್ತ್ರ ಮತ್ತು ನಿಘಂಟು ರಚನಾಶಾಸ್ತ್ರಗಳಿಗಿರುವ ಸಂಬಂಧವನ್ನು ನಿರೂಪಿಸಿ, ನಿಘಂಟುಗಳಲ್ಲಿ ಎಷ್ಟು ಮಾದರಿಗಳಿವೆ, ಅವುಗಳಲ್ಲಿರುವ ವಿವರಗಳೇನು ಎಂದು ಉದಾಹರಣೆಗಳೊಡನೆ ವಿವರಿಸಿದ್ದಾರೆ (ಪುಟ ೯-೧೪). ಅನಂತರ 'ಕನ್ನಡದಲ್ಲಿ ಶಬ್ದೋತ್ಪತ್ತಿಯ ಕ್ರಮ' (ಪುಟ ೧೫-೧೯) ಎಂಬ ಭಾಗದಲ್ಲಿ ಈ ಭಾಷೆಯ ಶಬ್ದ ಭಂಡಾರ ಹೇಗೆ ಬೆಳೆದಿದೆ ಮತ್ತು ಬೆಳೆಯುತ್ತಿದೆ ಎಂಬುದನ್ನು ಹೇಳಿದ್ದಾರೆ. ಈ ಭಾಗ ಎಷ್ಟು ಬೋಧಪ್ರದವೋ ಅಷ್ಟೇ ರಂಜಕವೂ ಆಗಿದೆ.

ಮುಂದೆ, ವಿಶಿಷ್ಟವಾದ ಉದ್ದೇಶವುಳ್ಳ, ವೈದ್ಯ, ವಿಜ್ಞಾನ ಮೊದಲಾದ ಶಾಸ್ತ್ರೀಯ ಪದಕೋಶಗಳ ವಿಷಯವನ್ನು ಪ್ರಸ್ತಾವಿಸಿ, ಅವುಗಳ ಅಗತ್ಯವನ್ನೂ, ಆ ನಿಘಂಟುಗಳ ಮತ್ತು ಸಾಮಾನ್ಯ ನಿಘಂಟುಗಳ ವ್ಯಾಪ್ತಿಯನ್ನೂ ವಿವರಿಸಿದ್ದಾರೆ (ಪುಟ ೨೦-೨೨)

"ನಿಘಂಟು ರಚನೆ—ವಿವಿಧ ಹಂತಗಳು" ಎಂಬ ಏಳನೆಯ ಭಾಗವು ಈ ಗ್ರಂಥದ ಮುಖ್ಯ ಭಾಗ. ಇಲ್ಲಿ ಶಬ್ದಗಳ ಮತ್ತು ಪ್ರಯೋಗಗಳ ಸಂಗ್ರಹ, ಪಟ್ಟಿಕೆಗಳ ರಚನೆ, ಪರ್ಯಾಯ ರೂಪಗಳ ಜೋಡಣೆ, ಅರ್ಥನಿರ್ಧಾರ, ಪ್ರಯೋಗಗಳನ್ನು ಕಾಲಾನುಕ್ರಮ

ಲೇಖಕರು-ಪ್ರೊ|| ಜಿ. ವೆಂಕಟಸುಬ್ಬಯ್ಯ. ಪ್ರಕಾಶಕರು-ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩, ಪುಟಗಳು VI + ೧೦೩, ಬೆಲೆ ರೂ-೨೦, ೧೯೯೩.

ದಲ್ಲಿ ಜೋಡಿಸುವುದು, ಶಬ್ದಗಳ ವ್ಯುತ್ಪತ್ತಿಯನ್ನು ನಿರ್ಧರಿಸುವುದು, ಈ ಆರು ಹಂತಗಳಲ್ಲಿ ನಡೆಯಬೇಕಾದ ಕೆಲಸಗಳನ್ನು ಉದಾಹರಣೆಗಳ ಸಮೇತವಾಗಿ, ವರ್ಣಿಸಿದ್ದಾರೆ. (ಪುಟ ೨೮-೪೭) ಇದರಿಂದ ನಿಘಂಟು ರಚನೆ ಎಷ್ಟು ಶ್ರಮಸಾಧ್ಯವಾದ ಕೆಲಸವೆಂದು ಮನದಟ್ಟಾಗುತ್ತದೆ. ತಿಂಡಿ ತಿನ್ನುವವರಿಗೆ ತಿನಿಸುಗಳ ತಯಾರಿಕೆಯಲ್ಲಿ ಆಗುವ ಶ್ರಮವು ಹೇಗೆ ಗಮನಕ್ಕೆ ಬರುವುದಿಲ್ಲವೋ ಹಾಗೆ, ನಿಘಂಟನ್ನು ಉಪಯೋಗಿಸುವವರಿಗೆ ನಿಘಂಟುಕಾರನ ಶ್ರಮ ಗಮನಕ್ಕೆ ಬರುವುದಿಲ್ಲ.

ಮುಂದಿನ ೨೧ ಪುಟಗಳಲ್ಲಿ ಕೆಲವು ಇಂಗ್ಲಿಷಿನ ಮತ್ತು ಕನ್ನಡದ ನಿಘಂಟುಗಳಿಂದ ಆಯ್ದ ಪುಟಗಳ ಪ್ರತಿಕೃತಿಗಳು (Reproductions) ಇವೆ.

ಎಂಟನೆಯ ಭಾಗ–"ಕನ್ನಡ ನಿಘಂಟುಗಳ ಕಿರುಚರಿತ್ರೆ." ಇಲ್ಲಿ ಕ್ರಿಸ್ತಶಕ ಹತ್ತನೆಯ ಶತಮಾನದ 'ರನ್ನ ಕಂದ' ವೆಂಬ ನಿಘಂಟಿನಿಂದ ಆರಂಭಿಸಿ ಇಂದಿನ ವರೆಗಿನ ಬಹುತೇಕ ಎಲ್ಲ ಕನ್ನಡ ನಿಘಂಟುಗಳ ಸಂಕ್ಷಿಪ್ತ ವಿವರಗಳೂ, ಈಗ ಮುಗಿಯುವ ಹಂತದಲ್ಲಿರುವ, ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನ ಕೆಲವು ವಿವರಗಳೂ ಇವೆ.

ಕೊನೆಯಲ್ಲಿ ಆರು ಅನುಬಂಧಗಳಿವೆ.

ನಾಗವರ್ಮನು ತನ್ನ 'ಕಾವ್ಯಾವಲೋಕನ'ದಲ್ಲಿ "ಪ್ರತಿಭಾನಂ, ಕಾವ್ಯ ವಿದ್ಯಾ ಪ್ರಚಯ ಪರಿಚಯಂ, ವೃದ್ಧಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ" ಎಂದು ಹೇಳಿ, ಅದರ ಅರ್ಥವನ್ನೂ ವಿವರಿಸಿದ್ದಾನೆ. ಅಲ್ಲಿ ಕವಿತೆಗೆ ಕಾರಣಗಳೆಂದು ಹೇಳಿರುವ ಪ್ರತಿಭೆ, ಕಾವ್ಯಗಳ ಲೋಕ ವ್ಯವಹಾರದ ಮತ್ತು ಅನೇಕ ಶಾಸ್ತ್ರಗಳ ಪರಿಚಯ, ಶಾಸ್ತ್ರಜ್ಞರೊಡನೆ ವಿಚಾರ ವಿನಿಮಯದಲ್ಲಿ ಆಸಕ್ತಿ ಮತ್ತು ನಿರಂತರವಾದ ಅಭ್ಯಾಸ ಇವು ನಿಘಂಟು ರಚನೆಗೂ ಅತ್ಯವಶ್ಯಕ.

"ಶ್ರೇಷ್ಠ ನಿಘಂಟುಕಾರನಾಗಲು ಇರಬೇಕಾದ ಅರ್ಹತೆಗಳು" ಎಂಬ ಮೊದಲನೆಯ ಅನುಬಂಧದಲ್ಲಿ (ಪುಟ ೬೧, ೬೨) ಪ್ರೊ|| ವೆಂಕಟಸುಬ್ಬಯ್ಯನವರು ಇತರ ನಿಘಂಟುಕಾರರೊಡನೆ ಆಗಾಗ ನಡೆಸಿದ ಮಾತುಕತೆಗಳಿಂದಲೂ, ತಮ್ಮ ಸ್ವಂತ ಅನುಭವದಿಂದಲೂ ಮೂಡಿಬಂದಂತೆ, ನಿಘಂಟುಕಾರನಿಗಿರಬೇಕಾದ ಅರ್ಹತೆಗಳನ್ನು ತಿಳಿಸಿದ್ದಾರೆ. ಎಷ್ಟೇ ಅರ್ಹತೆ ಇದ್ದರೂ, ನಿಘಂಟುರಚನೆ ಮುಂದುವರಿದಂತೆಲ್ಲ, ನಿಘಂಟುಕಾರನೂ ಮಾನಸಿಕವಾಗಿ ಬೆಳೆಯುತ್ತ, ಅವನ ಅರ್ಹತೆಯೂ ಹೆಚ್ಚುತ್ತ ಹೋಗುತ್ತದೆ ಎನ್ನಬಹುದು.

ಎರಡನೆಯ ಅನುಬಂಧ–"ಒಂದು ನಿಘಂಟನ್ನು ಉಪಯೋಗಿಸುವುದು ಹೇಗೆ?" ಈ ಭಾಗವನ್ನು ನಿಘಂಟನ್ನು ಉಪಯೋಗಿಸುವ ಎಲ್ಲರೂ ಅವಶ್ಯವಾಗಿ ಓದಬೇಕು. ನಿಘಂಟುಗಳ ಪೂರ್ಣ ಪ್ರಯೋಜನ ಪಡೆಯಲು ಇದು ಸಹಕಾರಿಯಾಗುತ್ತದೆ.

ಕರಡಚ್ಚು ತಿದ್ದುವವರ ಕಣ್ತಪ್ಪಿಸಿ ಅನೇಕ ಮುದ್ರಣದ ತಪ್ಪುಗಳು ಉಳಿದುಕೊಂಡಿವೆ. ಚಾರಿತ್ರ್ಯಕ (ಪುಟ ೧೩, ೩೬, ೩೭ ಇತ್ಯಾದಿ), ಸೌಷ್ಟವ (ಪುಟ ೨೨), ಕಾಯಕ್ಲೇಷ (ಪುಟ ೪೪), ಕ್ರೋಢೀಕರಿಸಿ (ಪುಟ ೮೧) ಇವು ಕೆಲವು. ಇವು ಕ್ರಮವಾಗಿ, ಚಾರಿತ್ರಿಕ, ಸೌಷ್ಠವ, ಕಾಯಕ್ಲೇಶ, ಕ್ರೋಡೀಕರಿಸಿ ಎಂದು ಇರಬೇಕು. ೪೮-೬೮ ಪುಟಗಳಲ್ಲಿರುವ ಪ್ರತಿಕೃತಿಗಳು ಬಹಳ ಮಸಕಾಗಿದ್ದು ಅನೇಕ ಕಡೆ ಸಣ್ಣಾಕ್ಷರಗಳನ್ನು ಓದುವುದು ಕಷ್ಟಸಾಧ್ಯವಾಗಿದೆ. ಈ ಪ್ರತಿಕೃತಿಗಳನ್ನು, ಸ್ಪಷ್ಟವಾಗಿ ಕಾಣುವಂತೆ, ಇನ್ನಷ್ಟು ದೊಡ್ಡ ಆಕೃತಿಯಲ್ಲಿ ಮುದ್ರಿಸಬೇಕಾಗಿತ್ತು. ೩ನೇ ಪುಟದ ೧೩ನೆಯ ಸಾಲಿನಲ್ಲಿ ಮೊದಲಾಗುವ ವಾಕ್ಯ "ಛಂದಸ್ಸು ಆಯಾ ಮಂತ್ರಗಳ ಅಕ್ಷರ, ಪಾದ ವ್ಯವಸ್ಥೆ ಮುಂತಾದವುಗಳ ಪರಿಚಯ ಮಾಡಿಕೊಡುತ್ತದೆ" ಎಂದಿರಬೇಕು. ೭೬ನೆಯ ಪುಟದಲ್ಲಿ, ನಾಗವರ್ಮನ ಕಾಲ ಕ್ರಿ ಶ. ೧೧೪೫ರ ಬದಲು ಕ್ರಿ.ಶ. ೧೦೪೫ ಇರಬೇಕು. ಈ ಸಣ್ಣ ದೋಷಗಳನ್ನು ಮರುಮುದ್ರಣದಲ್ಲಿ ನಿವಾರಿಸುವರೆಂದು ನಂಬಿದ್ದೇನೆ.

ಪ್ರೊ|| ವೆಂಕಟಸುಬ್ಬಯ್ಯನವರ ದೀರ್ಘಕಾಲದ ನಿಘಂಟು ಸಂಪಾದಕತ್ವದ ಅನುಭವ ಈ ಗ್ರಂಥದಲ್ಲಿ ಎದ್ದು ಕಾಣುತ್ತದೆ. ಇಷ್ಟು ಉತ್ತಮವಾದ ಮತ್ತು ಉಪಯುಕ್ತವಾದ ಗ್ರಂಥವನ್ನು ಬರೆದ ಅವರೂ, ಗ್ರಂಥವನ್ನು ಪ್ರಕಾಶಪಡಿಸಿದ ಕರ್ನಾಟಕ ವಿಶ್ವವಿದ್ಯಾಲಯದವರೂ ಕನ್ನಡಿಗರಿಗೆ ತುಂಬ ಉಪಕಾರ ಮಾಡಿದ್ದಾರೆ. ಆಸಕ್ತರೆಲ್ಲರೂ ಈ ಗ್ರಂಥವನ್ನು ಓದಿ, ಅದರ ಉಪಯೋಗವನ್ನು ಪಡೆದು ಗ್ರಂಥಕರ್ತರ ಶ್ರಮವನ್ನು ಸಾರ್ಥಕಪಡಿಸುವರೆಂದು ನಂಬಿದ್ದೇನೆ.

ಕನ್ನಡ ನಿಘಂಟುಗಳ ಚರಿತ್ರೆಯನ್ನು ರಚಿಸುವ ದೃಷ್ಟಿಯಿಂದ, ತಾವು ವಿಷಯ ಸಂಗ್ರಹ ಮಾಡುತ್ತಿರುವುದಾಗಿ ಗ್ರಂಥಕರ್ತರು "ಅರಿಕೆ"ಯಲ್ಲಿ ಹೇಳಿದ್ದಾರೆ. ಆ ಗ್ರಂಥ ಶೀಘ್ರವಾಗಿ ಹೊರಬರುವುದೆಂದು ಆಶಿಸುತ್ತೇನೆ.

—**ಗರ್ಗೇಶ್ವರಿ ವೆಂಕಟಸುಬ್ಬಯ್ಯ**

ವಸ್ತು ಸಂಗ್ರಹ

ದಿನಾಂಕ ೧೧-೨-೯೫ರಂದು ಬೆಂಗಳೂರಿನ ಪುರಭವನದಲ್ಲಿ ಡಾ|| ಆರ್. ಸಿ. ಹಿರೇಮಠರ ೭೫ನೆಯ ಹುಟ್ಟುಹಬ್ಬವನ್ನು ಸಾಹಿತ್ಯ ಸಮಾರಂಭದ ರೂಪದಲ್ಲಿ ಆಚರಿಸಲಾಯಿತು. ಡಾ|| ಹಿರೇಮಠರ ಸಾಧನೆ ಸಿದ್ಧಿಗಳ ವಿಚಾರಸಂಕಿರಣ, ಅವರ ಆತ್ಮಕಥೆ- 'ಉರಿ ಬರಲಿ ಸಿರಿ ಬರಲಿ' ಎಂಬ ಗ್ರಂಥದ ಬಿಡುಗಡೆ ನೆರವೇರಿದವು. ಸಮಾರಂಭವು ಸಿದ್ಧಗಂಗಾಮಠದ ಡಾ|| ಶಿವಕುಮಾರ ಸ್ವಾಮಿಗಳ ಸನ್ನಿಧಿಯಲ್ಲಿ ಡಾ|| ಪು.ತಿ.ನ. ಅವರ ಅಧ್ಯಕ್ಷತೆಯಲ್ಲಿ ನೆರವೇರಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದ ಮಲ್ಲೇಶ್ವರದ ಕೇಶವನೃತ್ಯಶಾಲೆಯು ಕನ್ನಡ ಕಾವ್ಯ ಪರಂಪರೆ-ಎಂಬ ಯೋಜನೆಯನ್ನು ಕೈಗೊಂಡಿದೆ. ಈ ಯೋಜನೆಯಲ್ಲಿ ಪಂಪನಿಂದ ತಿರುಮಲಾರ್ಯನ ವರೆಗಿನ ೧೮ ಮಂದಿ ಕವಿಗಳ ಕಾವ್ಯಭಾಗಗಳನ್ನು ಕಿರು ನೃತ್ಯನಾಟಕಗಳಲ್ಲಿ ಪ್ರದರ್ಶಿಸಿ, ಕನ್ನಡದ ಸಾಹಿತ್ಯದ ಹಿರಿಮೆಯನ್ನು ಸಾರುವ ಕಾರ್ಯವಿರುತ್ತದೆ. ಇದರ ಪ್ರಾರಂಭವನ್ನು ದಿನಾಂಕ ೨೬-೨-೯೫ರಂದು ರವೀಂದ್ರಕಲಾಕ್ಷೇತ್ರದಲ್ಲಿ ಭರತ ಬಾಹುಬಲಿ ಪ್ರಸಂಗದಿಂದ ಮಾಡಲಾಗಿದೆ.

ನಾಗಸಿರಿ ಬಿಡುಗಡೆ · ಎಂಬತ್ತು ವರ್ಷ ತುಂಬಿದ, ಜಾನಪದ ಲೋಕದ ರೂವಾರಿ ೬೪ನೆಯ ಕನ್ನಡಸಾಹಿತ್ಯಸಮ್ಮೇಳನದ ಅಧ್ಯಕ್ಷ ಶ್ರೀ ಎಚ್. ಎಲ್. ನಾಗೇಗೌಡರ ಆತ್ಮಚರಿತ್ರೆ 'ನಾಗಸಿರಿ' (ಸಂಪುಟ ೧, ೨, ೩, ೪ ಐಬಿಎಚ್ ಪ್ರಕಾಶನ) ಬಿಡುಗಡೆಯ ಸಮಾರಂಭ, ಬೆಂಗಳೂರಿನ ಪುರಭವನದಲ್ಲಿ 28-2-95 ಸಂಜೆ ನೆರವೇರಿದೆ. ಡಾ|| ಹಾ. ಮಾ. ನಾಯಕರ ಅಧ್ಯಕ್ಷತೆ, ಮುಖ್ಯಮಂತ್ರಿ ಶ್ರೀ ಹೆಚ್. ಡಿ. ದೇವೇಗೌಡರಿಂದ ಪುಸ್ತಕ ಬಿತುಗಡೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಜಿ. ನಾರಾಯಣರಿಂದ ಅಭಿನಂದನೆ ಮತ್ತು ನಾಲ್ವರು ವಿದ್ವಾಂಸರಿಂದ ನಾಲ್ಕು ಸಂಪುಟಗಳನ್ನು ಕುರಿತು ಉಪನ್ಯಾಸಗಳಾದವು.

ರಾಷ್ಟ್ರಕವಿ ಗೋವಿಂಪ ಪೈ ಸಂಶೋಧನ ಕೇಂದ್ರದ ವತಿಯಿಂದ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ಉಡುಪಿ, ಮುದ್ದಣಮಂಟಪದಲ್ಲಿ ೧೧-೩-೧೯೯೫ರಂದು ಗೋವಿಂದ ಪೈಯವರ ಸಂಶೋಧನದ ಮಹಾಸಂಪುಟದ ಬಿಡುಗಡೆ. ಡಾ|| ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರುಗಿದೆ. ಡಾ|| ಶಿವರಾಮ ಕಾರಂತರಿಂದ ಗ್ರಂಥದ ಬಿಡುಗಡೆ. ಕಯ್ಯಾರ ಕಿಞ್ಞಣ್ಣ ರೈಗಳಿಂದ ಕವಿವಂದನೆ, ಬನ್ನಂಜೆ ಗೋವಿಂದಾಚಾರ್ಯರಿಂದ ಗ್ರಂಥ ಪರಿಚಯೋಪನ್ಯಾಸಗಳಾದವು.

ಡಾ|| ದೇ.ಜ.ಗೌ. ೭೫ ಅಭಿನಂದನೆಯ ಸಮಾರಂಭ ಬೆಂಗಳೂರು ಪುರಭವನದಲ್ಲಿ ೧೧-೩-೯೫ ರಂದು ಆಚರಿಸಲಾಗಿದೆ. ಈ ಸಂದರ್ಭದಲ್ಲಿ ೭೫ಮಂದಿ ವಿದ್ವಲ್ಲೇಖನಗಳನ್ನೊಳಗೊಂಡ ೮೩೮ ಪುಟಗಳ 'ಅಮೃತ ವರ್ಷ' ಎಂಬ ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ದೇ.ಜ.ಗೌ. ಅವರ ವ್ಯಕ್ತಿತ್ವ, ಸಾಧನೆ, ಸಾಹಿತ್ಯಗಳನ್ನು ಕುರಿತು ವಿಚಾರಸಂಕಿರಣವೂ ಇದ್ದಿತು.

ಮಹಾಕವಿ ರನ್ನನ 'ಅಜಿತ ತೀರ್ಥಂಕರ ಪುರಾಣ ತಿಲಕಂ' ಗ್ರಂಥದ ಸಹಸ್ರಮಾನೋತ್ಸವವನ್ನು ೨೨-೩-೧೯೯೫, ಸಂಜೆ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಜರಗಿಸಲಾಯಿತು. ಪ್ರೊ|| ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆ, ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರಿಗಳ ಉಪನ್ಯಾಸ. ಈ ಸಂದರ್ಭದಲ್ಲಿ ಶ್ರವಣಬೆಳ್ಗೊಳ ಜೈನಮಠದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳು ಪರಿಷತ್ತಿಗೆ ೨ಲಕ್ಷ ರೂ. ಗಳ ದತ್ತಿನಿಧಿಯನ್ನಿತ್ತರು. ಇದರಿಂದ ಪ್ರತಿವರ್ಷ ಚಾವುಂಡರಾಯ ಪ್ರಶಸ್ತಿಯನ್ನು ಕೊಡುವಂತಾಗಿದೆ. ಪ್ರಾಚೀನ ಜೈನಸಾಹಿತ್ಯವನ್ನು ಕುರಿತು ಕನ್ನಡದಲ್ಲಿ ಬರೆದ ಪ್ರಬಂಧ, ಸಂಶೋಧನೆ, ವಿಮರ್ಶೆ, ಕಾದಂಬರಿ, ನಾಟಕ, ಕಥಾ ಲೇಖಕರಿಗೆ ಅಥವಾ ಅಹಿಂಸೆ, ಸದಾಚಾರ, ನೈತಿಕ ಉತ್ಥಾನಕ್ಕೆ ಪ್ರೇರಕವಾಗುವ ಸೃಜನಾತ್ಮಕ ಕನ್ನಡ ಕೃತಿಗೆ ಈ ಪ್ರಶಸ್ತಿ ಸಲ್ಲುವುದೆಂದು ಘೋಷಿಸಲಾಗಿದೆ.

—o—

ಪ್ರತಿಷ್ಠಾನ ವಾರ್ತೆ

ಕುವೆಂಪು ಸ್ಮರಣೆ :

ಕಾರ್ಯಕ್ರಮಗಳು ಎಂದಿನಂತೆ ಪ್ರತಿ ತಿಂಗಳ 10ನೇ ತಾರೀಖಿನಂದು ನಡೆದುವು.

10.1.95ರಂದು ಆದರ್ಶ ಸಾಂಸ್ಕೃತಿಕ ಸಂಸ್ಥೆಯ ಕುಲಪತಿಗಳಾದ ಶ್ರೀ ಎಸ್. ಕೆ. ರಾಮಸ್ವಾಮಿ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಸುಪ್ರಸಿದ್ಧ ವಿಮರ್ಶಕ ಪ್ರೊ|| ಕೆ.ಎಸ್. ಭಗವಾನ್ ಅವರು "ಕುವೆಂಪು ಅವರ ಕಾದಂಬರಿಗಳು" ಎಂಬ ವಿಷಯವನ್ನು ಕುರಿತು ರಸವತ್ತಾದ ಭಾಷಣ ಮಾಡಿದರು. ಇದು ಎರಡನೇ ಕಾರ್ಯಕ್ರಮ.

10.2.95ರಂದು 3ನೆಯ ಕಾರ್ಯಕ್ರಮವು ನಡೆಯಿತು. ಪ್ರೊ|| ಆರ್. ಜಿ. ಕುಲಕರ್ಣಿಯವರು "ರಾಮಾಯಣ ದರ್ಶನಂ" ಕಾವ್ಯದಲ್ಲಿ "ಯೋಗಸ್ವರೂಪ" ಎಂಬುದನ್ನು ಕುರಿತು ಉಪನ್ಯಾಸ ಮಾಡಿದರು.

10.3.95ರಂದು ನಡೆದ 4ನೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ|| ಎಸ್. ಎಂ. ಚನ್ನಬಸವಣ್ಣ, ನಿರ್ದೇಶಕರು, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಇವರು ವಹಿಸಿದ್ದರು. ನಿಮ್ಹಾನ್ಸ್‌ನ ಅಶ್ವಿನಿ ಸಭಾಂಗಣದಲ್ಲಿ ಕಾರ್ಯಕ್ರಮವು ಏರ್ಪಾಡಾಗಿದ್ದಿತು. ಡಾ|| ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು "ನವೋದಯ ಸಾಹಿತ್ಯ ಸಂದರ್ಭದಲ್ಲಿ ಕುವೆಂಪು ಅವರ ವಿಶಿಷ್ಟತೆ" ಎಂಬ ವಿಷಯವನ್ನು ಕುರಿತು ಉಪನ್ಯಾಸ ನೀಡಿದರು.

ಈ ಮಾಲೆಯ 5ನೆಯ ಕಾರ್ಯಕ್ರಮವು ಮಲ್ಲೇಶ್ವರದ ಗಾಂಧೀ ಸಾಹಿತ್ಯ ಮಂದಿರದಲ್ಲಿ ನಡೆಯಿತು. ಪ್ರೊ|| ಎಚ್. ವಿ. ಶ್ರೀನಿವಾಸ ಶರ್ಮ ಅಧ್ಯಕ್ಷತೆ ವಹಿಸಿದ್ದರು. ಪ್ರೊ|| ಎಸ್. ಶ್ರೀನಿವಾಸನ್ ಅವರು "ಕುವೆಂಪು ಅವರ ಕಥನ ಕವನಗಳು" ಕುರಿತು ಉಪನ್ಯಾಸ ಮಾಡಿದರು. ಶ್ರೀ ರವಿಶೇಖರ್ ಅವರಿಂದ ಕುವೆಂಪುಗೀತೆಗಳ ವಾಚನ ಹಾಗೂ ಗಮಕಿ ಶ್ರೀ ಕಡಬ ಸುಬ್ರಹ್ಮಣ್ಯ ಅವರಿಂದ ಚಿತ್ರಾಂಗದಾ ಕಾವ್ಯ ವಾಚನಗಳು ನಡೆದದ್ದು ಸುಶ್ರಾವ್ಯವಾಗಿದ್ದಿತು.

10.5.95ರಂದು ಈ ಮಾಲಿಕೆಯ 6ನೆಯ ಕಾರ್ಯಕ್ರಮ ವಿಜಯನಗರದ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಕಾಲೇಜಿನಲ್ಲಿ ನಡೆದು ವಿದ್ಯಾಪೀಠದ ಕಾರ್ಯದರ್ಶಿ ಡಾ|| ಕೆ. ನಾಗೇಶ ಹತ್ವಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಸುಪ್ರಸಿದ್ಧ ಕವಿಗಳೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ

ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು 'ಕುವೆಂಪು–ವ್ಯಕ್ತಿ ಮತ್ತು ಸಾಹಿತ್ಯ' ಎಂಬ ವಿಷಯವನ್ನು ಕುರಿತು ವಿಚಾರ ಪರಿಪ್ಲುತ ಉಪನ್ಯಾಸ ನೀಡಿದರು.

ಸಾಹಿತ್ಯೋಪಾಸಕರು ಕಾರ್ಯಕ್ರಮ ಮಾಲೆ :

ಈ ಮಾಲೆಯ 12ನೆಯ ಕಾರ್ಯಕ್ರಮವು 22.1.1995ರಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಹಯೋಗದಲ್ಲಿ ನಡೆಯಿತು. ಪ್ರಸಿದ್ಧ ಸಾಹಿತಿಗಳಾದ ಶ್ರೀ. ಸಿ. ಕೆ. ನಾಗರಾಜ ರಾಯರು ಅಧ್ಯಕ್ಷತೆ ವಹಿಸಿದ್ದರು. ಬಿ. ವೆಂಕಟಾಚಾರ್ಯರ ಸಾಹಿತ್ಯ ಕುರಿತ ವಿಚಾರಗೋಷ್ಠಿಯನ್ನು ಶ್ರೀ ಬಿ. ಎಸ್. ಕೇಶವ ಅಯ್ಯಂಗಾರ್ಯರು ಉದ್ಘಾಟಿಸಿ ಮಾತನಾಡಿದರು. ಡಾ|| ಎಚ್. ಎಸ್. ಗೋಪಾಲರಾಯರು "ಬಿ. ವೆಂಕಟಾಚಾರ್ಯರ ಅನುವಾದಿತ ಕಾದಂಬರಿಗಳು" ಹಾಗೂ ಪ್ರೊ|| ಜಿ. ಅಬ್ದುಲ್ ಬಷೀರ್ ಅವರು ಬಿ. ವೆಂಕಟಾಚಾರ್ಯರ ಇತರ ಕೃತಿಗಳು" ಎಂಬ ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರು.

20.3.95ರಂದು ಈ ಮಾಲೆಯ 13ನೆಯ ಕಾರ್ಯಕ್ರಮವು ಪ್ರಸಿದ್ಧ ಸಾಹಿತಿ ಪಿ. ಆರ್. ಕರಿಬಸವ ಶಾಸ್ತ್ರಿಗಳ ಕೃತಿಗಳನ್ನು ಕುರಿತಾಗಿತ್ತು. ಮೈಸೂರಿನ ಶ್ರೀ ಜಿ. ಎ. ಶಿವಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದು ಶಾಸ್ತ್ರಿಗಳ ಕೃತಿಗಳನ್ನು ಕುರಿತು ಭಾಷಣ ಮಾಡಿದರು. ತುಮಕೂರಿನ ಡಾ|| ಬಿ. ನಂಜುಂಡಸ್ವಾಮಿ ಅವರು "ಶಾಸ್ತ್ರಿಗಳ ಜೀವನ ಮತ್ತು ಚರಿತ್ರೆಯ ಬಗೆಗೆ ಅವರ ಹೊಸ ಶೋಧನೆಗಳು" ಎಂಬುದನ್ನು ಕುರಿತು ಉಪಯುಕ್ತ ಮಾಹಿತಿಗಳನ್ನೊಳಗೊಂಡ ಉಪನ್ಯಾಸ ನೀಡಿದರು.

ಈ ಮಾಲೆಯ 14ನೆಯ ಕಾರ್ಯಕ್ರಮವು 29.6.95ರಂದು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಡೆಯಿತು. ಪ್ರೊ|| ಡಿ. ಲಿಂಗಯ್ಯನವರು ಸಂತ ಶಿಶುನಾಳ ಷರೀಫರನ್ನು ಕುರಿತು ಸ್ವಾರಸ್ಯ ಉಪನ್ಯಾಸ ನೀಡಿದರು.

ಸಹೃದಯ ಗೋಷ್ಠಿ :

24.2.95ರಂದು ರಾಜ್ಯಶಾಸ್ತ್ರದ ಉಪನ್ಯಾಸಕರಾದ ಶ್ರೀ ಪಿ. ಇ. ಸೋಮಯ್ಯನವರಿಂದ "ಬೆಂಗಳೂರಿನ ಪೊಲೀಸ್ ಇತಿಹಾಸ" ಎಂಬುದರ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

25.3.95ರಂದು ನಡೆದ ಕಾರ್ಯಕ್ರಮದಲ್ಲಿ ಶ್ರೀ ಆರ್. ನಟರಾಜ್ ತಲಘಟ್ಟಪುರ ಮತ್ತು ಶ್ರೀ ಜಿ. ವೆಂಕಟೇಶ್ ಅವರಿಂದ ಸ್ವರಚಿತ ಕವನಗಳ ವಾಚನ ನಡೆಯಿತು.

6.5.95ರಂದು ಶ್ರೀಮತಿ ಗಿರಿಜಾಶಾಸ್ತ್ರಿ ಅವರು ಸ್ವರಚಿತ ಕವನಗಳನ್ನು ವಾಚಿಸಿದರು.

ಹಸ್ತಪ್ರತಿಶಾಸ್ತ್ರತರಗತಿ :

ದಿನಾಂಕ 24.1.95ರಂದು ನಡೆದ ವಿಶೇಷೋಪನ್ಯಾಸ ಕಾರ್ಯಕ್ರಮದಲ್ಲಿ ವಿದ್ವಾನ್ ಟಿ. ಕೇಶವಭಟ್ಟರು ಹಸ್ತಪ್ರತಿಯ ಸಂಪ್ರತೀಕರಣದಲ್ಲಿ ವ್ಯಾಕರಣ ಹಾಗೂ ಛಂದಸ್ಸುಗಳ ಆವಶ್ಯಕತೆ" ಎಂಬ ವಿಷಯವನ್ನು ಕುರಿತು ಅತ್ಯಂತ ಉಪಯುಕ್ತವಾದ ಉಪನ್ಯಾಸ ನೀಡಿದರು.

30.3.95ರಂದು ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ಹಸ್ತಪ್ರತಿಶಾಸ್ತ್ರ ತರಗತಿಯ ಸಮಾರೋಪ ಸಮಾರಂಭವು ನೆರವೇರಿತು. ತರಗತಿಯ ವಿದ್ಯಾರ್ಥಿಗಳಿಂದ ಅವರ ಅನುಭವಗಳನ್ನು ಕುರಿತ ಭಾಷಣ. ಅಧ್ಯಕ್ಷರಿಂದ ತರಗತಿಗಳ ಉಪಯುಕ್ತತೆ ಕುರಿತು ಭಾಷಣ ಹಾಗೂ ಶುಭ ಹಾರೈಕೆ ನಡೆಯಿತು. ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್ ಅವರು ವಂದನಾರ್ಪಣೆ ಮಾಡಿದರು.

—o—

ಅಭಿನಂದನೆ

ಪ್ರಶಸ್ತಿಗಳು :

ಗೌರೀಶ ಕಾಯ್ಕಿಣಿ ಪ್ರಶಸ್ತಿ

ಖ್ಯಾತ ಪ್ರವಾಸಕಥನಕಾರ ಡಾ॥ ಕೃಷ್ಣಾನಂದ ಕಾಮತರನ್ನು ೧೯೯೪ನೆಯ ವರ್ಷದ ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ. ಅನೇಕ ಪ್ರವಾಸಕಥನ ಗ್ರಂಥಗಳ ರಚನೆಯಿಂದ ಪರಿಚಿತರಾದ ಕಾಮತರ 'ನಾನೂ ಅಮೇರಿಕಕ್ಕೆ ಹೋಗಿದ್ದೆ' ಎಂಬ ಗ್ರಂಥಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು 'ಪ್ರಾಣಿ ಪರಿಸರ' ಎಂಬುದಕ್ಕೆ ಶ್ರೇಷ್ಠ ವೈಜ್ಞಾನಿಕ ಕೃತಿ ಪ್ರಶಸ್ತಿ ಈ ಮೊದಲೇ ದೊರಕಿವೆ. ಕಾಯ್ಕಿಣಿ ಪ್ರಶಸ್ತಿಯು ರೂ. ೨೦೦೦-೦೦ ನಗದು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಗಳನ್ನು ಒಳಗೊಂಡಿರುತ್ತದೆ.

ವರದರಾಜ ಆದ್ಯ ಪ್ರಶಸ್ತಿ

ಮುಂಬಯಿ ಕರ್ನಾಟಕ ಸಂಘ ಪ್ರತಿವರ್ಷ ಕನ್ನಡ–ಮರಾಠೀಭಾಷಾ ಬಾಂಧವ್ಯಕ್ಕಾಗಿ ಮತ್ತು ಕನ್ನಡಿಗರ ಮಹಾರಾಷ್ಟ್ರೀಯರ ಸ್ನೇಹವೃದ್ಧಿಗಾಗಿ ಕೊಡತಕ್ಕ ವರದರಾಜ ಆದ್ಯ ಪ್ರಶಸ್ತಿಯನ್ನು ಈ ವರ್ಷ ಖ್ಯಾತ ಅನುವಾದಕಿ ಡಾ॥ ಉಮಾ ಕುಲಕರ್ಣಿ ಅವರಿಗೆ ನೀಡಲಾಗಿದೆ. ಉಮಾಕುಲಕರ್ಣಿಯವರು ತಮ್ಮ ಪತಿ ವಿರೂಪಾಕ್ಷ ಕುಲಕರ್ಣಿಯವರೊಂದಿಗೆ ಕನ್ನಡದ ಶ್ರೇಷ್ಠ ಲೇಖಕರ ಕೃತಿಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ಈ ಪ್ರಶಸ್ತಿ ಸಮಾರಂಭವನ್ನು ಮುಂಬಯಿಯಲ್ಲಿ ೧೯೯೫, ಮಾರ್ಚಿಯಲ್ಲಿ ಜರಗಿಸಲಾಯಿತು.

ಪಂಪ ಪ್ರಶಸ್ತಿ

ಕರ್ನಾಟಕ ರಾಜ್ಯ ಸರಕಾರದ ಅತ್ಯುನ್ನತ ಸಾಹಿತ್ಯ ಪುರಸ್ಕಾರವಾಗಿರುವ ಪಂಪ ಪ್ರಶಸ್ತಿಯಲ್ಲಿ ೧೯೯೩ನೆಯದು ಮರಣೋತ್ತರವಾಗಿ ದಿ॥ ಗೋಪಾಲಕೃಷ್ಣ ಅಡಿಗರಿಗೆ ಅವರ 'ಸುವರ್ಣ ಪುತ್ಥಳಿ' ಕೃತಿಗೆ ಕೊಡಲು ಘೋಷಿಸಲಾಗಿದೆ. ಅಡಿಗರ ಕಾವ್ಯಸೃಷ್ಟಿಯೆಂತೂ ಕನ್ನಡ ಕಾವ್ಯಲೋಕಕ್ಕೆ ಹೊಸ ಆಯಾಮಗಳನ್ನೂ ಅರ್ಥವಂತಿಕೆಯನ್ನೂ ಹೊಸ ಸೃಷ್ಟಿ ಕಾಣಿಕೆಯನ್ನೂ ತರುವುದರಲ್ಲಿ ಯಶಸ್ವಿಯಾಗಿದೆ. ಅವರನ್ನು 'ಜನಾಂಗದ ಕಣ್ಣು ತೆರೆಯಿಸಿದ ಕವಿ' ಎನ್ನುತ್ತಾರೆ.

ಬಿ. ಎಚ್. ಶ್ರೀ. ಪ್ರಶಸ್ತಿ

ಪ್ರೊ॥ ಬಿ. ಎಚ್. ಶ್ರೀಧರರ ನೆನಪಿನಲ್ಲಿ ೧೯೯೦ರಲ್ಲಿ ಪ್ರಾರಂಭಗೊಂಡ ಈ ಪ್ರಶಸ್ತಿ ಎರಡು ಸಾವಿರ ರೂ. ನಗದು, ನೆನಪಿನ ಕಾಣಿಕೆ ಮತ್ತು ಪ್ರಶಸ್ತಿಪತ್ರವನ್ನು

ಒಳಗೊಂಡಿದೆ. ಈ ಪ್ರಶಸ್ತಿ ಈ ವರ್ಷ ಡಾ|| ಎಚ್. ಎಸ್. ವೆಂಕಟೇಶಮೂರ್ತಿಯವರ 'ಎಷ್ಟೊಂದು ಮುಗಿಲು' ಎಂಬ ಕವನಸಂಕಲನಕ್ಕೆ ಬಂದಿರುತ್ತದೆ. ಈ ಮೊದಲೇ ರಾಜ್ಯದ ಹಾಗೂ ಕೇಂದ್ರದ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿರುವ ವೆಂಕಟೇಶಮೂರ್ತಿಯವರ ಹಿರಿಮೆಯ ನದಿಗೆ ಈ ಪ್ರಶಸ್ತಿಯ ಉಪನದಿ ಸೇರಿ ಮಹಾನದಿಯಾದುದು ಕನ್ನಡಿಗರಿಗೆ ಅಭಿಮಾನದ ಸಂಗತಿ.

ಮಾಸ್ತಿ ಪ್ರಶಸ್ತಿ

೧೯೯೫ನೆಯ ವರ್ಷದ ಡಾ|| ಮಾಸ್ತಿ ಪ್ರಶಸ್ತಿಯನ್ನು ಕನ್ನಡದ ಖ್ಯಾತ ಕಾದಂಬರಿಕಾರರಾದ ಡಾ|| ಎಸ್. ಎಲ್. ಭೈರಪ್ಪನವರಿಗೆ ನೀಡಲಾಗಿದೆ. ೧೯೯೫ ಜೂನ್ 11 ರಂದು ಬೆಂಗಳೂರಿನಲ್ಲಿ ನಡೆದ ಈ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ೧೫ ಸಾವಿರ ರೂ. ಸಮೇತ ಮಾಸ್ತಿ ಸಂಸ್ಮರಣ ಫಲಕದೊಂದಿಗೆ ಇದನ್ನು ನೀಡಿ ಸನ್ಮಾನಿಸಲಾಗಿದೆ.

ಚಿದಾನಂದ ಪ್ರಶಸ್ತಿ

೧೯೯೫ರ ಚಿದಾನಂದ ಪ್ರಶಸ್ತಿಗಾಗಿ ಡಾ|| ಆರ್. ಸಿ. ಹಿರೇಮಠರನ್ನು ಆಯ್ಕೆ ಮಾಡಲಾಗಿದ್ದು, ಈ ಪ್ರಶಸ್ತಿಪ್ರದಾನ ಸಮಾರಂಭವು ೧೦-೫-೯೫ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನಡೆಯಿತು. ಇದು ಮೂರನೆಯದು. ೧೯೯೩ರಲ್ಲಿ ಈ ಪ್ರಶಸ್ತಿಯನ್ನು ಡಾ|| ಜಿ. ಎಸ್. ಗಾಯಿ ಅವರಿಗೆ ಮತ್ತು ೧೯೯೪ರಲ್ಲಿ ಇದನ್ನು ಶ್ರೀ ಸೇಡಿಯಾಪು ಕೃಷ್ಣಭಟ್ಟರಿಗೆ ನೀಡಲಾಗಿದೆ. ಡಾ|| ಹಾ.ಮಾ. ನಾಯಕರ ಅಧ್ಯಕ್ಷತೆಯಲ್ಲಿ ಶ್ರೀ ನಿಟ್ಟೂರು ಶ್ರೀನಿವಾಸ ರಾಯರು ಡಾ|| ಹಿರೇಮಠರಿಗೆ ಪ್ರಶಸ್ತಿಪ್ರದಾನ ಮಾಡಿದರು. ಡಾ|| ಎಂ. ಎಂ. ಕಲಬುರ್ಗಿಯವರು ಅಭಿನಂದನ ಭಾಷಣ ಮಾಡಿದರು.

—೦—

ಶ್ರದ್ಧಾಂಜಲಿ

ಶಾಸನ ಶಾಸ್ತ್ರಜ್ಞ ಡಾ|| ಗಾಯಿ

ಕನ್ನಡ ನಿಘಂಟು ಸಂಪಾದಕ ಸಮಿತಿಯ ಅಧ್ಯಕ್ಷರಾದ ಶಾಸನತಜ್ಞ ಡಾ|| ಜಿ. ಎಸ್. ಗಾಯಿ ಅವರು ೬-೨-೧೯೯೫ ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ವಿಧಿವಶರಾದರು. ಅವರಿಗೆ ೭೮ ವರ್ಷ ವಯಸ್ಸಾಗಿದ್ದಿತು, ೧೯೯೧ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದ್ದಿತು. ಅವರು ಸಂಶೋಧಿಸಿ ಸಿದ್ಧಪಡಿಸಿದ ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ್ ಮತ್ತು ಇಂಟ್ರೊಡಕ್ಷನ್ ಟು ಇಂಡಿಯನ್ ಎಪಿಗ್ರಫಿ ಎಂಬುವು ತುಂಬ ಮಹತ್ತ್ವವುಳ್ಳವು. ಭಾಷಾಶಾಸ್ತ್ರ, ಇತಿಹಾಸ, ಸಂಸ್ಕೃತಿ, ಪುರಾತತ್ತ್ವ ಹಾಗೂ ಶಾಸನಶಾಸ್ತ್ರ ವಿಚಾರವಾಗಿ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ವಿದೇಶಗಳಲ್ಲಿಯೂ ನಡೆದ ಅಂತಾರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಪ್ರಬಂಧಮಂಡನೆ ಮಾಡಿದ್ದಾರಲ್ಲದೆ ಹತ್ತಕ್ಕೆಮಿಕ್ಕಿ ಮೌಲಿಕ ಗ್ರಂಥ ರಚನೆ ಮಾಡಿದ್ದಾರೆ.

ವೇಣುಗೋಪಾಲ ಸೊರಬ

ಖ್ಯಾತ ಕತೆಗಾರ ಮತ್ತು ಕವಿಯಾದ ವೇಣುಗೋಪಾಲ ಸೊರಬ ಅವರು ೨೧-೩-೧೯೯೫ರಂದು ಹೃದಯಾಘಾತದಿಂದ ದೇಹತ್ಯಾಗ ಮಾಡಿದರು. ಅವರಿಗೆ ೫೮ ವರ್ಷ ವಯಸ್ಸಾಗಿದ್ದಿತು. ಬೆಂಗಳೂರಿನ ಎನ್. ಎಂ. ಕೆ. ಆರ್. ವಿ. ಕಾಲೇಜಿನಲ್ಲಿ ಕಳೆದ ಆರು ವರ್ಷಗಳಿಂದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಸಕುಟುಂಬರಾಗಿ ರಾಮೇಶ್ವರ ಯಾತ್ರೆ ಹೋಗಿ, ಹಿಂದಿರುಗುತ್ತಾ ತಮಿಳುನಾಡಿನ ಸೇಲಂ ಬಳಿಯ ನಾಮಕ್ಕಲ್ ಬಸ್‌ನಿಲ್ದಾಣದಲ್ಲಿ ಕೊನೆಯುಸಿರೆಳೆದರು. ಕವನ, ವಿಮರ್ಶೆ, ಕಾದಂಬರಿ, ಸಣ್ಣಕತೆ, ನಾಟಕ, ಅನುವಾದ ಕೃತಿ–ಅವರ ರಚನೆಯ ಕೃತಿ ಪ್ರಕಾರಗಳಾಗಿವೆ.

ಜಾನಪದ ಜಂಗಮ ಜೀ.ಶಂ.ಪ.

ಜಾನಪದ ಮಹಾ ವಿದ್ವಾಂಸರಾದ ಡಾ|| ಜಿ. ಶಂ. ಪರಮಶಿವಯ್ಯನವರು ೧೭.೬.೧೯೯೫ರಂದು ನಮ್ಮನ್ನಗಲಿದರು. ಆಗ ಅವರಿಗೆ ೬೨ ವರ್ಷ ವಯಸ್ಸು (ಜನನ: ೧೨.೧೧.೧೯೩೩). ಖಾಸಗಿ ಮಾಧ್ಯಮಿಕ ಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿದ ಇವರು ಮುಂದೆ ಕಾಲೇಜು ಅಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕರೂ ಆಮೇಲೆ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಆಗಿದ್ದರು. ೧೯೭೮ರಿಂದ ಜಾನಪದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ೧೯೯೧

ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದರು. ಅದೇ ವರ್ಷ 'ಜಾನಪದ ಸಂಭಾವನೆ' ಎಂಬ ಅಭಿನಂದನ ಗ್ರಂಥ ಪ್ರಕಟವಾಗಿದೆ. ಅವರ ಕೃತಿಗಳ ಸಂಖ್ಯೆ ಲಂನ್ನು ಮೀರಿದೆ. ಅವುಗಳಲ್ಲಿ ಜಾನಪದ ಪ್ರಕಾರವೇ ಹೆಚ್ಚು. ಸೃಜನಶೀಲ ಸಾಹಿತಿಯೂ ಆಗಿ ಕತೆ, ಪ್ರಬಂಧ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಜಾನಪದ ಸಂಶೋಧನೆ, ಕ್ಷೇತ್ರಕಾರ್ಯ, ಪ್ರಕಟನೆ, ಸಣ್ಣಾಟ-ದೊಡ್ಡಾಟ, ತೊಗಲು ಗೊಂಬೆಯಾಟಗಳ ಕ್ಷೇತ್ರಗಳನ್ನು ಬೆಳಗಿಸಿದ್ದಾರೆ.

ನಮ್ಮನ್ನಗಲಿದ ಇವರೆಲ್ಲರಿಗೂ ಬಿ.ಎಂ.ಶ್ರೀ. ಪ್ರತಿಷ್ಠಾನ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

—o—

ಈ ಸಂಚಿಕೆಯ ಲೇಖಕರು

1. **ಪ್ರೊ|| ಗಗೇ೯ಶ್ವರಿ ವೆಂಕಟಸುಬ್ಬಯ್ಯ**
20, 'ಗಣೇಶಧಾಮ' 2ನೇ ಕ್ರಾಸ್, 9ನೇ ಮೈನ್,
ರಾಜಾಮಹಲ್ ವಿಲಾಸ ಬಡಾವಣೆ,
ಬೆಂಗಳೂರು-560 083

2. **ತಾಳ್ತಜೆ ರಘುಪತಿ**
3-24 (2) ಕೆ.ಪಿ.ಟಿ. ಎದುರು
ಕದ್ರಿ, ಮಂಗಳೂರು-4

3. **ಟಿ. ಕೇಶವಭಟ್ಟ**
764, 15ನೇ ಮೈನ್, 2ನೇ ಹಂತ
ಬನಶಂಕರಿ, ಬೆಂಗಳೂರು-560 078

4. **ಸದ್ಯೋಜಾತಮೂರ್ತಿ**
ಜಯಶ್ರೀ ಗ್ರಂಥ ಪ್ರಸರಣಾಲಯ
ಗ್ರಂಥ ಗಂಗೋತ್ರಿ ಪ್ರಕಾಶನ (ಇನ್ಕ್)
ಅಭ್ಯುದಯ, 129, ವಿಶ್ವಕರ್ಮಕಾಲೋನಿ,
ಗಾಯಿತ್ರಿಪುರಂ, ಮೈಸೂರು-570 019

5. **ತಾಳ್ತಜೆ ಕೃಷ್ಣಭಟ್ಟ**
ಪಂಜಳ ಮನೆ, ಅಂಚೆ ಉಪ್ಪಿನಂಗಡಿ
ದಕ್ಷಿಣ ಕನ್ನಡ-574 241

6. **ರಾಜೇಶ್ವರಿ ಜಯಕೃಷ್ಣ**
ನಂ. 23, 11ನೇ ಕ್ರಾಸ್, ಕೃಷ್ಣಪ್ಪ-ಲೇ-ಔಟ್,
ಶ್ರೀನಗರ, ಬೆಂಗಳೂರು-560 050

7. **ಎಸ್. ತಿರುಮಲೇಶ್ವರಭಟ್ಟ**
ಶುಭೋದಯ ಅಂಚೆ, ಆನೆಕಲ್ಲು ಹಾದಿ,
ಮಂಜೇಶ್ವರ-671 323

8. **ಶ್ರೀಕಾಂತಂ ನಾಗೇಂದ್ರಶಾಸ್ತ್ರಿ**
ನಂ. 63/1, ಲಲಿತನಿವಾಸ,
ಸುಭಾಸ್‌ಚಂದ್ರಬೋಸ್ ರೋಡ್, 1ನೇ ಕ್ರಾಸ್,
ಮತ್ತಿಕೆರೆ, ಬೆಂಗಳೂರು-560 054

9. ಸೇಡಿಯಾಪು ಕೃಷ್ಣಭಟ್ಟ
c/o ಪಾದೇಕಲ್ಲು ವಿಷ್ಣುಭಟ್ಟ, ಪ್ರಾಂಶುಪಾಲರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಉಡುಪಿ (ದ.ಕ. ಜಿಲ್ಲೆ)

10. ಎಸ್. ಜಗನ್ನಾಥ
ಶಾಂಡಿಲ್ಯ 2025, ಸರಸ್ವತೀಪುರಂ, 1ನೇ ಮೈನ್,
5ನೇ ಕ್ರಾಸ್, ಪಾರಸ್‌ಟೆಕ್ಸ್‌ಟೈಲ್ಸ್ ಎದುರು,
ಮೈಸೂರು–570 009

11. ಡಾ|| ಭೀಮರಾವ್ ಚಿಟಗುಪ್ಪಿ
12/64, ತ್ರಿಮೂರ್ತಿ, ಕೇಲುಸ್ಕರ್ ರೋಡ್,
ಶಿವಾಜಿ ಪಾರ್ಕ್, ಮುಂಬಯಿ–28

12. ಕೌಲಗಿ ಶೇಷಾಚಾರ್
"ಅಪರ್ಣಾ" 5/1, ಸೀತಾವಿಲಾಸರಸ್ತೆ,
ಮರಿಮಲ್ಲಪ್ಪ ಜೂನಿಯರ್ ಕಾಲೇಜು ಎದುರುಗಡೆ,
ಮೈಸೂರು–570 024

13. ಡಾ|| ಸಿ. ನಾಗಭೂಷಣಂ
ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ–585 106

14. ಅಜಾರು ನಾಗರಾಜರಾಯ
ಅಜಾರು ಮನೆ, ಅಂಚೆ-ಕಟೀಲು,
ದಕ್ಷಿಣ ಕನ್ನಡ–574 148

15. ಜಿ. ಅಶ್ವತ್ಥನಾರಾಯಣ
ಕನ್ನಡ ವಿಭಾಗ, ಮುಖ್ಯಸ್ಥರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಗಡಿ

16. ಕುಮಾರ ನಿಜಗುಣ
ಚಿಲುಕವಾಡಿ, ಕೊಳ್ಳೇಗಾಲ ತಾಲ್ಲೂಕು–571 442

17. ಡಾ|| ಸರಗು ಕೃಷ್ಣಮೂರ್ತಿ
ಆಚಾರ್ಯರು, ಹಿಂದಿ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು–560 056

ಪ್ರತಿಷ್ಠಾನದ ಗೌರವ ಸದಸ್ಯರು

1) ಪ್ರೊ|| ಎ. ಎನ್. ಮೂರ್ತಿರಾವ್ 2) ಡಾ||ಪು.ತಿ.ನ. 3) ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ 4) ಪ್ರೊ|| ಎಸ್. ವಿ. ಪರಮೇಶ್ವರಭಟ್ಟ 5) ಪ್ರೊ|| ತ. ಸು. ಶಾಮರಾವ್ 6) ಡಾ|| ಜಿ. ಎಸ್. ದೀಕ್ಷಿತ್

ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಧಾರಣವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ಕಳಿಸಿದರೆ ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, ಬೆಂಗಳೂರು. 5) ಬಸವ ಪಥ, ಬೆಂಗಳೂರು. 6) ಶಂಕರಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು. 8) ಜಾನಪದ ಜಗತ್ತು. ಬೆಂಗಳೂರು. 9) ಅಪರಂಜಿ. ಬೆಂಗಳೂರು 10) ಕರ್ನಾಟಕ ಭಾರತಿ, ಧಾರವಾಡ. 11) ಸುಗುಣಮಾಲಾ. ಉಡುಪಿ. 12) ಸತ್ಯಶುದ್ಧ ಕಾಯಕ, ಸಿರಿಗೆರೆ. 13) ತರಳಬಾಳು. ಸಿರಿಗೆರೆ.

ಕರ್ನಾಟಕ ಲೋಚನ ಚಂದಾ ವಿವರ

ವಾರ್ಷಿಕ ಚಂದಾ	:	ವ್ಯಕ್ತಿಗಳಿಗೆ ರೂ. 15-00 ಗ್ರಂಥಾಲಯ, ಸಂಘ-ಸಂಸ್ಥೆಗಳಿಗೆ ರೂ. 25-00
ಆಜೀವ	:	ರೂ. 150-00
		ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ
ಪ್ರತಿಷ್ಠಾನದ ಸದಸ್ಯತ್ವ	:	ವಾರ್ಷಿಕ ರೂ. 25-00 ಆಜೀವ ರೂ. 250-00
ಬಿಡಿ ಪ್ರತಿ :		ರೂ. 10-00

KARNATAKA LOCHANA Half Yearly Journal, Published by B. M. Sri. Smaraka Prathishthana, 54, M. V. Seetharamaiah Road, Masthi Nagara, (Gavipuram Extension), Bangalore-19. Printed by : Prabhu Mudrana, Bangalore-78 Ph : 6640976

Reg. No. 03260/23/2/ALTC/88 KARNATAKA LOCHANA

ಪ್ರತಿಷ್ಠಾನದ ಈಚಿನ ಪ್ರಕಟಣೆಗಳು

		ಉತ್ತಮ	ಸಾದಾ
1.	ಸಂಗಮರ ಕಾಲದ ವಿಜಯನಗರ		75–00
2.	ಕುಮಾರವ್ಯಾಸ ಭಾರತ ಸಂಗ್ರಹ	75–00	40–00
3.	ಕಾವ್ಯ-ಇತಿಹಾಸ (ದತ್ತಿ ಉಪನ್ಯಾಸಗಳು)		10–00
4.	ಶಂಬಾ ಕೃತಿ ಸಮೀಕ್ಷೆ		35–00
5.	ಎಂ. ವಿ. ಸೀ. ಸಂಸ್ಮರಣೆ		25–00
6.	ವೈಚಾರಿಕ ಜಾಗೃತಿ		15–00
7.	ಹಸ್ತಪ್ರತಿಶಾಸ್ತ್ರ ಪರಿಚಯ		15–00
8.	ಸಂವಿಧಾನ ಮತ್ತು ಕಾನೂನು		20–00
9.	ಮಾಸ್ತಿ ಕಥಾ ಸಮೀಕ್ಷೆ		20–00
10.	ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ)		15.00
11.	ಬಸವಪ್ಪ ಶಾಸ್ತ್ರಿಗಳು		25.00
12.	ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ–1, ಸಮಗ್ರ ಸಂಶೋಧನಾ ಲೇಖನಗಳು)	100	80.00
13.	ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ)	100.00	80.00

ಸಿದ್ಧತೆಯಲ್ಲಿ

1.	ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ)	35.00
2.	ತೌಲನಿಕ ಸಾಹಿತ್ಯ	
3.	ಸಾಹಿತ್ಯ ಮತ್ತು ಮನಶ್ಶಾಸ್ತ್ರ	
4.	ಶಾಸನ ಪದ್ಯ	
5.	ದತ್ತಿ ಉಪನ್ಯಾಸಗಳು	
6.	ತಿರುಕ್ಕುರಳ್ (ಕನ್ನಡಾನುವಾದ)	
7.	ಪದ್ಮಿನಿ ಕಲ್ಯಾಣ (ಸಂಪಾದಿತ)	